DEMAND No. 54.—ADVANCES AND LOANS.

Q. Loans and Advances by State and Union Territory Governments.

"That a further sum not exceeding Rs. 39,56,793 be granted to the Government to defray the charges which will come in course of payment during the financial year for the period ending 31st day of March 1965, in respect of 'Loans and Advances by State and Union Territory Government'."

BUDGET ESTIMATES FOR 1965-66—DEMANDS FOR GRANTS.

DEMAND No. 34.—MOTOR VEHICLE ACTS— ADMINISTRATION.

Sri R. M. PATIL (Minister for Home) Sir, on the recommendation of the Governor of Mysore, I beg to move:

"That a sum not exceeding Rs. 15,23,000 be granted to the Government to defray the charges which will come in course of payment during the financial year for the period ending 31st day of March 1966, in respect of 'Taxes on Vehicles.'

Mr. SPEAKER.—Motion moved:

"That a sum not exceeding Rs. 15,23,000 be granted to the Government to defray the charges which will come in course of payment during the financial year for the period ending 31st day of March 1966, in respect of 'Taxes on Vehicles."

The other Demands, *viz.*, Nos. 12, 13 and 41A are also deemed to have been moved and the whole thing is open for debate.

†ಶ್ರೀ ಕೆ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದ ಪೋಲೀಸು ಖಾತೆಗೆ ಸಂಬಂಧಪಟ್ಟ ಹಾಗೆ ಸುಮಾರು 5½ ಕೋಟಿ ರೂಪಾಯಿಗಳ ಬೇಡಿಕೆಯನ್ನು ಈ ಸಭೆಯ ಒಪ್ಪಿಗೆಗಾಗಿ ಸರ್ಕಾರದವರು ಇಲ್ಲಿ ಈಗ ಮಂಡಿಸಿದ್ದಾರೆ. ಈ ರಾಜ್ಯದಲ್ಲಿ ಈ ಸರ್ಕಾರ ಬಂದ ಮೇಲೆ ಈಗಿನ ಗೃಹ ಮಂತ್ರಿಗಳು ಈ ಪೋಲೀಸು ಖಾತೆಯನ್ನು ವಹಿಸಿಕೊಂಡ ಮೇಲೆ ಅನೇಕ ಅನ್ಯಾಯಗಳು, ಅತ್ಯಾಚಾರಗಳು ಮತ್ತು ದಬ್ಬಾಳಿಕೆಗಳು ಈಗ ಮೂರು ವರ್ಷಗಳಿಂದಲೂ ಈ ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಾ ಬಂದಿವೆ. ಈ ಪೋಲೀಸು ಇಲಾಖೆಯ ಕೆಲಸ ಕಾರ್ಯಗಳನ್ನು ಬಹಳ ಜವಾಬ್ದಾರಿಯಿಂದ ನಿರ್ವಹಣೆ ಮಾಡುತ್ತಾರೆಂದು ಈ ಸಭೆಯವರು ಮಾನ್ಯ ಗೃಹಮಂತ್ರಿಗಳ ಮೇಲೆ ನಂಬಿಕೆಯನ್ನು ಇಟ್ಟಿದ್ದರು. ಆದರೆ ದುರದೃಷ್ಟವಶಾತ್ ಈ ರಾಜ್ಯದಲ್ಲಿ ಪೋಲೀಸು ಇಲಾಖೆ ಬಹಳ ದುರ್ಬಲವಾಗಿದೆ ಎಂದು ಬಹಳ ವಿಷಾದದಿಂದ ನಾನು ಈ ಸಭೆಯಲ್ಲಿ ಹೇಳಬಯಸುತ್ತೇನೆ. ಈ ರಾಜ್ಯದಲ್ಲಿ ಪೋಲೀಸು ಇಲಾಖೆಯಲ್ಲಿ ಕಾರ್ಯ ಚಟುವಟಿಕೆಗಳು ಎಷ್ಟರಮಟ್ಟಿಗೆ ನಡೆಯುತ್ತವೆ ಎಂಬುದನ್ನು ಹೇಳುವುದಾದರೆ ಈ ದೇಶದಲ್ಲಿ ಪೋಲೀಸು ಇಲಾಖೆಯ ಮೇಲೆ ಅನೇಕ ಭ್ರಷ್ಟಾಚಾರದ ಆರೋಪಣೆಗಳು ಬಂದಿವೆ. ಪೋಲೀಸು ಇಲಾಖೆ ತನ್ನ ಕರ್ತವ್ಯವನ್ನು ನಿರ್ವಹಣೆ ಮಾಡುವುದರಲ್ಲಿ ಅಸಮರ್ಥವಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇನೆಂದರೆ, ಈಗ ಮೊನ್ನೆತಾನೆ ಪಂಜಾಬಿನಲ್ಲಿ ಒಬ್ಬ ಉನ್ನತ ಮುಖಂಡರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಕೈರಾನರ ಕೊಲೆ ನಡೆಯಿತು. ಈ ಕೊಲೆಯ ಬಗ್ಗೆ ದೇಶದಲ್ಲಿ ಒಂದು ಸಂಶಯ ಮೂಡಿರು

ವುದನ್ನು ನೋಡಿದರೆ ಪೋಲೀಸು ಇಲಾಖೆಯ ಒಂದು ಮಟ್ಟ, ಪೋಲೀಸು ಇಲಾಖೆಯ ದಕ್ಷತೆ ಎಲ್ಲಿಗೆ ಹೋಗಿದೆ ಎಂಬುದು ಗೊತ್ತಾಗುತ್ತದೆ. ಬಹು ಮುಖ್ಯವಾದ ಈ ಕೊಲೆಯ ವಿಚಾರದಲ್ಲಿ ಪಾರ್ಲಿಮೆಂಟ್ ಸದಸ್ಯರು ಲೋಕಸಭೆಯಲ್ಲಿ ಪ್ರಶ್ನೆಯನ್ನು ಹಾಕಿದರೂ ಕೂಡ ಈ ವಿಚಾರದಲ್ಲಿ ಸರಿಯಾದ ತನಿಖೆಯನ್ನು ನಡೆಸದೆ ಇರುವುದನ್ನು ನೋಡಿದರೆ ಈ ದೇಶದಲ್ಲಿ ಪೋಲೀಸು ಇಲಾಖೆ ಎಷ್ಟು ಅಸಮರ್ಥವಾಗಿದೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ.

Mr. SPEAKER.—I cannot allow criticism against the Police Departments of other states here, as they are not here to defend themselves.

ಶ್ರೀ ಕೆ. ಲಕ್ಕಪ್ಪ.—ಬೇರೆ ರಾಜ್ಯದಲ್ಲಿ ಪೋಲೀಸಿನವರಲ್ಲಿ ಸಮರ್ಥತೆ ದಕ್ಷತೆ ಇಲ್ಲದೆ ಇರುವಾಗ ಈ ನಮ್ಮ ಮೈಸೂರು ಸಂಸ್ಥಾನದಲ್ಲಿ ಪೋಲೀಸು ಇಲಾಖೆಯವರು ಯಾವ ರೀತಿ ಸಮರ್ಥತೆಯಿಂದ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ನಾವೂ ಕೂಡ ಯೋಚನೆ ಮಾಡಬೇಕಾಗಿದೆ. ಈ ರಾಜ್ಯದಲ್ಲಿ ಆಹಾರದ ನೀತಿಗೋಸ್ಕರ ಅನೇಕ ಚಳುವಳಿಗಳು ಮತ್ತು ಆಂದೋಳನಗಳು ನಡೆದವು. ಈ ರಾಜ್ಯದಲ್ಲಿ ಅನ್ನದ ಹಾಹಾಕಾರ ಉಂಟಾಗಿ ಬಡವರು ಹೊಟ್ಟೆಗೆ ಅನ್ನವನ್ನು ಕೊಡಿ ಎಂದು ಸರ್ಕಾರದವರನ್ನು ಕೇಳುವುದಕ್ಕೆ ಬಂದಾಗ ಈ ದೇಶದಲ್ಲಿ ದೊಡ್ಡ ಕ್ರಾಂತಿ ನಡೆಯಿತು. ದೇಶದಲ್ಲಿ ಪ್ರಜಾಸತ್ತಾತ್ಮಕವಾದ ರೀತಿಯಲ್ಲಿ ಜನತೆಯು ಅನ್ನವನ್ನು ಕೊಡಬೇಕೆಂದು ಚಳುವಳಿ ಹೂಡಿದಾಗ, ಹಸಿದ ಹೊಟ್ಟೆಯನ್ನು ತುಂಬಿಸಬೇಕು ಎಂದು ಚಳುವಳಿಯನ್ನು ನಡೆಸಿದಾಗ ಚಳುವಳಿಕಾರರ ಮೇಲೆ ಪೋಲೀಸು ಇಲಾಖೆಯವರು ಯಾವ ರೀತಿ ವರ್ತಿಸಿದರು ಎಂಬುದನ್ನು ನಾವು ನೋಡಬೇಕಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಪ್ರಜಾಪತ್ತಾತ್ಮಕವಾದ ರೀತಿಯಲ್ಲಿ ಅನ್ನವನ್ನು ಕೊಡಬೇಕೆಂದು ಹೇಳಿದರು. ಅದರ ಅರ್ಥ ನನಗೆ ಗೊತ್ತಾಗಲಿಲ್ಲ.

ಶ್ರೀ ಕೆ. ಲಕ್ಕಪ್ಪ.—ಹೌದು, ಹೌದು. ಈಗ ನಿಮಗೆ ಗೊತ್ತಾಗುವುದಿಲ್ಲ. ಇನ್‌ಫಾರ್ಮಲ್ ರೇಶನಿಂಗ್ ಮಾಡಿದ ರೀತಿ ಅಂತ ತಿಳಿದುಕೊಂಡಿದ್ದೀರಿ. ಎರಡು ಸಾವಿರ ಜನ ತಮ್ಮ ಮನೆ ಮುಂದೆ ಪ್ರದರ್ಶನ ನಡೆಸಿದರು. ಏತಕ್ಕೋಸ್ಕರ ಮಾಡಿದರು ಎಂಬ ಅರಿವು ತಮಗೆ ಗೊತ್ತಿದೆ. ಮಾನ್ಯ ರೆವಿನ್ಯು ಸಚಿವರ ಡಿಮ್ಯಾಂಡು ಇಲ್ಲಿಲ್ಲ. ಅವರು ಏತಕ್ಕೆ ಇಂಟರ್‌ಫಿಯರ್ ಮಾಡುತ್ತಿದ್ದಾರೆ ?

ಆಹಾರ ಸಮಸ್ಯೆ ಬಂದಾಗ, ದೇಶದಲ್ಲಿ ಎಲ್ಲರೂ ಒಂದೇ ಕೂಗಿನಿಂದ ಆಹಾರ ಸಮಸ್ಯೆಯನ್ನು ಬಗೆಹರಿಸಬೇಕು, ಆಹಾರವನ್ನು ತಂದು ಶೇಖರಿಸಬೇಕು, ಗೋಧಿಯನ್ನು ಒದಗಿಸಬೇಕು ಅಂತ ಹೇಳಿ ಚಳುವಳಿ ಕೂಡ ನಡೆಸಿದರು. ಆದರೆ ಅವರಿಗೆ ಕೊಟ್ಟಂಥ ರಕ್ಷಣೆ ನಮ್ಮ ಪೋಲೀಸರು ಏನು ಎನ್ನುವುದನ್ನು ಪ್ರಶ್ನೆ ಮಾಡುತ್ತೇನೆ. ಭಾರತ ಬಂದ್ ಚಳುವಳಿಯನ್ನು ಎಲ್ಲಾ ರಾಜಕೀಯ ಪಕ್ಷಗಳೂ ಪ್ರಜಾಪ್ರಭುತ್ವದ ನೀತಿಯಲ್ಲಿ, ಬಹಳ ಶಾಂತ ರೀತಿಯಿಂದ, ದೇಶರಕ್ಷಣೆಗೋಸ್ಕರವಾಗಿ ಚಳುವಳಿ ನಡೆಸಿದವರ ಮೇಲೆ ಗದಾಪ್ರಹಾರ ಮಾಡಿದ ನೀತಿಯನ್ನು ನಾನು ಗೃಹ ಮಂತ್ರಿಗಳಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಕೆಲವು ಕಡೆ ಅನೇಕ ಗೋಳಿಬಾರುಗಳು ನಡೆದಿವೆ; ಕೆಲವು ಕಡೆ ಪ್ರಾಣವನ್ನು ತೆಗೆದುಕೊಂಡಿರತಕ್ಕಂಥ ದೃಶ್ಯವನ್ನು ನಾವು ನೋಡಿದ್ದೇವೆ. ಭಾರತ್-ಬಂದ್ ಚಳುವಳಿಯನ್ನು ದೇಶಾದ್ಯಂತ ಸರಕಾರದ ನೀತಿಯನ್ನು ಪ್ರತಿಭಟಿಸಿ ಆಚರಿಸಿದರು; ದೇಶದಲ್ಲೆಲ್ಲಾ ಎಲ್ಲಾ ಅಂಗಡಿಗಳನ್ನು ಮುಚ್ಚಿದರು ; ಆಗ ಎಲ್ಲಾ ಚಟುವಟಿಕೆಗಳೂ ನಿಂತಿದ್ದವು. ಆಗ ಇದನ್ನು ಹತ್ತಿಕ್ಕಬೇಕು, ಪ್ರಜಾಪ್ರಭುತ್ವ ನೀತಿಯಲ್ಲಿ ಶಾಂತ ರೀತಿಯಿಂದ ಚಳುವಳಿ ಮಾಡತಕ್ಕಂಥ ಜನತೆಯ ಮೇಲೆ ಗದಾಪ್ರಹಾರ ಮಾಡಬೇಕೆಂಬ ಉದ್ದೇಶದಿಂದ ಪೋಲೀಸರನ್ನು ಬಿಟ್ಟು ಗುಂಡಿಟ್ಟು ಕೊಲೆ ಮಾಡಿಸಿತತಕ್ಕಂಥ ಆಪಾದನೆಗಳು ಅನೇಕ ಬಂದಿವೆ. ಈ ಬಗ್ಗೆ ನ್ಯಾಯಾಂಗ ವಿಚಾರಣೆಯನ್ನು ಮಾಡಿಸಬೇಕು ನ್ಯಾಯಾಂಗ ತನಿಖೆಯನ್ನು ನಡೆಸಬೇಕು ಎಂದು ನಾವು ಕೇಳಿದ್ದೆವು.

(*The Hon'ble Home Minister rose to intervene.*)

I am not yielding. ನಿಮ್ಮ ಹತ್ತಿರ ಬಂದಾಗ ಹೊರದೂಡಿಸಿ. ನಾವು ಬರುವುದಿಲ್ಲ, ಹೊರಟು ಹೋಗುತ್ತೇವೆ.

ಏಕೆ ಹೇಳುತ್ತಿದ್ದೇನೆಂದರೆ, ಆ ಚಳುವಳಿ ದೇಶದಲ್ಲಿ ಪರಿಣಾಮಕಾರಿಯಾದ ರೀತಿಯಲ್ಲಿ ನಡೆಯಿತು. ಬಳ್ಳಾರಿಯಲ್ಲಿ ಸುಮಾರು 20-30 ಸಹಸ್ರ ಜನ ಚಳುವಳಿಯಲ್ಲಿ ಭಾಗ ವಹಿಸಿದರು. ಅವರು ಶಾಂತ ರೀತಿಯಲ್ಲಿ ಚಳುವಳಿಯಲ್ಲಿ ಭಾಗವಹಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕು ಎಂದು ರಾಜ್ಯದಲ್ಲಿ ಚಳುವಳಿಯನ್ನು ಹೂಡಿದರೆ, ಆ ಸಂದರ್ಭದಲ್ಲಿ ಇವರು ಮಾಡಿದ್ದು ಏನು ಸ್ವಾಮಿ. ಸರಕಾರದವರು ಅವರನ್ನು ಹತ್ತಿಕ್ಕುವುದಕ್ಕೋಸ್ಕರ ಪೋಲೀಸರನ್ನು ಬಿಟ್ಟರು.

Sri R. M. PATIL.—In respect of that I have already made a statement on the Floor of this House. Again the same thing is dealt with.

Sri K. LAKKAPPA.—No, Sir. I am not yielding.

ಈ ರೀತಿಯಾಗಿ ಹತ್ತಿಕ್ಕತಕ್ಕಂಥ ರೀತಿನೀತಿಯನ್ನು ಈ ಸಭೆಯಲ್ಲಿ ಖಂಡನೆ ಮಾಡಬೇಕಾಗಿದೆ. 30-40 ಜನ ಸಂಸ್ಥಾನದಲ್ಲಿ ಜೈಲಿನಲ್ಲಿದ್ದಾರೆ. ಈ ಜೈಲಿನಲ್ಲಿರತಕ್ಕಂಥ ಜನ ಏನು ಅಪರಾಧ ಮಾಡಿದ್ದಾರೆ? ಅವರುಗಳನ್ನು ಜೈಲಿನಲ್ಲಿ ಹಾಕುವುದಕ್ಕೆ ಕಾರಣವೇನು ಎಂದು ನಾನು ಪ್ರಶ್ನೆ ಮಾಡುತ್ತೇನೆ. ಈ ದಿವಸ ಭಾರತ ರಕ್ಷಣಾ ಕಾನೂನನ್ನು ಉಪಯೋಗಿಸಿಕೊಂಡು ಅನೇಕ ತೊಂದರೆಗಳನ್ನೂ ಕಿರುಕುಳಗಳನ್ನೂ ಕೊಡುತ್ತಿದ್ದಾರೆ. ನಾನು ನೋಡಿದ್ದೇನೆ. ಈ ದಿವಸ ಈ ಮಾನ್ಯ ಸಭೆಯಲ್ಲಿ ಒಂದು ಪ್ರಶ್ನೆ ಬಂದಾಗ, ಸಹಕಾರ ಸಂಘ ಒಂದರಲ್ಲಿ ಲೂಟಿ ಮಾಡಿದ ಒಬ್ಬ ಕಾರ್ಯದರ್ಶಿಯ ಮೇಲೆ ಕೇಸು ಹಾಕಿ, ಅದನ್ನು ವಾಪಸು ತೆಗೆದುಕೊಂಡ ಸಂದರ್ಭ ಹೊರಗೆ ಬಂದಿತು. ಈ ಕೇಸುಗಳನ್ನು ವಾಪಸು ತೆಗೆದುಕೊಳ್ಳುತ್ತಾ ಇರತಕ್ಕಂಥಾದ್ದನ್ನು ಒಂದು ಉದ್ದೇಶದಿಂದ ಹೇಳುತ್ತಾ ಇದ್ದೇನೆ. ನಮ್ಮ ತುಮಕೂರು ಜಿಲ್ಲೆಯಲ್ಲಿ ಒಂದು ಸಹಕಾರ ಸಂಘದಲ್ಲಿ ಲಕ್ಷಾಂತರ ರೂಪಾಯಿ ದುರುಪಯೋಗವಾಗಿ ಪೋಲೀಸರು ಹಾಕಿರತಕ್ಕಂಥ ಕೇಸನ್ನು ಸರಕಾರದವರು ವಾಪಸು ತೆಗೆದುಕೊಂಡಿದ್ದಾರೆ. ಕೋರ್ಟಿಗೆ ಕಳುಹಿಸಿರತಕ್ಕಂಥ ಎಫ್.ಐ.ಆರನ್ನು ಇದೇ ರೀತಿಯಾಗಿ ಸರಕಾರದವರು ವಾಪಸು ತರಿಸಿಕೊಂಡಿದ್ದಾರೆ ಆದರೆ ಪ್ರಜಾಪ್ರಭುತ್ವದಲ್ಲಿ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮಾಡಿರತಕ್ಕಂಥ ಪರಿಸ್ಥಿತಿಯಲ್ಲಿ ಜನಗಳನ್ನು ಗುಂಡಿಟ್ಟು ಹೊಡೆದಿರುವುದು ಖಂಡನೀಯ. ಪೋಲೀಸರು ಅವರಿಗೆ ರಕ್ಷಣೆಯನ್ನು ಕೊಡುವುದರ ಬದಲು ಅವರಿಗೆ ಅನೇಕ ಅಪಮಾನಗಳನ್ನು ಮಾಡಿ ಒಂದು ಜೈಲಿನಲ್ಲಿ ಹಾಕಿರತಕ್ಕಂಥ ನಿದರ್ಶನವನ್ನು ಈ ಸಭೆಯಲ್ಲಿ ಬಹಳ ವಿಷಾದದಿಂದ ಹೇಳಬೇಕಾಗಿದೆ. ಆ ಬಗ್ಗೆ ಅನೇಕ ಸಾರ್ವಜನಿಕರೂ, ಸಂಘಸಂಸ್ಥೆಗಳೂ, ರಾಜಕೀಯ ಪಕ್ಷಗಳೂ ಒಂದೇ ಸಮನೆ ಸರಕಾರಕ್ಕೆ ನಿವೇದನೆಯನ್ನು ಮಾಡಿಕೊಂಡಿದ್ದಾಗ್ಯೂ ಏನನ್ನೂ ಮಾಡಿಲ್ಲ. ಈ ರೀತಿಯಲ್ಲಿ ಹತ್ತಿಕ್ಕತಕ್ಕಂಥ ನೀತಿಯಿಂದ ಮೈಸೂರು ರಾಜ್ಯದಲ್ಲಿ ಪೋಲೀಸು ರಾಜ್ಯವನ್ನು ಸ್ಥಾಪನೆ ಮಾಡಿದ್ದಾರೆಯೇ ಹೊರತು, ಪ್ರಜಾ ಪ್ರಭುತ್ವದಲ್ಲಿ ಯಾವ ರಕ್ಷಣೆಯನ್ನೂ ಕೂಡ, ಈ ದಿವಸ ಪೋಲಿಸಿನವರು ಜನಗಳಿಗೆ ಕೊಡುವುದಕ್ಕೆ ನಮ್ಮ ರಾಜ್ಯದಲ್ಲಿ ಇಲ್ಲ.

ತುಮಕೂರು ಜಿಲ್ಲಾ ಬ್ಯಾಂಕಿನಲ್ಲಿ ಅಧಿಕಾರಿಗಳಾಗಿದ್ದಂಥ ಇಬ್ಬರು ಗುಮಾಸ್ತರು ದುಡ್ಡನ್ನು ದುರುಪಯೋಗ ಮಾಡಿ ಕೋರ್ಟಿಗೆ ಅವರ ಮೇಲೆ ಎಫ್.ಐ.ಆರ್. ಹೋಗಿದ್ದದ್ದನ್ನು ನೀವು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಹೇಳಿ, ಅವರನ್ನು ಅದೇ ಕೆಲಸದಲ್ಲಿ ನೇಮಿಸಿದ್ದೀರಿ ಹಣವನ್ನು ದುರುಪಯೋಗ ಮಾಡಿ ಕೇಸು ಹಾಕಿರತಕ್ಕಂಥಾವರ ಹೆಸರು ಹೇಳುವುದಕ್ಕೆ ಅಧ್ಯಕ್ಷರು ಅಪ್ಪಣೆ ಕೊಡುವುದಿಲ್ಲ; ಅಲ್ಲದಿದ್ದರೆ ಅವರ ಹೆಸರು ಹೇಳುತ್ತಿದ್ದೆ; ಹೇಳುವುದಕ್ಕೆ ತಯಾರಿದ್ದೇನೆ.

ಶ್ರೀ ಆರ್. ಎಂ. ಪಾಟೀಲ್.—ಸೊಸೈಟಿ ಹೆಸರು ಹೇಳಿದರೆ ತಪ್ಪಾಗುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಡಿಸ್ಟ್ರಿಕ್ಟ್ ಸಹಕಾರ ಬ್ಯಾಂಕ್ ಅಂತ ಹೇಳುತ್ತಾ ಇದ್ದೇನೆ. ಇನ್ನು 'ಏನು ಹೇಳಬೇಕು? ಈ ರೀತಿ ಸರಕಾರದವರು ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳುವಾಗ, ರಾಜಕೀಯ ಪಕ್ಷಗಳು ಜನರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಶಾಂತರೀತಿಯಿಂದ ಚಳುವಳಿಯನ್ನು ಮಾಡಿದರೆ, ಮುಷ್ಕರ ಮಾಡಿದರೆ, ಜೈಲಿಗೆ ಹಾಕತಕ್ಕಂಥ ನೀತಿ ಪೋಲೀಸರದು ಇದೆ. ಅದು ತಮ್ಮ ಸರಕಾರದ ನೀತಿಯೋ? ಭಾರತ-ಬಂದ್ ಚಳುವಳಿಯನ್ನು ನಡೆಸಿರತಕ್ಕಂಥವರ ಮೇಲೆ ಹಿಂಸಾಕೃತ್ಯಗಳನ್ನು ಪೋಲೀಸಿನವರು ನಡೆಸಿದ್ದಾರೆ ಎಂದು ರಾಜಕೀಯ ಪಕ್ಷಗಳು ರೆಸಲೂಷನ್ನನ್ನು ಮಾಡಿ ಒಂದೇ ಸಮನೆ ಕಳುಹಿಸಿದ್ದಾರೆ. ದಹಲಿಯಲ್ಲಿಯೂ ಒಂದು ರೆಸಲ್ಯೂಷನ್ ಮಾಡಿ ಕಳುಹಿಸಿದೆ. ತಮಗೆ ಒಂದು ಮನವಿಯನ್ನು ಕೂಡ ಮಾಡಿದ್ದಾರೆ; ಜನತೆ ಕೂಡ ಮನವಿ ಮಾಡಿದ್ದಾರೆ. ಎಲ್ಲಿ ಯಶಸ್ವಿಯಾಗಿ ಪ್ರಜಾಪ್ರಭುತ್ವ ಬೆಳೆಯುತ್ತದೆಯೋ, ವಿರೋಧ ಪಕ್ಷಗಳು ಬೆಳೆಯುತ್ತವೆಯೊ ಎಂಬ ಒಂದು ಭಯವನ್ನು ಒಂದು ದೃಷ್ಟಿಯನ್ನು ಇಟ್ಟುಕೊಂಡು ಈ ಚಳುವಳಿಯನ್ನು ಹತ್ತಿಕ್ಕಲು 300—400 ಜನರನ್ನು ಜೈಲಿನಲ್ಲಿ ಹಾಕಿದ್ದಾರೆ. ಬಳ್ಳಾರಿ ಜೈಲಿನಲ್ಲಿರತಕ್ಕಂಥ ಇವರನ್ನು ಭೇಟಿ ಮಾಡುವುದಕ್ಕೆ ಕೂಡ ನಿರಾಕರಿಸಲಾಗಿದೆ ಎಂಬ ಈ ನಿದರ್ಶನವನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ರೀತಿ ಪ್ರಜಾಪ್ರಭುತ್ವದಲ್ಲಿ ತಮ್ಮ ಪೋಲೀಸು ಇಲಾಖೆ ಕೆಲಸ ಮಾಡುತ್ತಿದೆ. ಅದೇ ರೀತಿ ಮೈಸೂರಿನಲ್ಲಿ ಚಳುವಳಿಯನ್ನು ಮಾಡಿದಂಥವರಲ್ಲಿ ಈ ವಿಧಾನ ಸಭೆಯ ಮಾನ್ಯ ಸದಸ್ಯರೊಬ್ಬರೂ ಇದ್ದಾರೆ; ಅವರ ಮೇಲೆ ಕೇಸು ಹಾಕಿರತಕ್ಕಂಥ ನಿದರ್ಶನವೂ ಇದೆ.

[MR. CHAIRMAN (SRI P.F.D'MELLOW in the Chair.]

ಒಳ್ಳೆಯ ಜನಗಳನ್ನು ರಕ್ಷಣೆ ಮಾಡುವುದಕ್ಕೆ, ದುಷ್ಟರನ್ನು ಶಿಕ್ಷಿಸುವುದಕ್ಕೆ ಪೋಲೀಸರು ಇದ್ದಾರೆ, ನಮ್ಮಗಳಿಗೆ ರಕ್ಷಣೆ ಕೊಡಬೇಕು ಎಂದು ಹೇಳುತ್ತಿದ್ದರೆ. ಪೋಲೀಸರು ನ್ಯಾಯವಾಗಿ ವರ್ತಿಸುವವರನ್ನು ಹತ್ತಿಕ್ಕುತಿದ್ದಾರೆ. ಪೋಲೀಸರು ಯಾವ ರೀತಿಯಿಂದಲೂ ಪ್ರಜಾ ಪ್ರಭುತ್ವ ವನ್ನೂ, ಸಾರ್ವಜನಿಕರ ಹಿತಚಿಂತನೆಯನ್ನೂ ಕಾಪಾಡುತ್ತಿಲ್ಲ ಅನ್ನತಕ್ಕಂಥಾದ್ದನ್ನು ಈ ಸಭೆಯ ಮುಂದೆ ವಿಷಾದದಿಂದ ಹೇಳಬೇಕಾಗಿದೆ.

ಗೃಹಮಂತ್ರಿಗಳ ದುರ್ಬಲತೆ ಯಾವ ರೀತಿ ಇದೆ ತೋರಿಸುವುದಕ್ಕೆ ಒಂದು ನಿದರ್ಶನ ಹೇಳ ಬೇಕಾಗಿದೆ. ಮಾನ್ಯ ವಿರೋಧ ಪಕ್ಷದವರ ಕ್ಷೇತ್ರವಾದ ಚನ್ನರಾಯಪಟ್ಟಣದಲ್ಲಿ ಒಬ್ಬ ಸಬ್‌ಇನ್‌ಸ್ಪೆಕ್ಟರಿದ್ದಾರೆ. ಇದನ್ನು ಅನೇಕ ಸಲ ಹೇಳಿದ್ದೇವೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮೂರು ದಿವಸಕ್ಕೆ ಒಬ್ಬ ಸಬ್-ಇನ್‌ಸ್ಪೆಕ್ಟರನ್ನು ಟ್ರಾನ್ಸ್‌ಫರ್ ಮಾಡತಕ್ಕಂಥ ನಿದರ್ಶನಗಳನ್ನು ನೋಡಿದ್ದೇವೆ. ಎಲ್ಲಿ ಅವರ ಮಾತು ನಡೆಯಬೇಕೋ, ಎಲ್ಲಿ ತಮ್ಮ ರಾಜಕೀಯಬೇಕೋ, ಎಲ್ಲಿ ತಮ್ಮ ರಾಜಕೀಯ ಬೆಳೆಯಬೇಕೋ, ಎಲ್ಲಿ ತಮ್ಮ ರಾಜಕೀಯ ಪೋಲೀಸಿನವರ ಹಸ್ತಕ್ಷೇಪದಿಂದ ನಡೆಯಬೇಕಾಗಿದೆಯೊ, ಯಾವಾಗ ಯಾರನ್ನು ಹಿಡಿತದಲ್ಲಿಟ್ಟುಕೊಳ್ಳಬೇಕಾಗಿದೆಯೊ, ಅಂಥ ಸಂದರ್ಭಗಳಲ್ಲಿ ಬದಲಾವಣೆಯನ್ನು ಮಾಡಿದ್ದಾರೆ. ಎಲ್ಲಿ ಇವರ ಅಧಿಕಾರವನ್ನು ಇಟ್ಟುಕೊಳ್ಳಬೇಕಾಗಿದೆಯೊ, ಇವರ ಕಡೆಯವರಾಗಿ ಸೋತು ಅಂಥವರಿಗೆ ಪೋಲೀಸರ ಬೆಂಬಲ ಬೇಕಾಗಿದೆಯೊ, ಆವಾಗ ಅವರಿಗೆ ಬೇಕಾದ ಸಬ್-ಇನ್‌ಸ್ಪೆಕ್ಟರುಗಳನ್ನು ಇಟ್ಟುಕೊಳ್ಳುತ್ತಾರೆ. ವಿರೋಧ ಪಕ್ಷದವರು ವರ್ಗಾವರ್ಗಿ ಮಾಡಿ ಎಂದರೆ ಅದನ್ನು ಹಾಗೆಯೇ ಇಟ್ಟಿರುತ್ತಾರೆ. ಅದನ್ನು ಅನೇಕ ಸಲ ಹೇಳಿದ್ದೇವೆ. ಆಹಾರದ ಒಂದು ಪರಿಸ್ಥಿತಿ ಉಲ್ಬಣವಾದಾಗ ಬಜೆಟ್ ಭಾಷಣದಲ್ಲಿ ಒಂದು ವಿಷಯವನ್ನು ಉಲ್ಲೇಖ ಮಾಡಿದ್ದಾರೆ.

MR. CHAIRMAN.—The House will now rise and meet after half-an hour.

The House adjourned for recess at Three of the Clock and reassembled at Thirty Minutes past Three of the Clock.

[MR. SPEAKER in the Chair]

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಈಗ ತಾನೇ ನಾನು ಬಳ್ಳಾರಿ ಜಿಲ್ಲೆಯಲ್ಲಿ ಮತ್ತು ಮೈಸೂರು ಜಿಲ್ಲೆಯಲ್ಲಿ ನಡೆದ ಪೋಲೀಸರ ಅತ್ಯಾಚಾರಗಳನ್ನು ಹೇಳುತ್ತಿದ್ದೆ. ಜನ ನ್ಯಾಯವಾದ ಬೇಡಿಕೆಗಳನ್ನು ಇಟ್ಟುಕೊಂಡು ಶಾಂತಿಯುತವಾದ ಚಳುವಳಿಯನ್ನು ನಡೆಸಿದಾಗ, ಅನ್ನವನ್ನು ಕೇಳಿದಾಗ ಪೋಲೀಸರು ಮಧ್ಯೆ ಪ್ರವೇಶವಾದಿ 365 ಜನರನ್ನು ಏಕೆ ಜೈಲಿನಲ್ಲಿ ಹಾಕಿದ್ದಾರೆ, ಎಂದು ನಾನು ಮಾನ್ಯ ಗೃಹ ಮಂತ್ರಿಗಳಲ್ಲಿ ಈ ಮೂಲಕ ಕೇಳಬಯಸುತ್ತೇನೆ. ಡಿ. ಐ. ಆರ್. ಆಕ್ಟ್ ಪ್ರಕಾರ ಅಲ್ಲಿ ನ್ಯಾಯವಾದ ಬೇಡಿಕೆಗಳನ್ನು ಇಟ್ಟು ಚಳುವಳಿ ನಡೆಸುತ್ತಿದ್ದವರ ಮೇಲೆ ಅವರುಗಳು ಆಂಟಿ ನ್ಯಾಷನಲ್ ಚಟುವಟಿಕೆಗಳಲ್ಲಿ ಭಾಗವಹಿಸಿದರು ಎಂದು ಡಿ. ಐ. ಆರ್. ಕಾನೂನನ್ನು ಅವರುಗಳ ಮೇಲೆ ಯಾವ ರೀತಿ ಪ್ರಯೋಗ ಮಾಡಿದಿರಿ ? ನ್ಯಾಯ ಸಮ್ಮತವಾದ ಬೇಡಿಕೆಗಳನ್ನು ಇಟ್ಟವರನ್ನು ಪೋಲೀಸರು ಈ ರೀತಿಯಾಗಿ ಹತ್ತಿಕ್ಕುವುದು ಸರಿಯೇ ಎನ್ನುವುದರ ಬಗ್ಗೆ ಗೃಹಮಂತ್ರಿಗಳು ತಕ್ಕ ಸಮಜಾಯಿಷಿ ಕೊಡಬೇಕೆಂದು ನಾನು ಒತ್ತಾಯವಾಗಿ ಕೇಳಬಯಸುತ್ತೇನೆ.

ಸ್ವಾಮೀ, ಈ ದೇಶದಲ್ಲಿ ಡಿ. ಐ. ಆರ್. ಆಕ್ಟು ಪ್ರಕಾರ ಇವರನ್ನು ಅರೆಸ್ಟು ಮಾಡಿದೆ ಎಂದು ಅವರ ಮೇಲೆ ಯಾವ ಪೋಲೀಸರು... ..

ಅಧ್ಯಕ್ಷರು.—ಯಾವ ಆಕ್ಟು ?

ಶ್ರೀ ಕೆ. ಲಕ್ಕಪ್ಪ.—ಡಿ. ಐ. ಆರ್. ಆಕ್ಟು ಅಲ್ಲ ಡಿ. ಐ. ರೂಲ್ಸು ಪ್ರಕಾರ ಈ ರೀತಿ ಅಧಿಕಾರಗಳನ್ನು ಕೊಡುವುದು ನ್ಯಾಯವೇ ? ನ್ಯಾಯವಾದ ಬೇಡಿಕೆಗಳನ್ನು ಇಟ್ಟು ಹೋರಾಟ ಮಾಡತಕ್ಕ ಜನತೆಯ ಮೇಲೆ ಈ ರೂಲ್ಸು ಪ್ರಯೋಗಿಸಿ ಅವರುಗಳನ್ನು ಅರೆಸ್ಟು ಮಾಡಲು ಅವಕಾಶವಿದೆಯೇ

(ಶ್ರೀ ಕೆ. ಲಕ್ಕಪ್ಪ)

ಎನ್ನುವುದನ್ನು ಮಾನ್ಯ ಗೃಹಮಂತ್ರಿಗಳು ಇಲ್ಲಿ ಸ್ಪಷ್ಟಪಡಿಸಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಮತ್ತೆ ಮೈಸೂರಿನಲ್ಲಿ ಕೂಡ ಇದೇ ರೀತಿಯಾದ ಚಳುವಳಿಯಲ್ಲಿ ಭಾಗವಹಿಸಿದ ಅನೇಕ ಜನರನ್ನು ಜೈಲಿನಲ್ಲಿ ಕೂರಿಸಿದ್ದಾರೆ. ಡಿ. ಐ. ರೂಲ್ಸುಗಳನ್ನು ಯಾವ ಆಧಾರದ ಮೇಲೆ ಇಲ್ಲಿ ಪ್ರಯೋಗ ಮಾಡಿ ಅನುಸರಿಸುತ್ತಿದ್ದೀರಿ? ಕಾಂಗ್ರೆಸ್ಸಿನವವರೇ ಇವೊತ್ತು ಆಂಟೀ-ನ್ಯಾಷನಲ್ ಆಕ್ಟಿವಿಟೀಸ್‌ಗಳಲ್ಲಿ ತೊಡಗಿದ್ದರೂ ಅವರ ಮೇಲೆ ಈ ರೂಲ್ಸುಗಳನ್ನೇಕೆ ಪ್ರಯೋಗ ಮಾಡುತ್ತಿಲ್ಲ? ದೇಶದಲ್ಲಿ ಪ್ರಜಾಪ್ರಭುತ್ವವನ್ನು ಸರಿಯಾದ ರೀತಿಯಲ್ಲಿ ನಡೆಸಬೇಕು, ಸಮತಾವಾದದ ನೀತಿಯನ್ನು ದೇಶದಲ್ಲಿ ಅನುಷ್ಠಾನಕ್ಕೆ ತರಬೇಕು ಎನ್ನತಕ್ಕ ಕೂಗು ಇದ್ದರೂ ಯಾರು ಶಾಂತಿಯಿಂದ ಚಳವಳಿ ನಡೆಸಿದರೋ ಅವರ ಮೇಲೆ ಪೋಲೀಸರು ಈ ಅಧಿಕಾರವನ್ನು ಹೇಗೆ ಚಲಾವಣೆಗೆ ಮಾಡಿದರು? ಇಂತಹ ಪೋಲೀಸರ ದೌರ್ಜನ್ಯಕ್ಕೆ ಕಾರಣವಾದರೂ ಏನು ಎನ್ನುವುದನ್ನು ಮಾನ್ಯ ಗೃಹಮಂತ್ರಿಗಳು ಇಲ್ಲಿ ಹೇಳಬೇಕಾಗಿದೆ. ಹೀಗೆ ಮಾಡಿರತಕ್ಕದ್ದು ರಾಜ್ಯಾಂಗಕ್ಕೆ ವಿರೋಧ ಇಂತಹ ಒಂದು ಕರ್ತವ್ಯವನ್ನು ಪೋಲೀಸರಿಗೆ ಕೊಡುವುದು ಯಾವ ನೀತಿ? ಜವಾಬ್ದಾರಿಯುತರಾದ ಗೃಹಮಂತ್ರಿಗಳು ಇದಕ್ಕೆ ತಕ್ಕ ಸಮಜಾಯಿಷಿಗಳನ್ನು ಕೊಡಬೇಕೆಂದು ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಆಹಾರದ ರಹದಾರಿಗಳ ಬಗ್ಗೆ ಪೋಲೀಸು ಇಲಾಖೆ ಏನು ಕೆಲಸ ಮಾಡುತ್ತಿದೆ ಎನ್ನುವುದನ್ನು ಹೇಳುವುದಕ್ಕಾಗಿ ಆಯವ್ಯಯದ ಪಟ್ಟಿಯನ್ನು ಮಾನ್ಯ ಜತ್ತಿಯವರು ಇಲ್ಲಿ ಮಂಡಿಸುವಾಗ 73 ಚೆಕ್ ಪೋಸ್ಟುಗಳು 12 ಮೊಬೈಲ್ ಸೆಕ್ಷನ್ನುಗಳು, 170 ಜನ ಹೆಡ್ ಕಾನ ಸ್ಟೇಬಲ್, 250 ಜನ ಪೋಲೀಸು ಕಾನ್‌ಸ್ಟೆಬಲ್‌ಗಳು ಬೇಕಾಗಿದ್ದಾರೆ ಎಂದು ಹೇಳುತ್ತಾ ಆಹಾರ ಪರಿಸ್ಥಿತಿ ಬಿಗಡಾಯಿಸಿದಾಗ ಇವರುಗಳನ್ನೆಲ್ಲಾ ಉಪಯೋಗಿಸಿಕೊಳ್ಳಬೇಕೆಂದು ಹೇಳಿದರು. ಇವರುಗಳು ಈಗಾಗಲೇ ನಡೆಸಿರತಕ್ಕ ಕೆಲಸಗಳಾದರೂ ಏನು? ಕಾನೂನಿಗೆ ವಿರುದ್ಧವಾಗಿ ಆಹಾರ ಧಾನ್ಯಗಳ ವ್ಯಾಪಾರ ಮಾಡತಕ್ಕ ವ್ಯಾಪಾರಸ್ಥರನ್ನು ಹಿಡಿಯಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಇಷ್ಟೊಂದು ಸಿಬ್ಬಂದಿಗಳನ್ನು ಹೆಚ್ಚಿಸಿಕೊಂಡರು, ಒಂದು ರೀತಿಯಲ್ಲಿ ಚಮತ್ಕಾರವಾಗಿ ಆಯವ್ಯಯಪಟ್ಟಿಯನ್ನು ಇಲ್ಲಿ ಮಂಡಿಸಿದ್ದಾರೆ. ಸ್ವಾಮೀ, ನಾನು ಈ ಸಭೆಯಲ್ಲಿ ಒಂದು ವಿಚಾರ ಹೇಳುತ್ತೇನೆ. ರಹದಾರಿಯನ್ನು ಕೊಡತಕ್ಕ ಸಂದರ್ಭದಲ್ಲಿ ಆಹಾರ ಪದಾರ್ಥಗಳನ್ನು ಕಳ್ಳ ಸಾಗಾಣಿಕೆ ಮಾಡತಕ್ಕಂತಹ ವ್ಯಾಪಾರಸ್ಥರ ಮೇಲೆ ಇಲ್ಲಿಯವರೆಗೆ ಎಷ್ಟು ಮೊಕದ್ದಮೆಗಳನ್ನು ಹೂಡಿ ಅವರ ಮೇಲೆ ಕೇಸುಗಳನ್ನು ಹಾಕಿದ್ದಾರೆನ್ನುವ ಅಂಕಿ ಅಂಶಗಳನ್ನು ಇಲ್ಲಿ ಸ್ಪಷ್ಟಪಡಿಸಬೇಕು ಮತ್ತು ವಿವರಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ದೇಶದಲ್ಲಿ ಆಹಾರದ ಪರಿಸ್ಥಿತಿ ಉಲ್ಬಣವಾದ ಮೇಲೆ ಹೆಚ್ಚು ಹೆಚ್ಚು ಕಳ್ಳಸಾಗಾಣಿಕೆಗಳಾಗುತ್ತಿವೆ. ಉದಾಹರಣೆಗಾಗಿ ಹೇಳಬೇಕಾದರೆ ನಮ್ಮ ತುಮಕೂರು ಜಿಲ್ಲೆಯಿಂದ ಹಿಂದೂಪುರದ ಕಡೆಗೆ ಅನೇಕ ಲಾರಿಗಳು ಹೋಗಿರತಕ್ಕ ನಿದರ್ಶನಗಳು ಇವೆ. ಪೋಲೀಸರ ಹೆಸರುಗಳನ್ನು ಬೇಕಾದರೆ ಇಲ್ಲಿ ಕೊಡಬಹುದು. ಆದರೆ ಅದನ್ನು ಕೂಡಬಾರದು ಎನ್ನುವುದರಿಂದ ಇಲ್ಲಿ ಹೇಳುತ್ತಿಲ್ಲ. ಇಲ್ಲಿ ಒಂದು ಲಾರಿಯನ್ನು ಪೋಲೀಸಿನವರು ಹಿಡಿದಾಗ ಅದನ್ನು ವಾಪಸ್ಸು ಕೊಡಬೇಕೆಂದು ಒಬ್ಬರು ಮಂತ್ರಿಗಳು ಆದೇಶ ಕಳುಹಿಸಿದ ಒಂದು ನಿದರ್ಶನವೂ ಇದೆ. ಇದೇ ಪೋಲೀಸಿನವರು ಹಿಂದೂಪುರಕ್ಕೆ ಹೋಗುವ ಒಂದು ಲಾರಿಯನ್ನು ಹಿಡಿದಾಗ ಅದನ್ನು ಬಿಡಿಸಿ ಕೊಡಬೇಕೆಂದು ಕೇಳಿದಾಗ ಪೋಲೀಸು ಕಾನ್‌ಸ್ಟೇಬಲ್ ಒಬ್ಬರು 250 ರೂಪಾಯಿಗಳಷ್ಟು ಒಂದು ಲಾರಿಗೆ ಲಂಚವನ್ನು ಕೇಳಿದರು. ಅದನ್ನು ತೆಗೆದುಕೊಂಡ ನಂತರ ಇನ್ನೊಂದು ಸಾರಿ ಇನ್ನೊಂದು ಲಾರಿಯನ್ನು ಹಿಂದೂಪುರಕ್ಕೆ ತೆಗೆದುಕೊಂಡು ಹೋಗುವಾಗ ಇದೇ ಕಾನ್‌ಸ್ಟೇಬಲ್ ಆಗಿರುವವರು ಒಂದು ಲಾರಿ ಬಿಡಿಸಲು 500 ರೂಪಾಯಿಗಳಷ್ಟು ಲಂಚ ಬೇಕೆಂದು ಕೇಳಿದರು, ಇದು ಬಹಳ ವಿಷಾದದ ಸಂಗತಿ. 250 ರೂಪಾಯಿ ಒಂದು ಲಾರಿಗಾಗಿ ಲಂಚ ಕೊಡಬೇಕಾದೆಂದು ಕೇಳುತ್ತಿದ್ದವರು ಈಗ ಒಂದು ಲಾರಿ ಬಿಡಲು 500 ರೂಪಾಯಿಗಳಷ್ಟು ಕೊಡಬೇಕೆಂದು ಲಂಚದ ರೇಟುಗಳನ್ನು ಹೆಚ್ಚು ಮಾಡಿ ಕೇಳುತ್ತಿದ್ದಾರೆಂದು ನನ್ನಲ್ಲಿಗೆ ಅನೇಕ ವ್ಯಾಪಾರಸ್ಥರುಗಳು ಬಂದು ಹೇಳಿದ್ದಾರೆ. ಈ ರೀತಿಯಾಗಿ ಪೋಲೀಸು ಇಲಾಖೆಯಲ್ಲಿ ಕೆಲಸ ಮಾಡುವುದು ಸರಿಯೇ ಎಂದು ನಾನು ಇಲ್ಲಿ ಕೇಳಬಯಸುತ್ತೇನೆ. ಪೋಲೀಸ್ ಇಲಾಖೆಯವರು ತಮ್ಮ ಬೆಂಬಲಿಗರಾದ ಕಾಂಗ್ರೆಸ್ ಜನರ ಪ್ರತಿಷ್ಠೆ ಬೆಳೆಸಬೇಕೆಂಬ ಉದ್ದೇಶದಿಂದ ತುಮಕೂರು ಜಿಲ್ಲೆಯಲ್ಲಿ ಕಾನ್‌ಸ್ಟೇಬಲ್‌ಗಳು ಕಾಂಗ್ರೆಸ್ ಮಂಡಲಿಗಳ ಸದಸ್ಯರೊಂದಿಗೆ ಸೇರಿ ಕೆಲಸ ಮಾಡುತ್ತಿದ್ದಾರೆ. ಕಾನ್‌ಸ್ಟೇಬಲ್ ಸಂಖ್ಯೆ ಕಡಿಮೆ ಮಾಡಿ, ಈ ಇಲಾಖೆಯಲ್ಲಿ ಮಿತವ್ಯಯ ಮಾಡಿ ಎಂದು ಬಹು ನಮ್ರತೆಯಿಂದ ಹೇಳುತ್ತೇನೆ. ಕಾನ್‌ಸ್ಟೇಬಲ್‌ಗಳನ್ನು ಹೊಸದಾಗಿ ನೇಮಕ ಮಾಡುವುದಾದರೆ ಮಂಡಳಿ ಕಾಂಗ್ರೆಸ್ ಸದಸ್ಯರನ್ನು ಕಾನ್‌ಸ್ಟೇಬಲ್ ಎಂದು ನೇಮಕ ಮಾಡಿ. ಹಾಗಾದರೆ ದೇಶದಲ್ಲಿ ತಮ್ಮ ಪ್ರತಿಷ್ಠೆ, ಕಾಂಗ್ರೆಸ್ ಪ್ರಭಾವವಾದರೂ ಜಾಸ್ತಿಯಾಗಬಹುದೇನೋ? ಕಾಂಗ್ರೆಸ್ ಮಂಡಳಿ ಅಧ್ಯಕ್ಷರು ಕಾನ್‌ಸ್ಟೆಬಲ್‌ಗಳ ಜೊತೆಗೆ ಸೇರಿ

ಕಳ್ಳ ವ್ಯಾಪಾರ ನಡೆಸಿಕೊಂಡು ಬರುತ್ತಿದ್ದಾರೆ. ಇದಕ್ಕೆ ಬೆಂಬಲ ಕೊಟ್ಟು ಪೋಲೀಸ್ ರಕ್ಷಣೆ ಪಡೆದು ಇಂಥ ಕೆಲಸ ನಡೆದಿದೆ. ಆದುದರಿಂದ ಕಾಂಗ್ರೆಸ್ ಮಂಡಳ ಅಧ್ಯಕ್ಷರನ್ನು ಕಾನ್‌ಸ್ಟೇಬಲ್ ಆಗಿ ನೇಮಕ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ಪೋಲೀಸ್ ಇಲಾಖೆ ಮೂಲಕ ಇಂದು ಆಹಾರ ಅಭಾವ ಪರಿಸ್ಥಿತಿ ಉಲ್ಬಣಾವಸ್ಥೆಗೆ ಬಂದಿದೆ. ಕಾನ್‌ಸ್ಟೆಬಲ್‌ನಿಗೆ ಮಾಮೂಲು ಎಷ್ಟು ಕೊಡಬೇಕು, ದಫೇದಾರನಿಗೆ ಎಷ್ಟು, ಸಬ್‌ಇನ್‌ಸ್ಪೆಕ್ಟರಿಗೆ ಎಷ್ಟು ಇದನ್ನು ಸರಕಾರವೇ ನಿಗದಿ ಮಾಡಿದರೆ ಜನರಿಗೆ ಕ್ಷೇಮವಾಗಬಹುದೋ ಏನೋ? ಯಾವ ರೀತಿ ನೀತಿ ಅನುಸರಿಸುತ್ತಿದ್ದಾರೆ ಎಂಬುದನ್ನು ಈ ಸಭೆಗೆ ಹೇಳಬೇಕಾಗಿದೆ. ಹಿಂದಕ್ಕೆ ಮೋನಪ್ಪನವರ ಕಾಲದಲ್ಲಿ ಒಂದು ರೀತಿಯ ಮಾರ್ಪಾಟಾಯಿತು. ಇಂದು ದೇಶದಲ್ಲಿ 8-10 ಮೈಲಿ ಅಂತರದಲ್ಲಿ ಪೋಲೀಸ್ ಠಾಣೆ ಇರುವುದರಿಂದ ಹಳ್ಳಿಗಳಿಗೆ ಸರಿಯಾದ ರೀತಿಯಲ್ಲಿ ರಕ್ಷಣೆ ದೊರೆಯುತ್ತಿಲ್ಲ. ಕಾರ್ಯ ನಿರ್ವಹಣೆ ಸರಿಯಾಗಿ ಜರಗುತ್ತಿಲ್ಲ. ಇದಕ್ಕೆ ಗಮನ ಕೊಡಬೇಕು. ಒಂದು ಖೂನಿ ಮೊಕದ್ದಮೆಯ ಕಂಪ್ಲೇಂಟ್ ಕೊಡಲು 8-10 ಮೈಲಿ ದೂರ ಇರತಕ್ಕ ಠಾಣೆಗೆ ಹೋಗಬೇಕಾಗುತ್ತದೆ. ಇದರಿಂದ ಏನು ಅನಾಹುತ ನಡೆಯುತ್ತಿದೆ ಎನ್ನುವುದನ್ನು ವಿಮರ್ಶೆ ಮಾಡಬೇಕು. ಎಂಟು ಹತ್ತು ಮೈಲಿಯೊಳಗೆ ಪೋಲೀಸ್ ಠಾಣೆ ಇಲ್ಲದೇ ಹೋದರೆ ಕಷ್ಟ ಪರಿಸ್ಥಿತಿಯನ್ನು ಜನ ಎದುರಿಸಬೇಕಾಗುತ್ತದೆ. ಇದಲ್ಲದೆ ಈ ಇಲಾಖೆಗೆ ದಕ್ಷರಾದ ಜನರನ್ನು ನೇಮಕ ಮಾಡಬೇಕು.

ಶ್ರೀ ಆರ್. ಎಂ. ಪಾಟೀಲ್.—ಕಾನ್‌ಸ್ಟೆಬಲ್ ಸಂಖ್ಯೆ ಕಡಿಮೆ ಮಾಡಿ ಎಂದು ಹೇಳುತ್ತೀರಲ್ಲಾ ?

ಶ್ರೀ ಕೆ. ಲಕ್ಕಪ್ಪ.—ಬರೀ ಸಂಖ್ಯೆ ಹೆಚ್ಚಿಸುವುದರಿಂದ ದಕ್ಷತೆ ಹೆಚ್ಚಿಸಲು ಸಾಧ್ಯವಿಲ್ಲ. ಆದುದರಿಂದ ಕಾನ್‌ಸ್ಟೆಬಲ್ ಸಂಖ್ಯೆ ಕಡಿಮೆ ಮಾಡಿ ಎಂದು ಹೇಳಿದೆ. ವಿದ್ಯಾವಂತರಾದ ಜನರನ್ನು ಈ ಇಲಾಖೆಯಲ್ಲಿ ಸೇರಿಸಬೇಕು. ಈ ಇಲಾಖೆಯಲ್ಲಿ ನಿಸ್ಪೃಹತೆಯಿಂದ ಕೆಲಸ ಮಾಡತಕ್ಕಂಥವರು ಇರಬೇಕು. ಆದರೆ ಇಲ್ಲಿ ಹಳೇ ಕಾಲದಿಂದ ಬಂದಿರುವ ಪದ್ಧತಿ ಅನುಸರಿಸಿಕೊಂಡು ಬರತಕ್ಕವರು ನೂರಕ್ಕೆ 60 ರಷ್ಟು ಜನ ಇದ್ದಾರೆ. ವಿದ್ಯಾವಂತರಾದವರಿಗೆ ಪ್ರಮೋಷನ್ ದೊರೆಯುತ್ತಿಲ್ಲ. ಆದುದರಿಂದ ಇಲಾಖೆ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಾ ಇಲ್ಲ. ಇದನ್ನು ನಿಮಗೆ ಅನೇಕ ಸಲ ಹೇಳಿದ್ದೇವೆ. ಪೋಲೀಸರು ನಿಷ್ಠಾವಂತರಾಗಬೇಕು. ದೇಶದಲ್ಲಿ ಭದ್ರತೆ ಇರಬೇಕು. ದಕ್ಷತೆ ಇದ್ದವರಿಗೆ ಪ್ರಮೋಷನ್ ದೊರೆಯಬೇಕು. ಇಂದು ದಕ್ಷತೆ ಪೋಲಿಸಿನವರಲ್ಲಿ ಇಲ್ಲ ಎಂಬುದು ನಿರ್ವಿವಾದ. ಇದನ್ನು ಗೃಹ ಮಂತ್ರಿಗಳು ಸಹ ಒಪ್ಪುತ್ತಾರೆ. ಇದನ್ನು ಶ್ರೀ ಜತ್ತಿಯವರು ಸಹ ತಮ್ಮ ಭಾಷಣದಲ್ಲಿ ಒಪ್ಪಿಕೊಂಡಿದ್ದಾರೆ. ಯಾಕಂದರೆ, ಇಂದು ದೇಶದಲ್ಲಿ ಕ್ರೈಮ್ಸ್ ಜಾಸ್ತಿಯಾಗಿದೆ. ಡೆಕಾಯಿಟಿ ಥೆಫ್ಟ್ ಹೆಚ್ಚಾಗಿದೆ, ರಾಬರಿ ಹೆಚ್ಚಾಗಿದೆ. ಗುಲಬರ್ಗ ಜಿಲ್ಲೆಯಲ್ಲಿ ನಾಲ್ಕು ವರ್ಷಗಳಲ್ಲಿ 500 ಖೂನಿಗಳಾಗಿವೆ. ಧಾರವಾಡ ಜಿಲ್ಲೆಯ ಸಿಗ್ಗಾವಿ ತಾಲ್ಲೂಕಿನಲ್ಲಿ ಆರು ತಿಂಗಳುಗಳಲ್ಲಿ 7 ಖೂನಿ ಪ್ರಕರಣಗಳು ನಡೆದಿವೆ. ಇದು ಏನು ತೋರಿಸುತ್ತದೆ? ಇವು ಲೆಕ್ಕಕ್ಕೆ ಬಂದ ಖೂನಿ ಪ್ರಕರಣಗಳು. ಒಟ್ಟಿನಲ್ಲಿ ಪೋಲಿಸ್ ಇಲಾಖೆಯಲ್ಲಿ ದಕ್ಷತೆಯಿಂದ ಕೆಲಸ ನಡೆಯುತ್ತಿಲ್ಲ. ದಕ್ಷತೆ ಹೆಚ್ಚಾಗಿ ಬೇಕಾದರೆ, ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕಾದರೆ, ಒಂದು ಹೊಸ ಸೂತ್ರ ಕಂಡುಹಿಡಿಯಬೇಕು.

ಶ್ರೀ ಆರ್. ಎಂ. ಪಾಟೀಲ್.—ಹೊಸ ಸೂತ್ರ ಯಾವುದು ಹೇಳಿ ?

ಶ್ರೀ ಕೆ. ಲಕ್ಕಪ್ಪ.—ಹೊಸ ಸೂತ್ರ ಯಾವುದು ಎನ್ನುವುದನ್ನು ಹೇಳಿದ್ದೇನೆ. ಮಂಡಳ ಕಾಂಗ್ರೆಸ್ ಸದಸ್ಯರನ್ನು ಕಾನ್‌ಸ್ಟೆಬಲ್ ಆಗಿ ನೇಮಕ ಮಾಡಿ, ಇದೇ ಹೊಸ ಸೂತ್ರ.

Mr. SPEAKER.—The member has already taken half-an-honr. Let him conclude early.

ಶ್ರೀ ಕೆ. ಲಕ್ಕಪ್ಪ.—ಪೋಲಿಸ್ ಇಲಾಖೆಯ ಮೂಲಕ ದೇಶದಲ್ಲಿ ಪ್ರೊಹಿಬಿಷನ್ ಜಾರಿಗೆ ಬಂದು ಕೆಲಸ ಮಾಡುತ್ತಿದೆ. ಇಂದು ಗ್ರಾಮಾಂತರ ಪ್ರದೇಶದಲ್ಲಿ ಕಳ್ಳಭಟ್ಟಿ ಸರಾಯಿ ಮಾಡುವುದು ಒಂದು ಕಾಟೇಜ್ ಇಂಡಸ್ಟ್ರೀಜ್ ಆಗಿದೆ. ಇದನ್ನು ಎಲ್ಲರೂ ಒಪ್ಪುತ್ತಾರೆ. ಇದನ್ನು ಪೋಲಿಸ್ ಇಲಾಖೆಗೆ ಒಪ್ಪಿಸದೇ ಇದ್ದರೆ ಪ್ರೊಹಿಬಿಷನ್ ಯಶಸ್ವಿಯಾಗಬಹುದಾಗಿತ್ತು. ಪ್ರೊಹಿಬಿಷನ್ ಯಾವ ರೀತಿ ಜಾರಿಗೆ ಬಂದಿವೆ, ಯಶಸ್ವಿಯಾಗಿವೆಯೇ ಕಾಂಗ್ರೆಸ್ ಪ್ರತಿಷ್ಠೆ ಹೆಚ್ಚಾಗಿದೆಯೇ ಎನ್ನುವುದಕ್ಕೆ ನೀವು ಆತ್ಮ ಸಂಶೋಧನೆ ಮಾಡಿಕೊಳ್ಳಬೇಕು.

ಶ್ರೀ ಎಂ. ವಿ. ರಾಮರಾವ್ (ನ್ಯಾಯ ಶಾಖೆಯ ಮಂತ್ರಿಗಳು).—ನಾವಲ್ಲ. ನೀವು ಆತ್ಮ ಸಂಶೋಧನೆ ಮಾಡಿಕೊಳ್ಳಬೇಕು.

ಶ್ರೀ ಕೆ. ಲಕ್ಕಪ್ಪ.—ಪ್ರೊಹಿಬಿಷನ್ ಎಷ್ಟು ಯಶಸ್ವಿಯಾಗಿದೆ? ಪೋಲಿಸ್‌ನವರು ಹಾಕಿದ ಮೊಕದ್ದಮೆಗಳಲ್ಲಿ ಎಷ್ಟು ಕೇಸುಗಳಲ್ಲಿ ರುಜುವಾತಾಗಿ ಶಿಕ್ಷೆಯಾಗಿದೆ? ಯಶಸ್ವಿಯಾಗಿದೆ ಎನ್ನುವುದಕ್ಕೆ ಈ ಸಭೆಯ ಮುಂದೆ ಅಂಕಿಅಂಶಗಳನ್ನು ಇಡಬೇಕು. ಹಾಗೂ ಪುಷ್ಟೀ ಕರಿಸಬೇಕು. ನಾನು ಹೇಳುವುದೇನೆಂದರೆ, ಪ್ರೊಹಿಬಿಷನ್ ಯಶಸ್ವಿಯಾಗಿಲ್ಲ. ಪೋಲೀಸಿನವರು ಭ್ರಷ್ಟಾಚಾರ

(ಶ್ರೀ ಕೆ. ಲಕ್ಕಪ್ಪ)

ನಡೆಸುತ್ತಿದ್ದಾರೆ. ಲಂಚ ತೆಗೆದುಕೊಳ್ಳಲು ಅವಕಾಶವಾಗುತ್ತಾ ಇದೆ. ಯಾವ ರೀತಿಯಿಂದಲೂ ಈ ನೀತಿ ತೃಪ್ತಿಕರವಾಗಿಲ್ಲ. ಇದನ್ನು ಅನುಷ್ಠಾನಕ್ಕೆ ತರಲು ನಿಮಗೆ ಸಾಧ್ಯವಾಗಿಲ್ಲ. ಇಂದು ಪರಿಸ್ಥಿತಿ ಹೇಗಿದೆ ಎಂದರೆ ಪೋಲೀಸಿನವರಿಗೆ ರಕ್ಷಣೆ ನಾವು ಕೊಡಬೇಕಾಗಿದೆ. ಲಂಚಕ್ಕೆ ಪೋಲೀಸರು ಬೇಕು, ಭ್ರಷ್ಟಾಚಾರಕ್ಕೆ ಪೋಲೀಸರು ಬೇಕು, ಪ್ರೊಹಿಬಿಷನ್‌ಕ್ಕೆ ಪೋಲೀಸರು ಬೇಕು ಎನ್ನುವ ಹಾಗೆ ಆಗಿದೆ. ಇನ್ನೊಂದು ವಿಷಯ. ಹೋಂ ಗಾರ್ಡ್ಸ್ ನೇಮಕ ಮಾಡತಕ್ಕಂಥ ವಿಚಿತ್ರ ನೀತಿ ಬಹಳ ಸಂಶಯಾಸ್ಪದವಾಗಿದೆ.

ಇನ್ನು ಹೋಂ ಗಾರ್ಡ್‌ಗಳ ನೇಮಕದ ವಿಚಾರದಲ್ಲಿ ಸರ್ಕಾರದವರು ಯಾವ ರಾಜಕೀಯವನ್ನೂ ಬಳಸುವುದಕ್ಕೆ ಹೋಗಬಾರದು. ಯಾರು ಸರ್ಕಾರವರಿಗೆ ಜಾಹಿರಾತುಗಳನ್ನು ತಂದುಕೊಡುತ್ತಾರೆ, ಯಾರು ಒಂದು ನಿಷ್ಪಕ್ಷಪಾತ ರೀತಿಯಲ್ಲಿ ನಡೆಯುವುದಿಲ್ಲ ಅಂಥ ಜನರನ್ನು ಸರ್ಕಾರದವರು ಈ ಕೆಲಸಕ್ಕೆ ನೇಮಕ ಮಾಡಬಾರದು, ಆದರೆ ನಮ್ಮ ತುಮಕೂರು ಜಿಲ್ಲೆಯಲ್ಲಿ ಇಂಥಾದ್ದೇ ಬಹಳ ಯಶಸ್ವಿಯಾಗಿ ನಡೆದಿದೆ. ಹಾಗೇ ಪೋಲೀಸ್ ಇಲಾಖೆಯಲ್ಲೂ ತಾವು ಒಂದು ಹೊಸ ಚೈತನ್ಯವನ್ನು ತುಂಬ ಬೇಕಾಗಿವೆ. ಹಾಗೆ ತಾವು ಆ ಇಲಾಖೆಯಲ್ಲಿ ಒಂದು ಹೊಸ ಚೈತನ್ಯವನ್ನು ತುಂಬಬೇಕಾಗಿದ್ದರೆ ಆ ಇಲಾಖೆಗೆ ತಾವು ಒಳ್ಳೆಯ ವಿದ್ಯಾವಂತ ಜನರನ್ನು ಆರಿಸಬೇಕು ಹಾಗಾದರೆ ಮಾತ್ರ ಪೋಲೀಸ್ ಇಲಾಖೆಯಲ್ಲಿ ಕೆಲಸಗಳು ಸರಿಯಾಗಿ ನಡೆಯುತ್ತವೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನಭಾಷಣವನ್ನು ಮುಗಿಸುತ್ತೇನೆ.

Sri K. S. SURYANARAYANA RAO.—Sir, I wish to make a few suggestions with reference to the several of the demands coming under discussion today. Sir, one important thing that we notice, nowadays is that for small reasons for petty reasons there will be quite a big commotion and there are many many instances where people take the law into their own hands. The reason is obvious. According to me, the reason is that they are less afraid of the police force or the strong hand with which they can deal with such a situation. For example, should there be a small street corner accident ? There are instances where rightly or wrongly persons involved have been manhandled. People are damn afraid in these days ...

Mr. SPEAKER.—'Damn' is not a good expression.

Sri K. S. SURYANARAYANA RAO.—Sorry. They are quite afraid these days of going quite safely even on a road where there is sparce traffic. There are instances on the way sides where we have seen people catch hold of persons and exterting heavy money by way of ranson. So the law is dispensed not by the process of law, or the law established by this Government in the country but by the people themselves as they like. This is a very small instance. I have been mentioning just to point out that though there may be several reforms and several improvements that might have been introduced or tried to implement, the common man must be made to feel the existence of law and order. He should be made to respect law and order in this country. He must be made aware that breach of law would bring punishment very heavily on him and the process of law would be initiated and he will be brought to book. Catching of small offences like cycling without light to make up the number in crime satistics is not the way. It is not the number that counts. It is the type of crime that is important, whether it is a

murder case, or rioting or violation of traffic rules. Nowadays what happens is this: I am making this suggestion in addition to what is there: the traffic rules or traffic suggestions or traffic boards and show many other guidance are for the persons who move in public conveyance or cars that go on the road; but there is nothing for the people who frequent these areas and who pass in these roads: there must be some education given to them that going in a street or violating traffic rules is an offence and those who do it will be brought to book. No such thing is done now. It is the driver of the car that will be dealt with. What should be the conduct of the people who frequent those localities? In that matter, I request that Government should take some steps to educate the public as to the traffic observance. These are very small things but they go a very long way. Now, take for example the prohibition of Beggary Act. Now a days, number of beggars are no doubt very much less. But even today people with communicable diseases will be on the streets and on the plateforms and on the footpaths and particularly I mention for your information that during the week ends for 3 or 4 days in a week, people suffering from leprosy, though with bandages and all that, would be found on the footpaths in Mysore. We do not deal with them.

Mr. SPEAKER.—The member may deal with them under 'Health' Demand.

Sri K. S. SURYANARAYANA RAO.—It comes under Beggar relief. Suppose we deal with such people, then we can understand that such thing will not be tolerated or allowed. The other point which I would like to mention is this: tourism is developing nowadays; adulterated and spurious things are being sold and it has become so common that the fair name of articles for which Mysore is famous is likely to be lost. For example Agarbathis are sold like anything; they are only spurious things and not genuine ones. I wish the Department takes some care to prevent such things being sold and catch hold of a few of them and give public notice that such sale is prohibited under law and such persons will be brought to book. In Mysore, for example, they find very easy sale of such things; everybody knows all over the world that Mysore State is famous for quite a few things and they would like to have them; in their anxiety to purchase them, they take only the wrong things. It will bring down the prestige of this Government or the State or the commodity that we supply. So, Sir, this adulteration should be prevented. Unless that is done, it is very difficult for the special products to be kept at a very high standard.

Sir, the other point I would like to mention is about Motor Vehicles Act. The Minister has made a statement in some Seminar yesterday about it and it is just those points which I would like to refer to. The administration of Motor Vehicles Act is more or less done, though it may be very unpalatable, on monetary considerations. He was pleased to say that the issue of driving licences has become almost a licence if it is not properly administered.

(SRI K. S. SURYANARAYANA RAO)

4-00 P.M.

It is true that everything is on monetary consideration. Please do not mistake me. My own nephew was asked to pay Rs. 10 if he wanted a licence. He did not pay because he was a competent driver and he had a right to get it. After three months he got his licence. The same is the condition with reference to licencing and inspection of vehicles. A large number of accidents that happen today on the roads is entirely due to bad inspection. There is no proper inspection at all. They are renuewed evry year merely because the inspectorate O. Ks them. It can happen for two reasons. Either the responsible officer is negligent of his duty or he is in receipt of some gratification for passing the vehicle. There cannot be any other argument. If we are to avoid the number of accidents, that we notice now-a-days on the roads, it is due to non-enforcement of the rules—the rules that ought to be observed by the driver and by the owner of the vehicle. If that is done Sir, possibly the effect of the administration will be felt by the people. So many of the good things we may be doing is lost sight of in these small things that the public very frequently notice. Teherefore, Sir, I would request the Hon'ble Minister to look into these small complaints and see that such things do not happen, and that enforcement is properly done.

Sir, I believe that publicity and advertisement comes under this and I would like to say one word. There was a suggestion before the Government some time back to have a qualified and trained publicity officer. Publicity is very important medium. It is no use having a person from the administrative services. I believe this post was advertised and applications were called for from people who possessed qualification and experience in journalism. I am afraid if that cannot be done and if they decide to continue in the present form, of course it can be run. The publicity is there. Advertisement will also be there and the money will be spent. But what would be the effect and what would be the return ? By such advertisement is a thing that has not been appreciated or evaluated. Therefore a person having the technical knowledge of advertisements should be the person who should head this Department. It is not merely giving patronage in giving advertisement to Newspapers. Publicity and Propaganda is a large sphere. For example, audio-visual aids, publications, production of films. These are things that should be used for our advantage. I do not know if the Department is equipped with technical personnel.

The other point is, the Minister made a statement some time ago about the policy of advertisement. There are certain accepted principles which should be followed in matters of advertisements to the journals and periodicals. It is not so much what they write, whether it is infavour or against a particular policy of the State Government, or against particular institution. All over India they have accepted cortain code of conduct on the part of the advertisement

agencies. So they cannot confer this partonge depending on the policy of the particular type or particular character of the Newspaper. It should conform to certain standards. What is its standing? What is its circulation. I am not suggesting that every paper should not get the patronage. I only say that they should get the patronage to the extent they deserve.

Sri R. M. PATIL.—What is the patronage referred to? There is no patronage so far as Government advertisement is concerned. It is business. We must purchase these columns and purchasing the columns is at the discrtion of the Government.

Sri K. S. SURYANARAYANA RAO.—It is a business proportions so far as the paper is concerned. That is what I am saying.

Sri R. M. PATIL.—Even from the point of view of the Government, so far as commercial advertisements are concerned, we want to see which of the articles are to be sold in which market? From that point of view, we have to requisition on the columns.

Sri K. S. SURYANARAYANA RAO.—Yes, I agree that that should be the guiding principle. If that is being done, I am happy, because that is the accepted principle. I was under an imprerssion that it was not done.

Sri R. M. PATIL.—That is your view.

Sri K. S. SURYANARAYANA RAO.—It is not my view. It is my impression.

Then one more point about this advertisement Sir. How their handling of advertisement is bad is this. Sharavathi is a very big project. Correspondents and news representatives had gone there from all over India. In Mysore there is a publicity Department and there are as many as 9-10 Newspapers. They may be small. I will tell you the future of the country is not in the hands of the big Newspapers. It is in our encouraging small Newspapers. What is the courtesy shown to them. They were waiting thinking that they would be picked up. The Department either slept over the matter or they did not get approval from the headquarters. The result is that they were not considered as non existing for purposes of attending such a big function. Sir, if this is the type of assistance and attention they give to publicity. I am afraid I must ask you to think about it again.

Sir, the last point I would like to mention is about Jails. Sir, I know many good things are being done. So many new ideas are being incorporated, in the administration of the Jails also. I had been to the Jail. I have visited a few Jails. There are two things that we notice. From the point of view of the culprit or the person suffering imprisonment, it is just possible that the rigour of the law is being slackened. He is treated much more lieniently then what is noramally expected for a convict in a Jail. No doubt, it should be reformative punishment but it should be at the same time that he should be made to feel that being

(SRI K. S. SURYANARAYANA RAO)

in a Jail is not only a social stigma but also it means something in terms of physical strain and physical handicap and discomfort to the person concerned. Today, what we find is, we have introduced several industries and several crafts for them. That is the physical aspect. But the mental make-up of the criminal is not transformed at all. The man is not changed. There is no purpose or idea in changing him sociologicallay or psychologically. There is no psychological change-over from the habit of crime towards becoming a sociable and respectable citizen.

Sri R. M. PATIL.—Have you any occasion to see...

Sri K. S. SURYANARAYANA RAO.—I have had occasions of seeing culprits coming out and getting back. If there is a change in their mental make up, that will go a long way in their rehabilitation. There is an organisation called the Rehabilitation Organisation. If the convicts are to be members of this association, it is branding them as persons being in the Jail. Rehabilitation personal should be different from the persons who had been to jail. and who are convicts. I would very much wish the Hon'ble Minister bestows a little more thought on the psychological aspect of jail reform. I thank on the Chair for having been lenient in giving me time to express my views.

†ಶ್ರೀ ಸಿದ್ದಯ್ಯ ಕಾಶೀಮಠ.—ಸ್ವಾಮಿ ಅಧ್ಯಕ್ಷರೇ, ರಾಜ್ಯದಲ್ಲಿ ವಾಹನಗಳ ಮೇಲ್ವಿಚಾರಣೆಯನ್ನು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸಿಗೆ ವಹಿಸಿ ಅದರ ಮೂಲಕ ಆಡಳಿತ ನಡೆಸುತ್ತಿದ್ದೀರಿ. ಆದರೆ ಇವತ್ತು ವಾಹಗಳ ಮಾಲೀಕರು ತೆರಿಗೆ ಮತ್ತು ಲೈಸೆನ್ಸ್ ಫೀಜನ್ನು ಕೊಡಲು ಕಷ್ಟವಾಗಿದೆ, ಅದನ್ನು ಹಿಂದೆ ಹೇಳಿದರೂ ನಿವಾರಣೆ ಮಾಡಿಲ್ಲ. ಧಾರವಾಡದಲ್ಲಿ ರೀಜನಲ್ ಟ್ರಾನ್ಸ್ ಪೋರ್ಟ್ ಆಫೀಸುಗಳ ಸಂಖ್ಯೆ ಜಾಸ್ತಿಮಾಡಿರುವುದಿಲ್ಲ. ಆದರೆ ವಾಹನಗಳು ಮತ್ತು ಟ್ರಕ್ಕುಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಮತ್ತು ಸಾಮಾನುಗಳನ್ನು ಹೇರಲು ಟ್ರಕ್ಕುಗಳಿಗ ಹೆಚ್ಚು ಬೇಡಿಕೆ ಇರುವುದರಿಂದ ತೆರಿಗೆ ಹೆಚ್ಚಿ ಅದನ್ನು ಪಾವತಿ ಮಾಡುವುದು ಕಷ್ಟವಾಗಿದೆ. ಈ ತೆರಿಗೆಯನ್ನು ಶೇಕಡ 50ರಷ್ಟಾದರೂ ಕಡಮೆ ಮಾಡಬೇಕು. ಟ್ರಕ್ಕುಗಳ ಸಂಖ್ಯೆ ಮಿತಿಮೀರಿರುವುದರಿಂದ ನಾನು ಈ ಸಲಹೆ ಮಾಡುತ್ತಿದ್ದೇನೆ.

ಜೈಲುಗಳ ವಿಷಯ ನೋಡಿದರೆ ಎಲ್ಲಾ ಕಡೆಗಳಲ್ಲೂ ಜೈಲು ಸ್ಥಾಪನೆಯಾಗಿದೆ, ಆ ಬಾಬಿನ ಹಣ ಸರಿಯಾಗಿ ಖರ್ಚಾಗುತ್ತಿದೆ. ಟೆಂಡರು ಕರೆದು ಜೈಲಿಗೆ ಆಹಾರ ಒದಗಿಸಲು ಏರ್ಪಾಡು ಮಾಡಿದ್ದಾರೆ. ಆದರೆ ತಾಲ್ಲೂಕುಗಳಲ್ಲಿರುವ ಜೈಲುಗಳಲ್ಲಿ ಖೈದಿಗಳಿಗೆ ಸರಿಯಾಗಿ ಆಹಾರ ದೊರೆಯದೆ ಅವರು ಉಪವಾಸ ಮಾಡಬೇಕಾದ ಪರಿಸ್ಥಿತಿ ಇದೆ ಈ ಸಂಬಂಧದಲ್ಲಿ ಸರಿಯಾದ ಮೇಲ್ವಿಚಾರಣೆ ನಡೆಯಬೇಕು. ಮತ್ತು ಜೈಲುಗಳಲ್ಲಿ ತಯಾರಿಸುವ ಜಮಖಾನ ಮುಂತಾದ ಸಾಮಾನುಗಳು ಬೇಕಾದಾಗ, ಮೊದಲು ಜೈಲಿನಲ್ಲಿ ತಯಾರಾಗುವುದನ್ನು ತೆಗದುಕೊಳ್ಳುವುದಕ್ಕೆ ಪ್ರಾಶಸ್ತ್ಯ ಕೊಡಬೇಕು, ಸಹಕಾರ ಇಲಾಖೆ ಮುಂತಾದುವುಗಳಿಗೆ ಫರ್ನಿಚರ್, ಜಂಖಾನ ಮುಂತಾದ್ದು ಬೇಕಾದಾಗ ಜೈಲಿನಲ್ಲಿ ತಯಾರಾಗಿರುವುದನ್ನೇ ತೆಗೆದು ಕೊಳ್ಳಬೇಕೆಂದು ನಿರ್ಬಂಧ ಮಾಡಿದರೆ ಜೈಲುವಾಸಿಗಳಿಗೆ ಹೆಚ್ಚಿನ ಲಾಭವಾದಂತಾಗುತ್ತದೆ.

ಇನ್ನು ಬೋರಸ್ಟಲ್ ಶಾಲೆಗಳ ಬಗ್ಗೆ ಒಂದೆರಡು ಮಾತು. ಈಗ ನಮ್ಮ ದೇಶದಲ್ಲಿ ಎರಡು ಬೋರ್ಸ್ಟಲ್ ಶಾಲೆಗಳಿವೆ, ಒಂದು ಹುಬ್ಬಳ್ಳಿಯಲ್ಲಿವೆ, ಇನ್ನೊಂದು ಬಳ್ಳಾರಿಯಲ್ಲಿದೆ. ಅಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆಂಬ ಮಾಹಿತಿ ಸಭೆಗೆ ಕೊಡಬೇಕು. ಈ ಶಾಲೆಗಳಲ್ಲಿರುವ ಜನರಿಗೆ ಸರಿಯಾದ ರೀತಿಯಿಂದ ಆಹಾರ, ಬಟ್ಟೆ ಮುಂತಾದನ್ನು ಒದಗಿಸುತ್ತಿಲ್ಲವೆಂದು ತಿಳಿದು ಬಂದಿದೆ. ಅಷ್ಟೇ ಅಲ್ಲ, ಆ ಶಾಲೆಗಳಿಗೆ ಪ್ರತ್ಯೇಕ ಕಟ್ಟಡ ಮುಂತಾದುವನ್ನು ಸಹ ಒದಗಿಸಬೇಕು. ಈಗ ಅವಕ್ಕೆ ತಮ್ಮದೇ ಆದ ಕಟ್ಟಡಗಳಿಲ್ಲದೆ ಅವು ಬಾಡಿಗೆ ಕಟ್ಟಡದಲ್ಲಿವೆ. ಹೊಸದಾಗಿ ಕಟ್ಟಡ ಮಾಡಿಕೊಡಬೇಕು, ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲಿ ಕಟ್ಟಡಗಳನ್ನು ಒದಗಿಸಬೇಕು.

ಪೊಲಿಟಿಕಲ್ ಪ್ರಿಸನರ್ಸ್‌ಗೆ ಸರಿಯಾದ ಟ್ರೀಟ್‌ಮೆಂಟ್ ಇಲ್ಲ. ಹಿಂದೆ ಸೆಂಟ್ರಲ್ ಜೈಲಿನಲ್ಲಿ ಕಮ್ಯುನಿಸ್ಟ್ ಸದಸ್ಯರಿದಾಗ ದೂರು ಕೊಟ್ಟಿದ್ದರು. ಆದರೂ ಇದುವರೆಗೂ ಅದನ್ನು ಸರಿಪಡಿಸಿರು ವುದಿಲ್ಲ. ರಾಜ್ಯದ ಸಲುವಾಗಿ ಜನರ ಹಿತದ ಸಲುವಾಗಿ ಅವರಿಗೆ ಸರಿಯಾದ ವ್ಯವಸ್ಥೆ ಮಾಡ ಬೇಕೆಂದು ಹೇಳುತ್ತೇನೆ.

ಪೋಲೀಸ್ ಖಾತೆ ಬಗ್ಗೆ ಧಾರವಾಡಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡುವುದಿದೆ. ದಕ್ಷರಾದ ಅಧಿಕಾರಿಗಳು ಅಲ್ಲಿರುವುದರಿಂದ ಒಂದು ವರ್ಷದಿಂದ ಅಲ್ಲಿ ಯಾವರೀತಿಯ ಕಚ್ಚಾಟವಾಗಲಿ, ಗಲಾಟೆ ಯಾಗಲಿ ಇಲ್ಲದೆ ಕೇಸುಗಳ ಸಂಖ್ಯೆ ಕಡಮೆಯಾಗಿದೆ. ಆದರೂ ಕೂಡ ಒಂದೆರಡು ಸಲಹೆ ಕೊಡು ತ್ತೇನೆ. ಧಾರವಾಡದಲ್ಲಿ ಡಿ.ವೈ.ಎಸ್.ಪಿ. ಡಿವಿಜನ್ನು 3 ಮಾತ್ರ ಮಾಡಿದ್ದೀರಿ. ಅದು ಸಾಲದು. ಗದಗಿನಲ್ಲಿ ಮತ್ತೊಂದು ಸಬ್ ಡಿವಿಜನ್ ಮಾಡಿ 4 ತಾಲ್ಲೂಕುಗಳಿಗೆ ಒಂದು ಡಿವಿಜನ್ ಇರುವಂತೆ ಮಾಡಬೇಕು. ಅದು ಬಹಳ ದೊಡ್ಡ ಜಿಲ್ಲೆ, ಹಾವೇರಿಯಿಂದ ಮುಂಡರ್ಗಿಗೆ ಬರುವುದು ದುಸ್ತರ, ಆದುದರಿಂದ ಗದಗಿನಲ್ಲಿ ಮತ್ತೊಂದು ಡಿವಿಜನ್ ಮಾಡಬೇಕೆಂದು ಸಲಹೆಮಾಡುತ್ತೇನೆ.

ಈಗ ಪೋಲೀಸು ಕಾನ್‌ಸ್ಟೇಬಲ್ಲುಗಳಿಗೆ ಕ್ವಾರ್ಟರ್ಸ್‌ಗೆ ಏರ್ಪಾಡು ಮಾಡುತ್ತಿದ್ದೀರಿ. ಧಾರವಾಡ ಜಿಲ್ಲೆಯಲ್ಲಿ ಕ್ವಾರ್ಟರ್ಸ್ ಕಡಮೆ ಇರುವುದರಿಂದ ಅಲ್ಲಿಗೆ ಹೆಚ್ಚಾಗಿ ಕ್ವಾರ್ಟರ್ಸ್ ಒದಗಿಸ ಬೇಕು. ಅಲ್ಲದೆ ಪೋಲೀಸರ ಪರಿಸ್ಥಿತಿ ಚಿಂತಾಜನಕವಾಗಿದೆ. ಅದಕ್ಕಾಗಿ ಅವರಿಗೆ ಪಗಾರ ಬಡ್ತಿ ಮಾಡಿ 100 ರೂಪಾಯಿನಿಂದ ಅವರ ಪಗಾರ ಪ್ರಾರಂಭಮಾಡಬೇಕು.

ಇನ್ನೊಂದು ವಿಚಾರ ಈಗಾಗಲೇ ಹೇಳಿವರು. ಪಾನನಿರೋಧದ ಕೇಸುಗಳನ್ನು ಹಿಡಿಯಲು ಪೋಲೀಸರಿಗೆ ಬಹಳ ಕಷ್ಟವಾಗಿದೆ. ಅವರಿಗಿರುವ ತೊಂದರೆ ಏನೆಂದರೆ ಈಗ ಕೊಡುವ ಉಡುಪು ಸರಿಯಾಗಿಲ್ಲ. ಮುಂಬಯಿ ಕರ್ಣಾಟಕದಲ್ಲಿದ್ದ ಉಡುಪು ಅನುಕೂಲವಾಗಿತ್ತು. ಕಳ್ಳರನ್ನು ಹಿಡಿಯ ಬೇಕಾದರೆ ಅವರು ಓಡಬೇಕಾಗುತ್ತದೆ. ಆದುದರಿಂದ ಅವರಿಗೆ ಹಗುರವಾಗಿರುವ ಉಡುಪನು ಕೊಟ್ಟರೆ ಅನುಕೂಲ. ಅವರು 24 ತಾಸೂ ಬೂಡ್ಸು ಮತ್ತು ಪೇಟ ಹಾಕಿಕೊಂಡಿರಬೇಕಾಗಿರುವುದ ರಿಂದ ಬಹಳ ಕಷ್ಟವಾಗಿದೆ. ಆದುದರಿಂದ ಈಗಿರುವ ಪೇಟ ವಾಪರ್ಾಡುಮಾಡಿ ಹಿಂದೆ ಮುಂಬಯಿ ಕರ್ಣಾಟಕದಲ್ಲಿದ್ದ ಮತ್ತು ಈಗಿರುವಂಥ ಟೋಪಿಯನ್ನು ಕೊಡಬೇಕೆಂದು ಸಲಹೆಮಾಡುತ್ತೇನೆ.

ಹೋಂಗಾರ್ಡ್ಸ್ ವಿಚಾರದಲ್ಲಿ ಬಹಳ ಅನಾನುಕೂಲವಾಗಿದೆ. ಹಿಂದೆ ಒಂದು ತಾಲ್ಲೂಕಿಗೆ ಒಂದು ಯೂನಿಟ್ ಎಂದು ಮಾಡಿದ್ದರು, ಬಹಳ ಸುವ್ಯವಸ್ಥಿತವಾಗಿತ್ತು. ಈಗ ಧಾರವಾಡದಲ್ಲಿ ಮಾತ್ರ ಯೂನಿಟ್ ಇದ್ದು ಉಳಿದ ಕಡೆ ಇಲ್ಲ. ಪ್ರತಿ ತಾಲ್ಲೂಕಿನಲ್ಲೂ ಈಗ ಟ್ರೈನಿಂಗ್ ಆದವ ರಿದ್ದಾರೆ. ಪ್ರತಿ ತಾಲ್ಲೂಕಿಗೂ ಹೋಂಗಾರ್ಡ್ ಕಮ್ಯಾಂಡೆಂಟನ್ನು ಹಾಕಿ ಆ ಮೂಲಕ ಸೌಕರ್ಯ ಕಲ್ಪಿಸಿಕೊಡಬೇಕು.

ಕೊನೆಯದಾಗಿ ಟೂರಿಸಂ ಬಗ್ಗೆ ಒಂದೆರಡು ಮಾತು ನಮ್ಮಲ್ಲಿ ನಾನಾ ಕಡೆ ಸಾಕಾದಷ್ಟು ಧರ್ಮಕ್ಕೆ ಸಂಬಂಧಪಟ್ಟ ಸ್ಥಳಗಳು ಮತ್ತು ಪ್ರೇಕ್ಷಣೀಯ ಸ್ಥಳಗಳು ಇವೆ. ಪಬ್ಲಿಸಿಟಿ ಮತ್ತು ಟೂರಿಸಂ ಇಲಾಖೆಯವರು ಎಷ್ಟು ಹಸ್ತಪತ್ರಿಕೆಗಳನ್ನು ತಯಾರುಮಾಡಿದ್ದಾರೆ? ನಮ್ಮ ಭಾಗದಲ್ಲಿ ಸವದತ್ತಿ ಯಲ್ಲಮ್ಮ, ಗೋಕರ್ಣ, ಬಾದಾಮಿ, ಇಂಥ ಪ್ರೇಕ್ಷಣೀಯ ಸ್ಥಳಗಳಿವೆ. ಹಳೇ ಮೈಸೂರಿನಲ್ಲಿ ಹಿಂದೆ ಇದ್ದ ಹಾಗೆ ಇವತ್ತು ಪ್ರಚಾರ ಕಾರ್ಯ ನಡೆಯುತ್ತಿಲ್ಲ. ರಾಜ್ಯದಲ್ಲಿರುವ ಎಲ್ಲ ಧಾರ್ಮಿಕ ಸ್ಥಳಗಳ ಮತ್ತು ಪ್ರೇಕ್ಷಣೀಯ ಸ್ಥಳಗಳ ಸಂಬಂಧದಲ್ಲಿ ಹಸ್ತಪತ್ರಿಕೆಗಳನ್ನು ತಯಾ ರಿಸಿ ಪ್ರತಿಯೊಬ್ಬರಿಗೂ ಕೊಡುವಂತೆ ಪಬ್ಲಿಸಿಟಿ ಇಲಾಖೆ ಮಾಡಬೇಕು ಎಂದು ಸೂಚನೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ ಸ್ವಾಮೀ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಇರುವ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತೇನೆ. ಪೋಲೀಸ್ ಖಾತೆ ಮುಖ್ಯವಾದ ಖಾತೆ. ರಾಜ್ಯದ ಲ್ಲಾಗಲೀ, ಬೇರೆ ಕಡೆಗಳಲ್ಲಾಗಲೀ ಜನರಲ್ಲಿ ಶಾಂತಿಭಂಗವಾಗುವ ಸಂದರ್ಭದಲ್ಲಿ ನೆಮ್ಮದಿಯನ್ನು ಕಾಪಾಡತಕ್ಕ ಮತ್ತು ರಕ್ಷಣೆ ಮಾಡತಕ್ಕ ಅತಿ ಮುಖ್ಯವಾದ ಖಾತೆ. ಅನೇಕ ಸದಸ್ಯರು ಅನೇಕ ತರದಲ್ಲಿ ಈ ಖಾತೆಯಲ್ಲಿನ ಅನೇಕ ಲೋಪದೋಷಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಖಾತೆಯನ್ನು ಮೂರು ವರ್ಷಗಳ ಕಾಲದಿಂದ ಶ್ರೀಮಾನ್ ಆರ್. ಎಂ. ಪಾಟೀಲರು ತೆಗೆದುಕೊಂಡ ನಂತರ ಪೋಲೀಸ್ ಇಲಾಖೆಯಲ್ಲಿ ದಕ್ಷತೆ ಮೂಡಿ ಅನೇಕ ಕೆಲಸಕಾರ್ಯಗಳನ್ನು ಮಾಡುತ್ತ ಬಂದಿದ್ದಾ ರೆನ್ನುವುದರಲ್ಲಿ ಸಂಶಯವಿಲ್ಲ. ಪೋಲೀಸ್ ಇಲಾಖೆ ಧರ್ಮಸಹಿತವಾಗಿ ದರ್ಪದಿಂದ ಆಡಳಿತವನ್ನು ನಡೆಸಬೇಕು. ಆದರೆ ಕೆಲವರು ಧರ್ಮರಹಿತ ಆಡಳಿತವನ್ನು ನಡೆಸುತ್ತಿರುವುದರ ಬಗ್ಗೆ ಸಚಿವರು ಹೆಚ್ಚಿಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆನ್ನುವ ನಂಬಿಕೆ ಇದೆ. ಪೋಲೀಸ್ ಇಲಾಖೆಯಲ್ಲಿ ರುವವರೆಲ್ಲರೂ ಲಂಚಕೋರರು, ಭ್ರಷ್ಟಾಚಾರಕ್ಕೆ ಇಳಿದಿದ್ದಾರೆ ಎನ್ನುವುದರಲ್ಲಿ ಹುರುಳಿಲ್ಲ. ಒಳ್ಳೆಯ ಜನರು ಕೂಡ ಆ ಇಲಾಖೆಯಲ್ಲಿದ್ದಾರೆ ಎನ್ನುವುದನ್ನು ಮಾನ್ಯಸದಸ್ಯರು ಒಪ್ಪಿಕೊಳ್ಳಬೇಕು. ಪ್ರತಿಯೊಬ್ಬರೂ ಕೂಡ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ, ಲಂಚಕೋರರು ಎಂದು ಹೇಳಿವರೆ ಇನ್ನು

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಸತ್ಯದ ಮಾರ್ಗ ಎಲ್ಲಿದೆ ಎಂದು ಪ್ರಸ್ತಾಪ ಮಾಡುತ್ತೇನೆ. ನಮ್ಮನ್ನು ನಾವು ಪ್ರಶ್ನೆ ಮಾಡಿಕೊಳ್ಳೋಣ. ನಾವು ಎಷ್ಟರಮಟ್ಟಿಗೆ ನಡೆಯುತ್ತಿದ್ದೇವೆ ಎಂದು ಯೋಚನೆಮಾಡಿಕೊಂಡು ಮುಂದುವರಿಯೋಣ. ಎಲ್ಲಿಯಾದರೂ ಲಂಚಕೋರತನ, ಭ್ರಷ್ಟಾಚಾರ ನಡೆಯುತ್ತಿದ್ದರೆ ಅವನ್ನು ಸರ್ಕಾರಕ್ಕೆ ತಿಳಿಸಿದರೆ ಸಂಬಂಧಪಟ್ಟ ಸಚಿವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಅವರು ಕಾರ್ಯಕ್ರಮವನ್ನು ತೆಗೆದುಕೊಳ್ಳದಿದ್ದರೆ ಅನಂತರ ಈ ಸಭೆಯಲ್ಲಿ ಪ್ರಸ್ತಾಪ ಮಾಡಿದರೆ ಒಪ್ಪಿಕೊಳ್ಳಬಹುದು. ಭ್ರಷ್ಟಾಚಾರ ನಡೆಯುತ್ತಿದೆ, ಲಂಚಕೋರತನ ನಡೆಯುತ್ತಿದೆ, ಎಂದ ಹುರುಳಿಲ್ಲದ ಮಾತುಗಳನ್ನಾಡುವುದರಿಂದ ಏನು ಪ್ರಯೋಜನ. ಅಧಿಕಾರಿಯು ಮೇಲೆ ಛಾರ್ಜ ಷೀಟ್ ಹಾಕಬೇಕದಾಗ ಸರಿಯಾದ ರುಜುವಾತುಗಳನ್ನು ಕೊಟ್ಟು ಹೇಳಿದರೆ ಅಂಥವರನ್ನು ಮನೆಗೆ ಕಳಿಸಬಹುದು. ಅದನ್ನು ಬಿಟ್ಟು ಎನೋ ಎಲ್ಲೋ ಲಂಚ ತೆಗೆದುಕೊಳ್ಳುತ್ತಾರೆ ಎಂದು ಈ ಸಭೆಯಲ್ಲಿ ಹೇಳಿದರೆ ಅದಕ್ಕೆ ಪರಿಹಾರವಿದೆಯೇ ? ಪ್ರಯೋಜನವಿಲ್ಲದ ವಿಚಾರಗಳನ್ನು ಸಭೆಯಲ್ಲಿ ಏಕೆ ಪ್ರಸ್ತಾಪ ಮಾಡಬೇಕು ? ಜವಾಬ್ದಾರಿಯುತರಾಗಿ ಯಾರು ಲಂಚಕೋರರಿದ್ದಾರೆ ಎನ್ನುವುದನ್ನು ಸಿದ್ಧಾಂತ ಮಾಡಿದರೆ ಅಂಥವರನ್ನು ನಾವೂ ನೀವೂ ಇಬ್ಬರೂ ಸೇರಿ ಮನೆಗೆ ಕಳುಹಿಸೋಣ. ಇಂಥ ಕಾರ್ಯಗಳಲ್ಲಿ ತೊಡಗಬೇಕೇ ಏನಾ ಸಭೆ ಸೇರಿದಾಗ ವಿರೋಧ ಪಕ್ಷವನ್ನು ಮಾಡಿಕೊಂಡಿದ್ದೇವೆ, ಟೀಕೆ ಮಾಡುವುದು ನಮ್ಮ ಕೆಲಸ ಎನ್ನುವುದನ್ನು ಬಿಟ್ಟು ನಾವು ನೀವೂ ಕೂಡ ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಬೇಕು ಎಂದು ಅವರಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ರಾಜ್ಯದಲ್ಲಿ ಪಾನನಿರೋಧದ ಬಗ್ಗೆ ಎಲ್ಲ ಸದಸ್ಯರೂ ಪ್ರಸ್ತಾಪ ಮಾಡಿದ್ದಾರೆ. ಅದು ಫಲಕಾರಿಯಾಗಿಲ್ಲ ಎಂದು ನಾನಾದರೂ ಹೇಳುತ್ತೇನೆ. ಏಕೆ ಫಲಕಾರಿಯಾಗಿಲ್ಲ ಎನ್ನುವ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ಬೇಲಿ ಎದ್ದು ಹೊಲವನ್ನು ಮೇಯುತ್ತಿದೆ ಎಂದು ಹೇಳುವ ಗಾದೆಯಂತಾಗಿದೆ. ಪಾನನಿರೋಧದ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಕೇಂದ್ರ ಸರ್ಕಾರವೂ ಕೂಡ ಇದರ ಬಗ್ಗೆ ವಿಚಾರ ಮಾಡುತ್ತಿದೆ. ಮಾನ್ಯ ಸಚಿವರು ಶೀಘ್ರವಾಗಿ ಇದರ ಬಗ್ಗೆ ವಿಚಾರ ಮಾಡಬೇಕೆಂದು ತಿಳಿಸುತ್ತೇನೆ.

ರಾಜ್ಯದಲ್ಲಿ ವಾಹನಗಳ ವೇಗ ಬಹಳ ಜಾಸ್ತಿಯಾಗಿದೆ. ಲಾರಿಗಳು ಮತ್ತು ಬಸ್ಸುಗಳು ಅತಿ ವೇಗವಾಗಿ ಹೋಗುತ್ತವೆ. ರಾತ್ರಿ ಕಾಲದಲ್ಲಿ 'ಡಿಪ್ ಅಂಡ್ ಡಿಮ್' ಕೂಡ ಇರುವುದಿಲ್ಲ. ರಾಂಗ್ ಸೈಡ್‌ನಲ್ಲಿ ಹೋಗುತ್ತಾರೆ. ಹೀಗೆ ಹೋಗುವಾಗ ಪ್ರಯಾಣಿಕರ ಮೇಲೆ ಹೋಗತಕ್ಕ ಸಂದರ್ಭ ಬಂದು ಬೇಕಾದಷ್ಟು ಅನಾಹುತಗಳಾಗುತ್ತವೆ. ಒಂದು ಗುಪ್ತ ಪೋಲೀಸ್ ದಳವನ್ನು ರಚಿಸಿ ರಸ್ತೆಗಳಲ್ಲಿ ವೇಗ ಮೀರಿಹೋಗುವ ಲಾರಿ, ಬಸ್ ಇಂಥವನ್ನು ಹಿಡಿದು ಕೇಸ್ ಹಾಕಿ ಬಂದೋಬಸ್ತು ಮಾಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಭದ್ರಾವತಿ ನಗರದಲ್ಲಿ 75-80 ಸಾವಿರ ಪ್ರಜಾಸಂಖ್ಯೆ ಇದೆ. ಇದು ಬೆಳೆಯುತ್ತಿರುವ ಪಟ್ಟಣ. ಇಲ್ಲಿ ಪೋಲೀಸ್ ದಳ ಕಡಮೆ. ಅಕಸ್ಮಾತ್ ಏನಾದರೂ ಗಲಭೆ ಸಂಭವಿಸಿದರೆ ಶಿವಮೊಗ್ಗದಿಂದ ಪೋಲೀಸ್ ಸಿಬ್ಬಂದಿಯನ್ನು ಕರೆಸಬೇಕು. ಆರು ತಿಂಗಳ ಹಿಂದೆ ಆಹಾರ ಧಾನ್ಯಗಳ ವಿಚಾರದಲ್ಲಿ ಒಂದು ಗಲಭೆ ಆಯಿತು. ಆಗ ಪರಿಸ್ಥಿತಿಯನ್ನು ಹತೋಟಿಗೆ ತರಬೇಕಾದರೆ ಬಹಳ ಕಷ್ಟವಾಯಿತು. ದಯವಿಟ್ಟು ಅಲ್ಲಿಗೆ ಹೆಚ್ಚು ಪೋಲೀಸ್ ಸಿಬ್ಬಂದಿಯನ್ನು ಒದಗಿಸಬೇಕು. ಇದರ ಜೊತೆಗೆ ಪೋಲೀಸ್ ಅಧಿಕಾರಿಗಳ ಮನೆಗೆ ಟೆಲಿಫೋನ್ ಸೌಕರ್ಯವಿಲ್ಲ. ಏನಾದರೂ ಗಲಭೆ ಆದರೆ ಅವರಿಗೆ ಹೋಗಿ ಹೇಳುವುದರೊಳಗಾಗಿ ಅಚಾತುರ್ಯಗಳು ಆಗಿ ಹೋಗುತ್ತವೆ. ಆದುದರಿಂದ ಪೋಲೀಸ್ ಅಧಿಕಾರಿಗಳ ಮನೆಗಳಿಗೆ ಟೆಲಿಫೋನ್ ವ್ಯವಸ್ಥೆ ಆಗಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

† **Sri L. B. BIRJE** (Khanapur).—[Marathi]

ಶ್ರೀ ಎಸ್. ಎಂ. ಗುರಡ್ಡಿ (ಮುದ್ದೇಬಿಹಾಳ್).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಇರುವಂಥ ಡಿಮ್ಯಾಂಡ್ ನಂಬರ್ 4, 12, 13 ಮತ್ತು 41 ಈ ಬೇಡಿಕೆಗಳ ಮೇಲೆ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ ಪೋಲೀಸು ಇಲಾಖೆ ಮತ್ತು ಜೈಲು ಇವುಗಳ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಪೋಲೀಸು ಖಾತೆ ಇದು ನಿಜವಾಗಿಯೂ ದೇಶದ ಮತ್ತು ರಾಜ್ಯದ ಲಾ ಅಂಡ್ ಆರ್ಡರನ್ನು ಕಾಪಾಡತಕ್ಕಂಥ ಮುಖ್ಯವಾದಂತಹ ಒಂದು ಖಾತೆ. ಮತ್ತು ಸಮಾಜಕ್ಕೆ ಗೌರವವನ್ನು ತರುವಂಥಾದ್ದು. ಆದ್ದರಿಂದ ನಮ್ಮ

ಸಮಾಜ ಕೂಡ ಈ ಪೋಲೀಸು ಖಾತೆಯನ್ನು ಗೌರವದಿಂದ ನೋಡಿಕೊಳ್ಳಬೇಕಾಗಿದೆ. ಪೋಲೀಸು ಖಾತೆಯನ್ನು ಸಮಾಜದಲ್ಲಿ ಕೆಲವರು ಅಗೌರವದಿಂದ ನೋಡುವುದಕ್ಕೆ ಮುಖ್ಯಕಾರಣವೇನೆಂದರೆ ಆ ಖಾತೆಯಲ್ಲಿರತಕ್ಕ ಕೆಲವು ಜನರು ಮಾಡುವಂತಹ ಅನ್ಯಾಯ ಮತ್ತು ಅಕೃತ್ಯಗಳನ್ನು ನೋಡಿ ಜನರಿಗೆ ಈ ಖಾತೆಯಲ್ಲಿ ವಿಶ್ವಾಸವಿಲ್ಲದಂತಾಗಿದೆ. ಪೋಲೀಸ್‌ಎಂದ ಕೂಡಲೇ ಲಂಚವನ್ನು ತಿನ್ನುವ ಖಾತೆ ಎನ್ನುವ ಭಾವನೆ ಬಹಳ ಜನರಲ್ಲಿ ಮೂಡಿದೆ. ಆ ಭಾವನೆ ಈಗೀಗ ಸ್ವಲ್ಪಕಡಿಮೆ ಆಗಲಿಕ್ಕೆ ಹತ್ತಿದೆ. ಪೋಲೀಸಿನವರಿಂದ ಜನತೆಗೆ ನಿಜವಾಗಿಯೂ ನ್ಯಾಯ ಸಿಕ್ಕಬೇಕಾದರೆ ಈ ಇಲಾಖೆಯನ್ನು ಪುನರ್ ವಿಮರ್ಶೆ ಮಾಡಬೇಕಾಗಿತ್ತು. ಅಂಥಾ, ಒಂದು ವ್ಯವಸ್ಥೆಯನ್ನು ಮಾಡುವುದಕ್ಕೋಸ್ಕರ ಗೃಹ ಮಂತ್ರಿಗಳು ಮುಖ್ಯವಾದ ಕೆಲವೊಂದು ಸುಧಾರಣೆಗಳನ್ನು ಕೈಕೊಂಡಿದ್ದಾರೆ. ಈ ಇಲಾಖೆಯಲ್ಲಿ ಕೆಲವೊಂದು ಹುದ್ದೆಗಳಿಗೆ ಡೈರೆಕ್ಟ್‌ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಹತ್ತಿದ್ದಾರೆ. ಪೋಲೀಸ್ ಕಾನ್‌ಸ್ಟೇಬಲ್ ಮುಂತಾದ ಕೆಲವುದರ್ಜೆಯ ಕೆಲಸಗಳಿಗೆ ಎಸ್. ಎಸ್. ಎಲ್. ಸಿ. ಪರೀಕ್ಷೆಯನ್ನು, ಪಾಸು ಮಾಡಿವಂತಹವರನ್ನೂ ಮತ್ತೆ ಕೆಲವು ದೊಡ್ಡ ದೊಡ್ಡ ಕೆಲಸಗಳಿಗೆ ಡಬ್ಬಲ್ ಗ್ರಾಜುಯೇಟ್ಸ್ ಆಗಿರತಕ್ಕವರನ್ನೂ ನೇರವಾಗಿ ನೇಮಕ ಮಾಡಿಕೊಳ್ಳುತ್ತಿರುವುದರಿಂದ ಕೆಲ ಮಟ್ಟಿಗೆ ಈ ಇಲಾಖೆ ಯಲ್ಲಿ ಸುಧಾರಣೆಯಾಗಬಹುದು. ಜನಗಳಿಗೆ ಈ ಖಾತೆಯ ಬಗ್ಗೆ ಇದ್ದ ಕೆಟ್ಟ ಭಾವನೆ ಅಳಿದು ಹೊಸ ಹೆಸರು ಪಡೆಯುವಂತಹ ಕಾಲ ಈ ಖಾತೆಗೆ ತೀವ್ರ ಬರಲಿ. ಕಳೆದ ಒಂದೆರಡು ವರ್ಷಗಳಲ್ಲಿ ಪೋಲೀಸ್ ಇಲಾಖೆ ಸ್ವಲ್ಪ ಸುಧಾರಿಸಲಿಕ್ಕೆ ಹತ್ತಿದೆ, ಮಾನ್ಯ ಗೃಹ ಮಂತ್ರಿಗಳು ಈ ಪೋಲೀಸು ಇಲಾಖೆಯಲ್ಲಿರತಕ್ಕ ಕೆಲವು ಹುದ್ದೆಗಳಿಗೆ ಗ್ರಾಜುಯೇಟರುಗಳನ್ನು, ಡಬ್ಬಲ್ ಗ್ರಾಜುಯೇಟುಗಳನ್ನು ನೇಮಕ ಮಾಡಕೊಳ್ಳುತ್ತಿರುವುದರಿಂದ ಈ ಖಾತೆಯಲ್ಲಿ ವಿದ್ಯಾವಂತ ಜನರು ಹೆಚ್ಚು ಹೆಚ್ಚಾಗಿ ಬರಲಿಕ್ಕೆ ತೊಡಗಿದ್ದಾರೆ. ವಿದಾವಂತರನ್ನು ತಿಳುವಳಿಕೆಯುಳ್ಳವರನ್ನೂ ಇನ್ನು ಹೆಚ್ಚಾಗಿ ಆಕರ್ಷಿಸು ವಂತೆ (ಈ ಖಾತೆಗೆ) ಮಾಡಿದರೆ, ಇನ್ನು ಕೆಲವೇ ದಿನಗಳಲ್ಲಿ ಈ ಖಾತೆ ಸುಧಾರಣೆ ಹೊಂದಿ ಜನರ ವಿಶ್ವಾಸ, ಪ್ರೇಮಕ್ಕೆ ಪಾತ್ರವಾಗಬಹುದೆಂದು ನಾನು ಆಶಿಸುತ್ತೇನೆ.

ಇನ್ನು ಜೈಲು ವಿಚಾರದಲ್ಲಿ ಹೇಳುವುದಾದರೆ ನಮ್ಮ ಡಿಸ್ಟ್ರಿಕ್ಟಿನಲ್ಲಿ ಜೈಲುಗಳಲ್ಲಿ ಹಿಂದೆ ಇದ್ದ ಪರಿಸ್ಥಿತಿ ಈಗ ಇಲ್ಲ ಸ್ವಲ್ಪ ಮಟ್ಟಿಗೆ ಸುಧಾರಿಸಿದೆ. ತಾಲ್ಲೂಕುಗಳಲ್ಲಿರತಕ್ಕ ಸಬ್ ಜೈಲುಗಳು ಏನಿವೆ ಅವು ಬ್ರಿಟೀಷರ ಕಾಲದಲ್ಲಿ ಹೇಗಿದ್ದವೋ ಈಗಲೂ ಅವು ಹಾಗೆಯೇ ಇವೆ. ಒಂದು ರೂಮಿನಲ್ಲಿ 15-20 ಜನಗಳನ್ನು ಕೂಡಿಹಾಕುತ್ತಾರೆ. ಅಲ್ಲಿ ಅವರಿಗೆ ಒಂದು ಲೆಟ್ರಿನ್ ಕೂಡ ಇಲ್ಲ. ಬೆಳಿಗ್ಗೆ, ಅಲ್ಲಿಯ ಎಲ್ಲ ಜನರನ್ನೂ ಹಗ್ಗ ಹಚ್ಚಿಕೊಂಡು ಸಾಲಾಗಿ ಅವರೆಲ್ಲರನ್ನೂ ಮಲವಿಸರ್ಜನೆಗಾಗಿ ಕರೆದು ಕೊಂಡು ಹೋಗುವ ದೃಶ್ಯ ನೋಡಿ ಕೆಡಕೆನಿಸುತ್ತದೆ. ಈ ದೃಷ್ಟಿಯಿಂದ ಈ ಸಬ್ ಜೈಲುಗಳ ಕಡೆ ಮಾನ್ಯ ಮಂತ್ರಿಗಳು ಲಕ್ಷ್ಯಕೊಟ್ಟು ಅವುಗಳನ್ನು ಸುಧಾರಣೆ ಮಾಡಬೇಕು.

ಪೋಲೀಸು ಇಲಾಖೆಯಲ್ಲಿ ಪಾನನಿರೋಧದ ಬಗ್ಗೆ ಆಸಕ್ತಿ ಸ್ವಲ್ಪ ಕಡಿಮೆಯಾಗಿದೆ ಎಂದು ಹೇಳಬೇಕಾಗಿದೆ. ಈ ಪಾನನಿರೋಧ ಅಯಶಸ್ವಿಯಾಗುವುದಕ್ಕೆ ನಿಜವಾಗಿಯೂ ಪೋಲೀಸಿನವರೇ ಮುಖ್ಯ ಕಾರಣ. ದೊಡ್ಡ ದೊಡ್ಡ ಊರುಗಳಲ್ಲಿ ಮಾರಾಟವಾಗುವ ಮಾದಕಪೇಯಗಳ ವಿಚಾರದಲ್ಲಿ ಪೋಲೀಸಿನವರ ಕೈವಾಡ ನಡೆಯುತ್ತಿದೆ ಎಂದು ಮತ್ತು ಅನೇಕ ಕಡೆ ಭಟ್ಟಿ ಸಾರಾಯಿ ದಡೆಯುವುದಕ್ಕೂ ಪೋಲೀಸರ ಕೈವಾಡವೇ ಇರುತ್ತದೆಂದೂ ಜನ ಆಡುತ್ತಾರೆ. ಪಾನನಿರೋಧ ಯಶಸ್ವಿಯಾಗಿ ಆಗಬೇಕಾದರೆ ಪೋಲೀಸು ಖಾತೆಯಲ್ಲಿ ಸ್ವಲ್ಪ ಸುಧಾರಣೆ ಮಾಡಬೇಕು. ಪಾನನಿರೋಧದ ಸಲುವಾಗಿ ಪ್ರತ್ಯೇಕವಾದ ಸಿಬ್ಬಂದಿಯನ್ನು ನೇಮಿಸಿ ಅದನ್ನು ಯಶಸ್ವಿಯಾಗಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಹಿಂದೆ ಬಿಜಾಪುರದಲ್ಲಿ ಹೆಬಿಚ್ಯುಯಲ್ ಅಫೆಂಡರ್ಸ್ ಸಲುವಾಗಿ ಸರ್ಕಾರದವರು ಒಂದು ಸೆಟ್ಲ್‌ಮೆಂಟ್ ಸ್ಥಾಪನೆ ಮಾಡಿದ್ದರು. ಹಿಂದಿನ ಕಾಲದಲ್ಲಿ ಸೊಲ್ಲಾಪುರ ಮತ್ತು ಮರಾಠವಾಡದಿಂದ ಹೆಬಿಚ್ಯುಯಲ್ ಅಫೆಂಡರ್ಸ್‌ಗಳು ಬರುತ್ತಿದ್ದರು. ಈಗ ಅಲ್ಲಿ ಒಬ್ಬರೂ ಇಲ್ಲ. ಆದರೆ ಆ ಹೆಬಿಚ್ಯುಯಲ್ ಅಫೆಂಡರ್ಸ್ ಸೆಟ್ಲ್‌ಮೆಂಟ್ ಸಲುವಾಗಿ ನೇಮಕ ಮಾಡಿದಂತಹ ಸೂಪರಿಂಟೆಂಡೆಂಟ್ ಮುಂತಾದ ಸಿಬ್ಬಂದಿವರ್ಗ ಏನಿದೆ ಅದು ಇನ್ನೂ ಹಾಗೆಯೇ ಇದೆ, ಮತ್ತು ಅವರಿಗೋಸ್ಕರ ಇಟ್ಟಂತಹ 15–20 ಎಕರೆ ಭೂಮಿಯೂ ಸಹ ಹಾಗೆಯೇ ಇದೆ. ಯಾವ ಉದ್ದೇಶಕ್ಕೋಸ್ಕರ ಅಲ್ಲಿ ಆ ಭೂಮಿಯನ್ನು ಕೊಟ್ಟಿದ್ದರೋ ಅದಕ್ಕೆ ಆ ಭೂಮಿಯು ಉಪಯೋಗ ವಾಗುತ್ತಿಲ್ಲ. ಆದ್ದರಿಂದ ಆ 15-20 ಎಕರೆ ಭೂಮಿಯನ್ನ ಒಕ್ಕಲುತನದ ಖಾತೆಯವರಿಗೆ ಕೊಟ್ಟರೆ ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri S. RAJAGOPAL (Kolar Gold Fields).—Mr. Speaker, Sir, on today's Demands, I have already expressed my opinion through the cut motions. There is very little for me to say, but I will emphasise the points raised in the cut motions. The Hon'ble Finance Minister's

(SRI S. RAJAGOPAL)

statement concludes that the general position of the law and order situation, particularly with regard to crime which is a fact and which is admitted by the Government—that it is on the increasing trend. This is a problem which not only concerns the Government or the Minister concerned, but it is a problem concerning all the citizens of the State. If only proper co-operation is given by the citizens and the Government also takes action strictly under the rules and regulations in this behalf, it is possible to control the rising trend of crime in our State. In this connection, I wish to say a few words regarding the problem which relates to K G.F. I have also mentioned in the cut motion tabled by me that during the recent disturbance in K.G.F. the Police took sides and supported one party and some groups. The Hon'ble Home Minister also is aware of the fact. He may not be able to admit openly, but at least in his heart, I am sure he would have been convinced that the Police action was unwarranted. The Police in K.G.F. took certain action which is not commendable. They filed certain cases and arrested some persons during the disturbance period. I was also one of the victims. My name was also included in the list, though I was not in the particular place where the incident took place. On account of pressure and influence the Police included me as one of the victims along with 37 other victims. The Case went to the sessions court and the magistrate acquitted the accused saying that no mistake was committed. There are instances where the police have filed cases against innocent persons and complainant inspite of giving the names, the police have not booked the actual culprits. In one case a thorough investigation was done and when the case was taken to the Magistrate's court, the Magistrate pointed out the mischief done by the police and included one or two persons who had been excluded by the police. Why I am pointing out there is, we expect the police to be an impartial body and there should be no influence by the ruling party. The police should be given a free hand to act. But, unfortunately sometimes attempts are made either by the ruling party or some Minister to interfere with their work. If such interferences are there it would be impossible for the police to work honestly. During the disturbances that occurred in 1962-63 the police officers were not able to come to a common decision because there was not unanimous opinion amongst the police officers. There is not enough co-operation amongst the officers themselves.

In this connection I want to mention one more point and that is regarding the prohibition policy, pursued especially in K.G.F. In most of the places in the district, this prohibition has turned out to be a profitable small scale industry. In fact this illicit industry has been blessed by the Congressmen. The police squad in the K G.F. has been divided on this issue. There is an S.S.P. who is having squad under him to detect the cases of prohibition, in addition to

this there is also the general station police. These two wings are not co-operating with each other in detecting the cases of prohibition. There is no common understanding between them, with the result if one section proposed to detect a case another section give advance information and obstruct the investigation. As there is not common understanding amongst the police officers, the officers are taking sides and this industry has assumed big proportions. I request the Hon'ble Home Minister to find out the real culprits and bring them to book. If he finds it is not possible to send instructions I request him to come to K.G.F. and hold a thorough enquiry.

I am told that police officers are anxious to book some cases. They are going to smugglers and illicit distillers and ask them to give some cases promising them at the same time that they would help them to escape from punishment. Even children and old women are not spared; they are prepared to send even these persons to jails. As K.G.F. is a place where gold is available, there has been a lot of smuggling going on. Some rich merchants are good friends of police officers. I may bring to the notice of the House an interesting instance. A merchant of K.G.F. brought from Bombay about 1½ months back some gold worth Rs. 18,000. A friend of him was also with him. His friend escaped with property and he was in a *dilemma* because he could not give a complaint to the police against him. It would appear the merchant contacted one of his closest friends and sought his help to detect the culprit. That friend happened to know the S.S.P. and requested him to help investigate the case. With the help of C.I.D. staff and its inspector they were able to detect the culprit but could recover only Rs. 11,000 from him. Out of the amount collected the police officer took Rs. 5,000 and gave the merchant only Rs. 6,000. If this sort of things goes on how can smuggling be stopped. Can we expect the police officers to do justice ? A thorough enquiry should be instituted and if necessary I am prepared to help the Government in their attempt to bring these culprits into the book.

Finally about the detenus. We have often complained that the facilities in Bangalore jail are not adequate. I am told that in other parts like Kerala and Andhra the detenus are given 20 ounces of rice and their relations are permitted to have one interview weekly. In our State only 18 ounces of rice is given and interview with them is permitted only once a month. I request the Government to increase the quantum of food to 20 ounces as in other States and permit interviews with them once a fortnight or week and supply to them all the periodicals and newspapers. In the case of a detenu I am told that he had requested for being let off on parole as his wife is sick. I request that this request may kindly be considered sympathetically. One of our M.L.A.s Sri A. Krishna Shetty has been taken as detenu. As he is not keeping good health I request that he may be released.

Mr. SPEAKER.—With regard to the reference made about an Hon'ble Member of this House, I must say that he wrote to me. He has been shifted to the hospital. I am informed that he is now perfectly all right and every care is taken. I do not know what else the Member is having in his mind. The Hon'ble Member was taken to the hospital sometime back and he wrote to me. The hon'ble Chief Minister was good enough to direct the concerned authorities by telegraphic information that he should be given a separate bed in a separate room and he must be given every facility. He was treated and taken to the jail. Again by way of abundant caution he was been in the hospital. He is hale and healthy. Immediate attention was given in the hospital. I do not think any better facility could be given in this case.

5-00 P.M.

†ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು).—ಸ್ವಾಮೀ, ಈ ಸಭೆಯ ಮುಂದೆ ಇರುವ ಡಿಮ್ಯಾಂಡುಗಳಲ್ಲಿ ಡಿಮ್ಯಾಂಡು 4 ಮತ್ತು 13 ಇವುಗಳ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಲಾರಿಗಳಿಗಾಗಿ ಹಾಕಿರತಕ್ಕ ಟ್ಯಾಕ್ಸುಗಳನ್ನು ಸುಮಾರು ಮೂರು ತಿಂಗಳ ಹಿಂದೆ 6)0 ರೂಪಾಯಿಗಳಷ್ಟು ಇದ್ದುದನ್ನು ಈಗ 900 ರೂಪಾಯಿಗಳಷ್ಟು ಏರಿಸಿದ್ದಾರೆ. ಈಗ ಇರುವ ಟ್ಯಾಕ್ಸುಗಳೇ ಬಹಳ ಜಾಸ್ತಿಯಾಗಿವೆ. ಈ ವಿಚಾರದಲ್ಲಿ ಮಾನ್ಯ ಸಚಿವರನ್ನು ನಾನು ಪ್ರಾರ್ಥನೆ ಮಾಡುವುದು ಇದನ್ನು ಲೋಕಲ್ ಲಾರಿಗಳ ಬಗ್ಗೆ ಸ್ವಲ್ಪ ಕಡಿಮೆ ಮಾಡಬೇಕು ಎಂದು. ಲಾರಿಗಳನ್ನು ಇಟ್ಟುಕೊಂಡಿರುವವರು ಈಗ ಬದುಕುವುದೇ ಕಷ್ಟವಾಗಿದೆ. ಇಷ್ಟು ಟ್ಯಾಕ್ಸನ್ನು ಕೊಟ್ಟರೂ ಕೂಡ ಸಲೀಸಾಗಿ ಈ ಬೆಂಗಳೂರು ಸಿಟಿಯಲ್ಲಿ ಲಾರಿಗಳವರು ಸಾಮಾನುಗಳನ್ನು ಹೊಡೆಯುವುದಕ್ಕೆ ಆಗುವುದಿಲ್ಲ. ಸಣ್ಣ ಪುಟ್ಟ ವಿಚಾರಗಳಲ್ಲೆಲ್ಲಾ ಒಂದೊಂದು ಕೇಸುಗಳನ್ನು ಹಾಕುತ್ತಿರುತ್ತಾರೆ. ಇದರಿಂದಾಗಿ ತುಂಬಿದ ಲಾರಿಗಳನ್ನು ಒಂದು ಎರಡು ದಿನಗಳ ಕಾಲ ನಿಲ್ಲಿಸುತ್ತಿರುತ್ತಾರೆ. ಇದನ್ನು ನಾನು ಕೂಡ ಅನೇಕ ಸಾ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಸಾರಿಯೂ ಇದನ್ನು ಇಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವರಿಗೆ ಸರಿಯಾದ ರಕ್ಷಣೆ ಕೊಡಬೇಕೆಂದು ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥಿಸುತ್ತೇನೆ. ನನ್ನ ತಾಲ್ಲೂಕಿನಲ್ಲೇ ಬಹಳ ಜಾಸ್ತಿ ಲಾರಿಗಳಿವೆ, ಅದರಿಂದಾಗಿ ಇಲ್ಲಿನ ಜನಕ್ಕೆ ತೊಂದರೆಯಾಗುತ್ತಿದೆ. ದಿನ ಬೆಳಗಾದರೆ ನನ್ನ ಮನೆ ಹತ್ತಿರವೇ ಲಾರಿಗಳವರು ಎಷ್ಟೋ ಸಲ ಬಂದು ಅವರ ಕಷ್ಟಗಳನ್ನು ಹೇಳಿಕೊಂಡು ಸರಿಪಡಿಸಬೇಕೆಂದು ಕೇಳುತ್ತಾರೆ. ನಾನೂ ಎಷ್ಟೋ ಸಾರಿ ಟ್ರಾಫಿಕ್ಕು ಇನ್ಸ್‌ಪೆಕ್ಟರುಗಳಿಗೆ ಸಣ್ಣ ಪುಟ್ಟ ಕೇಸುಗಳನ್ನು ಹಾಕಬೇಡಿ. ಇದರಿಂದ ಇವರಿಗೆ ಬಹಳ ಕಷ್ಟವಾಗುತ್ತದೆ ಎಂದೂ ಹೇಳಿದೆ. ಒಂದು ಕೇಸಿಗಾಗಿ ಸರಾಸರಿ ಹತ್ತು ರೂಪಾಯಿಗಳಷ್ಟು ಖರ್ಚಾಗುತ್ತದೆ. ಇದರ ಬಗ್ಗೆ ಸೂಕ್ತ ಆದೇಶವನ್ನು ಕೊಡಬೇಕೆಂದು ನಾನು ವಿನಯದಿಂದ ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

ಮತ್ತು ಪೋಲೀಸು ಇಲಾಖೆಯ ಬಗ್ಗೆ ಹೇಳುವಾಗ ದುಷ್ಟರನ್ನು ಶಿಕ್ಷೆ ಮಾಡಬೇಕು ಶಿಷ್ಟರನ್ನು ಸಂರಕ್ಷಣೆ ಮಾಡಬೇಕು ಎಂದು ಇದೆ. ಆದರೆ ಇಲ್ಲಿ ಕೆಲವರು ಏನು ಮಾಡುತ್ತಾರೆಂದರೆ, ಕೆಲವು ಜನರು ದಾರಿಯಲ್ಲಿ ಕುಡಿದು ರಸ್ತೆಯಲ್ಲಿ ಬಿದ್ದಿದ್ದರೂ ಕೂಡ ಅವರನ್ನು ನೋಡಿಕೊಂಡೇ ಪೋಲೀಸಿನವರು ಹೊರಟು ಹೋಗುತ್ತಾರೆ. ಇದರಿಂದ ಹಳ್ಳಿಯ ಜನಗಳಿಗೆ ಬಹಳ ತೊಂದರೆಗಳಾಗುತ್ತವೆ.

ಈ ಸ್ಟೇಟಿನಲ್ಲಿ ಪೋಲೀಸಿನವರು ರೋಡಿನಲ್ಲಿ ಯಾವ ತೊಂದರೆಗಳಾಗುತ್ತಿದ್ದರೂ ಕೂಡ ಅವಕ್ಕೆ ಸರಿಯಾದ ಗಮನವನ್ನೇ ಕೊಡುವುದಿಲ್ಲ. ಕುಡಿದು ಬಿದ್ದ ಜನರು ರೋಡಿನಲ್ಲಿ ಇದ್ದರೂ ಕೂಡ ಅವರನ್ನು ನೋಡುವುದೇ ಇಲ್ಲ ಮತ್ತು ಜನಕ್ಕೆ ಇಲ್ಲದ ಕಷ್ಟಗಳನ್ನು ಕೊಡುತ್ತಿದ್ದಾರೆ. ಇದು ಬಹಳ ಅನ್ಯಾಯ, ಈ ವಿಚಾರದಲ್ಲಿ ಸರಿಯಾದ ಒಂದು ಆದೇಶವನ್ನು ಕೊಟ್ಟು ಸರಿಪಡಿಸಬೇಕೆಂದು ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥಿಸುತ್ತೇನೆ. ನಾನು ಇಲ್ಲಿ ಸತ್ಯದಿಂದ ಹೇಳುತ್ತೇನೆ, ಇವನ್ನೆಲ್ಲಾ ತಾವು ಮನಸ್ಸಿಗೆ ತೆಗೆದುಕೊಳ್ಳಬೇಕು. ನಮ್ಮ ತಾಲ್ಲೂಕಿನಲ್ಲಿರುವ ಪೋಲೀಸು ಸ್ಟೇಷನ್ನಿನಲ್ಲಿ ಒಂದು ಸ್ಟೇಷನ್ನಿಗೆ ಸಬ್-ಇನ್ಸ್‌ಪೆಕ್ಟರು ಹೋಗಬೇಕಾದರೆ ಸುಮಾರು 20-25 ಮೈಲಿಗಳಷ್ಟು ದೂರ ಹೋಗಬೇಕಾಗಿದೆ. ಇನ್ಸ್‌ಪೆಕ್ಟರಾದವರು 30 ಮೈಲಿಗಳ ದೂರ ಹೋಗಬೇಕಾಗುತ್ತದೆ. ಈ ರೀತಿ ಸಂಸ್ಥಾನದ ಇನ್ನೂ ಕೆಲವು ಕಡೆಗಳಲ್ಲಿಯೂ ಇದೆ. ಇದರ ಬಗ್ಗೆ ಸರಿಯಾದ ಸ್ಟ್ಯಾಟಿಸ್ಟಿಕ್ಸ್

ಗಳನ್ನು ತರಿಸಿಕೊಂಡು ಸರಿಯಾದ ವ್ಯವಸ್ಥೆ ಮಾಡಿ ಜನರಿಗೆ ಉಪಕಾರ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ಅಧ್ಯಕ್ಷರು ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟುದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ಸಿಟಿ—ಉತ್ತರ).—ಸ್ವಾಮೀ, ಇಲ್ಲಿ ಇಟ್ಟಿರುವ ನಾಲ್ಕು ಡಿಮ್ಯಾಂಡುಗಳಲ್ಲಿ ಬಹು ಮುಖ್ಯವಾದ ಎರಡು ಡಿಮ್ಯಾಂಡುಗಳು ಎಂದರೆ ಪೋಲೀಸು ಖಾತೆ ಹಾಗೂ ಜೈಲುಗಳು ಎಂದು ನಾನು ಭಾವಿಸುತ್ತೇನೆ.

ಕಳೆದ ಸಾರಿ ನಾಲ್ಕೂವರೆ ಕೋಟಿಯಷ್ಟು ಖರ್ಚು ಮಾಡುತ್ತಿದ್ದವರು ಈ ಸಾರಿ ಐದೂವರೆ ಕೋಟಿಯಷ್ಟು ಖರ್ಚು ಮಾಡುತ್ತಿದ್ದಾರೆ. ಆದರೆ ಇದರಿಂದ ನಮಗೆ ಆಗುವ ಒಂದು ಫಾಯದೆಯೇನು ಎನ್ನುವುದನ್ನು ಅವರೇ ಒಂದು ಕಡೆ ಹೇಳಿದ್ದಾರೆ. ನಮ್ಮ ದೇಶದಲ್ಲಿ ' ಕ್ರೈಂಸ್' ಅಷ್ಟು ಹೆಚ್ಚಾಗಿಲ್ಲ ಮತ್ತು, ನಮಗೆ ಎರಡು ವಿಷಯಗಳು ಬಹಳ ದೊಡ್ಡದಾಗಿವೆ ಎಂದು ಹೇಳಿದರು. ಒಂದು ವಿದ್ಯಾರ್ಥಿಗಳ ಚಳುವಳಿ, ಇನ್ನೊಂದು ಭಾರತ ಬಂದ್ ಚಳುವಳಿ ಎಂದು ಹೇಳಿದ್ದಾರೆ. ಇಷ್ಟೊಂದು ದುಡ್ಡು ಖರ್ಚು ಮಾಡುತ್ತಿರುವ ಕಾಲದಲ್ಲಿ ತಾವು ಮಾಡುತ್ತಿರುವ ಕೆಲಸಗಳನ್ನು ಹೇಳುವುದರ ಜೊತೆಗೆ ಜನತೆಯ ಮೇಲೆ ಒಂದು ಸಾರಿ ಗುಂಡನ್ನು ಹಾರಿಸಿದ ವಿಷಯವನ್ನೂ ಪ್ರಸ್ತಾಪ ಮಾಡಿದ್ದಾರೆ. ತಾವು ಮಾಡಿದ ತಪ್ಪನ್ನು ತಾವೇ ಒಪ್ಪಿಕೊಂಡು ವಿದ್ಯಾರ್ಥಿಗಳು ಸ್ಟ್ರೈಕ್ ಮಾಡಿದ ಮೇಲೆ ಮೊದಲಿದ್ದಂತೆಯೇ ಫೀಸುಗಳನ್ನು ಕಡಿಮೆ ಮಾಡಿದರು. ಸರ್ಕಾರಕ್ಕೆ ಹೇಳವುದಿಷ್ಟೇ. ತಾವು ಜನಗಳಿಗೆ ತೊಂದರೆ ಕೊಟ್ಟು ಇದನ್ನೆಲ್ಲಾ ಮಾಡಿದಿರಿ. ಎರಡನೇದು ಭಾರತ ಬಂದ್ ಚಳುವಳಿಯನ್ನು ಉಲ್ಬಣವಾಗುವಂತೆ ಮಾಡಲು ತಾವೇ ಅವಕಾಶ ಕೊಟ್ಟಿರಿ. ಭಾರತ್ ಬಂದ್ ಚಳುವಳಿಯನ್ನು ಮಾಡುವಾಗ ಮುಂಜಾಗರೂಕತೆಯಿಂದ ಇರಿ ಎಂದು ನಿಮ್ಮ ಇಲಾಖೆಯವರಿಗೆ ಹೇಳುವುದರ ಬದಲು ಅದನ್ನು ಅಷ್ಟೊಂದು ವಿಪರೀತವಾಗುವಂತೆ ಮಾಡಿ ಗುಂಡು ಹಾರಿಸಿದಿರಿ. ಇದನ್ನೆಲ್ಲಾ ಜನರೂ ನೋಡುತ್ತಾರೆ ಮತ್ತು ಕನ್‌ಸಿಡರ್ ಮಾಡುತ್ತಾರೆ. ಇನ್ನೂ ಕೆಲವು ವಿಷಯಗಳನ್ನು ಇಲ್ಲಿ ಹೇಳುವುದಾದರೆ, ಕಳ್ಳತನವೇನೂ ಕಡಿಮೆಯಾಗಲಿಲ್ಲ. ತಾವೇ ಹೇಳುತ್ತಿರುವಂತೆ ಇವೆಲ್ಲಾ ಇನ್ನೂ ಜಾಸ್ತಿಯಾಗುತ್ತೇ ಇದೆ. ಹಗಲು ದರೋಡೆಯೂ ಜಾಸ್ತಿಯಾಗುತ್ತಿದೆ. ಪಿಕ್ ಪಾಕೆಟ್ಟುಗಳು ಈ ದೇಶದಲ್ಲಿ ಬಹಳ ಹೆಚ್ಚಾಗಿದೆ ಮತ್ತು ಅದರ ಕಷ್ಟಗಳನ್ನು ಹೇಳತೀರದು. ಇದರ ಕಡೆಗೆಲ್ಲಾ ಗಮನ ಕೊಡಲು ಆಗುವುದಿಲ್ಲ ಎಂದು ಈಗ ಹೆಚ್ಚು ಜನಗಳು ಇಲಾಖೆಗೆ ಬೇಕು ಎಂದು ಅವರ ಸಂಖ್ಯೆಯನ್ನೂ ಜಾಸ್ತಿ ಮಾಡಿಕೊಂಡರು. ಇದರಲ್ಲಿ ಹೇಳಿರುವ ಅಂಕೆ ಸಂಖ್ಯೆಗಳಂತೆ ಕೆಲವು ದರ್ಜೆಯ ಪೋಲೀಸು ಅಧಿಕಾರಿಗಳನ್ನು ಹೆಚ್ಚಿಸಿ ಕೊಳ್ಳಬೇಕು ಎಂದು ಜಾಸ್ತಿ ಮಾಡಿಕೊಂಡರೂ ದೇಶದಲ್ಲಿ ಹೆಚ್ಚು ಅನ್ಯಾಯಗಳಾಗದಂತೆ ನೋಡಿಕೊಳ್ಳುವುದರ ಕಡೆಗೆ ಅವರ ಗಮನ ಹೆಚ್ಚಲಿಲ್ಲ. ಇವೆಲ್ಲಾ ತಾವು ಇಲ್ಲಿ ಕೊಟ್ಟಿರುವ ಅಂಕೆ ಅಂಶಗಳನ್ನು ನೋಡುವುದರಿಂದ ಗೊತ್ತಾಗುತ್ತದೆ. ಈ ಒಂದು ಡಿಪಾರ್ಟ್‌ಮೆಂಟಿನಲ್ಲಿ ಶಿಸ್ತಿನ ಪಾಲನೆಯಾಗುವುದು ಹೋಗಿ ದುಷ್ಟರನ್ನು ಪರಿಪಾಲನೆ ಮಾಡುವ ಕಾರ್ಯ ನಡೆಯುತ್ತಿದ್ದರೂ ಅದನ್ನು ತಾವು ಗಮನಕ್ಕೆ ತೆಗೆದುಕೊಂಡಂತೆ ಕಾಣುವುದಿಲ್ಲ. ಎಲ್ಲದರಲ್ಲಿಯೂ ರಾಜಕೀಯವನ್ನು ಬೆರಸಿ ಜನಕ್ಕೆ ಇಲ್ಲದ ತೊಂದರೆಗಳನ್ನು ಕೊಡುವ ಒಂದು ಸಂದಿಗ್ಧ ಮಾರ್ಗದಲ್ಲಿ ಹೋಗುತ್ತಿರುವಂತೆ ಭಾಸವಾಗುತ್ತಿದೆ. ಆದರೂ ಇದನ್ನೆಲ್ಲಾ ತಾವು ಮರೆತು ಕಾನೂನು ಪ್ರಕಾರ ಇವೆಲ್ಲಾ ಮಾಫ್ರ್ಡಾಯಿತು ಎಂದು ಹೇಳುತ್ತೀರಿ. ತಾವು 10,17,000 ದಷ್ಟು ಹಣವನ್ನು ಖರ್ಚು ಮಾಡಿ ಅಲ್ಲಲ್ಲಿ ಬಲವಾದ ಪಹರೆಗಳನ್ನು ಹಾಕುತ್ತಿದ್ದೇವೆಂದು ಹೇಳುತ್ತೀರಿ. ಬಲವಾದ ಪಹರೆ ಎಷ್ಟರ ಮಟ್ಟಿಗೆ ಇದೆ ಇದು ನಿಜವೋ ಎನ್ನುವುದು ನಮಗೇ ಆಶ್ಚರ್ಯವಾಗುತ್ತದೆ. ಈಗಲೂ ತಾವು ಒಂದು ಲಾರಿ ದವಸವನ್ನು ಹೊರಕ್ಕೆ ಸಾಗಿಸಲು 200 ರೂಪಾಯಿಗಳಷ್ಟನ್ನು ಕೊಟ್ಟರೆ ಸಾಕು, ಆ ದಿನಸಿಯನ್ನು ಹೊರಕ್ಕೆ ಸಾಗಿಸಬಹುದು. ಇದಕ್ಕಾಗಿ ಸುಮಾರು 425 ಕಾನ್‌ಸ್ಟೇಬಲ್‌ಗಳು ಮತ್ತಿತರ ಅಧಿಕಾರಿಗಳು ಬೇಕು ಎಂದು ಇಲ್ಲಿ ಹೇಳಿದ್ದಾರೆ. ನಿಮ್ಮ ಇಲಾಖೆಯಲ್ಲಿ ಎಷ್ಟು ಅನ್ಯಾಯಗಳಾಗುತ್ತಿವೆ ಎನ್ನುವುದಕ್ಕೆ ನಾನು ಈ ಮೊದಲೇ ಹೇಳಿದಂತೆ ದುಡ್ಡು ಕೊಟ್ಟರೆ ಎಲ್ಲ ಕೆಲಸಗಳೂ ಆಗುತ್ತವೆ, ಇವನ್ನೆಲ್ಲಾ ಪರಿಶೀಲನೆ ಮಾಡಿ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ತಮ್ಮ ಮುಂದೆ ಇನ್ನೂ ಕೆಲವು ವಿಷಯಗಳನ್ನು ಜೈಲುಗಳ ಬಗ್ಗೆ ಹೇಳಿ ತಮ್ಮ ಗಮನವನ್ನು ಸೆಳೆಯಬೇಕೆಂದು ಇಚ್ಛಿಸುತ್ತೇನೆ. ಹಿಂದೆ ಜೈಲುಗಳು ಯಾವ ರೀತಿಯಾಗಿ ಇದ್ದುವೋ ಇವೊತ್ತೂ ಕೂಡ ಅದೇ ರೀತಿಯಾಗಿಯೇ ಇದೆ. ಇನ್ನೊಂದು ಸುಧಾರಣೆ ಏನಾಗಿದೆ ಎಂದರೆ ಬೀಡಿ, ಸಿಗರೇಟು ಹಾಗೂ ನಶ್ಯ ಇವುಗಳನ್ನು ಮಾತ್ರ ಕೊಡುತ್ತಿದ್ದೀರಿ, ಇದನ್ನು ಬಿಟ್ಟರೆ ಬೇರೆ ಯಾವ ಸುಧಾರಣೆಯೂ ಆಗಿಲ್ಲ. ಇವೊತ್ತು ಅಲ್ಲಿ ಕೊಡುವ ಅಕ್ಕಿಯನ್ನು ಆನೆಯೂ ಕೂಡ ತಿನ್ನುವುದಕ್ಕೆ ಆಗುವುದಿಲ್ಲ, ಅಂತಹ ಅಕ್ಕಿಯನ್ನು ಖೈದಿಗಳು ತಿನ್ನಬೇಕೆಂದು ಕೊಡುತ್ತಿದ್ದಾರೆ. ಅಲ್ಲದೆ ಇಲ್ಲಿ ಕೊಟ್ಟಣದ ಅಕ್ಕಿಯನ್ನು ಕೊಡಬೇಕೆಂದು ಹೇಳುತ್ತಿದ್ದರು, ಅದನ್ನು ಕೂಡ ಕೊಡುತ್ತಿಲ್ಲ. ಇದರಿಂದ ಅಲ್ಲಿರುವ ಜನಕ್ಕೆ ಬಹಳ

(ಶ್ರೀ ಬಿ. ಕೆ. ಪುಟ್ಟಯ್ಯ)

ತೊಂದರೆಯಾಗಿದೆ. ನಾನೂ ಕೂಡ ಜೈಲುಗಳಲ್ಲಿ ಕೆಲವು ದಿನಗಳು ಇದ್ದುದರಿಂದ ಇವೆಲ್ಲಾ ನನಗೂ ಗೊತ್ತಾಗಿದೆ. ಆದುದರಿಂದ ಮನುಷ್ಯರು ತಿನ್ನುವಂತಹ ಅಕ್ಕಿಯನ್ನಾದರೂ ಕೊಟ್ಟರೆ ಅವರುಗಳು ಜೀವಂತವಾಗಿ ಉಳಿಯಲು ಸಾಧ್ಯ. ಇಷ್ಟು ಹೊಲಸಾದ ಅಕ್ಕಿಯನ್ನು ತಿನ್ನಬೇಕೆಂದು ಕೊಟ್ಟರೆ ಇವರುಗಳು ಜೀವಂತವಾಗಿ ಉಳಿಯಲು ಸಾಧ್ಯವಿಲ್ಲ ಮತ್ತು ಆ ಅಕ್ಕಿಯನ್ನು ತಿನ್ನುವುದಕ್ಕೂ ಆಗುವುದಿಲ್ಲ. ಅಷ್ಟು ದಪ್ಪವಾಗಿರತಕ್ಕ ಅಕ್ಕಿಯನ್ನು ಇಲ್ಲಿ ಕೊಡುತ್ತಿದ್ದಾರೆ. ನಮ್ಮ ದೇಶದಲ್ಲಿ ಇರತಕ್ಕಂಥ ಜೈಲುಗಳ ಸುಧಾರಣೆಯಾಗಬೇಕಾಗಿದೆ. 50 ವರ್ಷಗಳ ಹಿಂದೆ ಇದ್ದ ಹಾಗೆ ಇವತ್ತಿನ ದಿವಸ ಕೂಡ ಜೈಲುಗಳಲ್ಲಿ ಖೈದಿಗಳಿಗೆ ಪವರ್ ಲೂಮ್ಸ್ 4 ಮಾತ್ರ ಕೊಟ್ಟು ಅದರಲ್ಲಿ ಅವರು ಕೆಲಸ ಮಾಡಬೇಕಾಗುತ್ತದೆ. ಇದರಲ್ಲಿ ಯಾವ ಸುಧಾರಣೆಯೂ ಆಗಿಲ್ಲ. ಕೊಯಮತ್ತೂರು ಜೈಲಿನಲ್ಲಿ ಮೊದಲು 16 ಪವರ್ ಲೂಮ್ಸ್ ಇದ್ದುದನ್ನು ಈಗ 400 ಕ್ಕೆ ಏರಿಸಿದ್ದಾರೆ. ಹಿಂದಿನ ಕಾಲದಲ್ಲಿ ಯಾವ ರೀತಿ ಇತ್ತೋ ಅದನ್ನೇ ಇವತ್ತಿನ ದಿವಸ ಕೂಡ ನಮ್ಮ ಜೈಲುಗಳಲ್ಲಿ ಮಾಡುತ್ತಿದ್ದಾರೆ. ಖೈದಿಯು ಜೈಲುವಾಸ ಐದಾರು ವರ್ಷಗಳಾದ ಮೇಲೆ ಅವನನ್ನು ವ್ಯವಸಾಯಕ್ಕೆ ಉಪಯೋಗಿಸಬೇಕು. ಇದರಿಂದ ದೇಶಕ್ಕೂ ಒಳ್ಳೆಯದಾಗುತ್ತದೆ. ಇಂಥ ಸುಧಾರಣೆ ಮಾಡುವುದು ಅಗತ್ಯವಾಗಿದೆ. ಇಂಥ ಸುಧಾರಣೆಗೆ ಸರಕಾರ ಗಮನ ಕೊಡದೇ ಇರುವುದು ಬಹಳ ಅನ್ಯಾಯ. ಪೋಲೀಸಿನವರು ಇದ್ದಾಗ್ಯೂ ಕೂಡ ನಮ್ಮ ಡಿಪಾರ್ಟ್‌ಮೆಂಟು ಕಣ್ಣು ಮುಚ್ಚಿದೆ. ವಿಧಾನ ಪರಿಷತ್ತಿನ ಸದಸ್ಯರೊಬ್ಬರಿಗೆ ಕಾಲು ಮುರಿದಿದ್ದಾರೆ. ಇಂಥ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ನಡಿಪಡಿಸಲು ಆಸಕ್ತಿ ವಹಿಸಬೇಕು ಎಂದು ಹೇಳುತ್ತೇನೆ.

† ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಮುಂದೆ ಇರತಕ್ಕಂಥ ಎಲ್ಲ ಬೇಡಿಕೆಗಳನ್ನೂ ಸ್ವಾಗತಿಸುತ್ತಾ ನನಗೆ ಮಾತನಾಡಲು ಕೊಟ್ಟಿರುವ ಐದು ನಿಮಿಷಗಳಲ್ಲಿ ಕೆಲವು ಸಲಹೆಗಳನ್ನು ಕೊಡಲು ಬಯಸುತ್ತೇನೆ. ಈ ಬೇಡಿಕೆಗಳ ಮೇಲೆ ಇದುವರೆಗೆ ಮಾತನಾಡಿದ ಸದಸ್ಯರ ಭಾಷಣಗಳನ್ನು ಗಮನವಿಟ್ಟು ಕೇಳಿದ್ದೇನೆ. ಪೋಲೀಸ್ ಖಾತೆಯಲ್ಲಿ ಸ್ಟಾಂಡರ್ಡ್ ಎನ್ನುವುದು ಇಲ್ಲ, ಅನೀತಿ ಅನಾಚಾರ ತುಂಬಿಕೊಂಡಿದೆ ಎಂದು ಅವರು ಮಾತನಾಡುತ್ತಾ ಒತ್ತಿ ಹೇಳಿದರು. ಪೋಲೀಸ್ ಖಾತೆಯಲ್ಲಿ ಸೇರತಕ್ಕಂಥ ಜನ ಎಂಥವರು ಎನ್ನುವುದನ್ನು ಗಣನೆಗೆ ತೆಗೆದುಕೊಂಡರೆ ನಮಗೆ ಸುಲಭವಾಗಿ ಅದು ಗೊತ್ತಾಗುತ್ತದೆ. ಸಮಾಜದಲ್ಲಿ ಗೌರವ ಇಲ್ಲದೇ ಇರತಕ್ಕಂಥ ಸಾರ್ವಜನಿಕರ ಬಗ್ಗೆ ತಿಳುವಳಿಕೆ ಇಲ್ಲದೇ ಇರುವ ನಿರುದ್ಯೋಗಿಯಾದಂಥವರು ಬೇರೆ ಯಾವ ಕೆಲಸವಿಲ್ಲದೆ ಪೋಲೀಸ್ ಖಾತೆಗೆ ಸೇರಿ ಪೋಲೀಸರು ಆಗುತ್ತಾರೆ. ಪೋಲೀಸ್ ಸಬ್-ಇನ್‌ಸ್ಪೆಕ್ಟರ್ ಆದವರು ಎಷ್ಟು ಜನ ಕಲಿತವರಿದ್ದಾರೆ, ಸುಶಿಕ್ಷಿತರು ಇದ್ದಾರೆ ಎನ್ನುವುದನ್ನು ನೋಡಬೇಕು. ಸಮಾಜದಲ್ಲಿ ಗೌರವ ಉಳ್ಳವರು ಸುಶಿಕ್ಷಿತರು ಈ ಖಾತೆಯಲ್ಲಿ ಸೇರುವಂತೆ ಮಾಡುವ ಜವಾಬ್ದಾರಿ ನಮ್ಮ ಮೇಲೆ ಇದೆ. ಆಹಾರ ಅಭಾವ ಉಂಟಾದ ಇಂದಿನ ಪರಿಸ್ಥಿತಿಯಲ್ಲಿ ಪೋಲೀಸಿನವರಲ್ಲಿ ಅನೀತಿ ಅನಾಚಾರ ಹೆಚ್ಚಾಗಿದೆ ಎಂದು ಎಲ್ಲರೂ ಹೇಳುತ್ತಾರೆ. ಇದನ್ನು ಯಾವ ರೀತಿ ಸುಧಾರಣೆ ಮಾಡಬೇಕು ಎನ್ನುವುದು ಮುಖ್ಯವಾದುದು. ಒಳ್ಳೇ ಕೆಲಸ ಮಾಡಬೇಕಾದರೆ ಸಹನೆ ತಾಳ್ಮೆ ಬೇಕು. ಜೈಲಿನಲ್ಲಿ ಓಬೀರಾಯನ ಕಾಲದ ಪದ್ಧತಿ ಅನುಸರಿಸಿಕೊಂಡು ಬರುತ್ತಿದ್ದಾರೆಂದು ಕೆಲವರು ಹೇಳಿದರು. ಈ ರೀತಿ ಹೇಳುವವರು ಬೆಳಗಾವಿಯ ಸೆಂಟ್ರಲ್ ಜೇಲಿಗೆ ಬಂದು ಅಲ್ಲಿ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ನೋಡಬೇಕೆಂದು ಕೇಳಿಕೊಳ್ಳುತ್ತೇನೆ. ಖಾದಿ ಗ್ರಾಮೋದ್ಯೋಗದವರು ಏರ್ಪಡಿಸಿದ್ದ ನೂಲುವ ಸ್ಪರ್ಧೆಯಲ್ಲಿ ಒಂದು ಮತ್ತು ನಾಲ್ಕನೇ ನಂಬರು ಬಂದು ಪುರಸ್ಕಾರ ಪಡೆದವರು ಜೈಲಿನಲ್ಲಿರತಕ್ಕ ಖೈದಿಗಳು. ನೂಲುವಾಗ್ಗೆ ಮನಸ್ಸು ಎಷ್ಟು ಪ್ರಶಾಂತವಾಗಿರಬೇಕು, ನೂಲುವ ಸ್ಪರ್ಧೆ ಹೇಗಿರುತ್ತದೆ ಎನ್ನುವುದು ನೂಲುವುದರಲ್ಲಿ ಪರಿಶ್ರಮ ಇದ್ದವರಿಗೆ ಸರಿಯಾಗಿ ಅರ್ಥವಾಗುತ್ತದೆ. ಇಂಥ ಖೈದಿಗಳು ಜೈಲುವಾಸ ಮುಗಿಸಿಕೊಂಡು ಹೊರಗೆ ಬಂದ ಮೇಲೆ ಅವರ ಜೀವನದಲ್ಲಿ ಮಾರ್ಪಾಟಾಗಬಹುದು ಎಂದು ನನಗೆ ಅನಿಸುತ್ತದೆ. ನೂಲುವ ಕಲೆ ಬಲ್ಲವರು, ತಿಳಿದವರು ಇದನ್ನು ಅರ್ಥ ಮಾಡಿಕೊಳ್ಳುತ್ತಾರೆ. ಇನ್ನು ಬೆಂಕಿಯ ಅನಾಹುತದಿಂದ ವಿತ್ತ ಜೀವಗಳನ್ನು ರಕ್ಷಿಸುವುದಕ್ಕಾಗಿ ಫೈಯರ್ ಫೈಟರ್ಸ್ ಏರ್ಪಾಡು ಮಾಡುವ ಬಗ್ಗೆ ಒಂದು ಕಾನೂನು ಇದೆ. ಇದೊಂದು ಮಹತ್ವದ ವ್ಯವಸ್ಥೆಯಾಗಿದೆ. ಬೆಂಕಿ ಆರಿಸಲಿಕ್ಕೆ ಹೋಗುವವರು 45 ವರ್ಷಕ್ಕೆ ಮೇಲ್ಪಟ್ಟವರನ್ನು ಈ ಫೈಯರ್ ಬ್ರಿಗೇಡಿನಲ್ಲಿ ನೇಮಕ ಮಾಡಿಕೊಂಡಿದ್ದಾರೆ. ಇಷ್ಟು ವಯಸ್ಸು ಆದವರಿಗೆ ಗಂಡಾಂತರ ಪ್ರಸಂಗದಲ್ಲಿ ಬೆಂಕಿಯ ಜೊತೆಗೆ ಹೋರಾಡುವ ಶಕ್ತಿ ಇರುವುದಿಲ್ಲ. ಇದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಮುಂಬಯಿಯಲ್ಲಿ ಈ ಬಗ್ಗೆ ಕೊಡುವ ಶಿಕ್ಷಣ ಆಕರ್ಷಣೀಯವಾಗಿದ್ದು ಸುವ್ಯವಸ್ಥಿತವಾಗಿದೆ. ಮುಂಬಯಿಯಲ್ಲಿ ಇರುವ ಪದ್ಧತಿ ಇಲ್ಲಿ ಅನುಸರಿಸಬಹುದು. ವಯಸ್ಸಾದವರನ್ನು ಈ ಕೆಲಸಕ್ಕೆ

ತೆಗೆದುಕೊಳ್ಳಬಾರದು. 35 ಅಥವಾ 40 ವರ್ಷಕ್ಕೆ ಮೇಲ್ಪಟ್ಟವರಿಗೆ ಇದರಲ್ಲಿ ಅವಕಾಶ ಇರಕೂಡದು. 20ರಿಂದ 35 ವರ್ಷ ವಯಸ್ಸು ಇರುವವರನ್ನು ತೆಗೆದುಕೊಳ್ಳಬೇಕು. ಈ ಬಗ್ಗೆ ಒಂದು ಸರಿಯಾದ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಈ ಕೆಲಸಕ್ಕೆ ಬರುವವರಿಗೆ ಇದು ಆಕರ್ಷಣೀಯವಾಗಿರಬೇಕು. ಬೆಂಕಿಯ ಅನಾಹುತದಲ್ಲಿ ಕೆಲಸ ಮಾಡುವಾಗ್ಗೆ ಸತ್ತುಹೋದರೆ ಅವರಿಗೆ ಸೂಕ್ತ ಪರಿಹಾರ ದೊರೆಯುವ ಹಾಗೆ ಇರತಕ್ಕದ್ದು ಅಗತ್ಯ. ಈ ನನ್ನ ಸೂಚನೆಯನ್ನು ಅಧ್ಯಕ್ಷರ ಮೂಲಕ ಸರಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಇನ್ನು ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ ಪೋಲೀಸರಿಗೆ ಸರಿಯಾದ ವಸತಿ ಸೌಕರ್ಯ ಇಲ್ಲ. ಒಂದೂ ಪೋಲೀಸ್ ಕ್ವಾಟರ್ಸ್ ಇಲ್ಲ. ಕಳೆದ 17 ವರ್ಷಗಳಲ್ಲಿ ಅವರಿಗೆ ವಸತಿ ಸೌಕರ್ಯ ಏರ್ಪಾಡು ಮಾಡಿಲ್ಲ. ದಯವಿಟ್ಟು ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ ಒಂದು ಪೋಲೀಸ್ ಕ್ವಾರ್ಟರ್ಸ್ ಕಟ್ಟಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಯಾಕಂದರೆ ಪೋಲೀಸರಿಗೆ ಊರಲ್ಲಿ ವಾಸಮಾಡುವುದಕ್ಕೆ ಸ್ಥಳ ಸಿಕ್ಕುವುದಿಲ್ಲ. ಪೋಲೀಸಿನವರು ಎಲ್ಲರೂ ಒಂದು ಕಡೆ ಕ್ವಾರ್ಟರ್ಸ್‌ನಲ್ಲಿ ಇರುವುದು ಒಳ್ಳೆಯದು. ಒಂದು ಕಡೆ ಇದ್ದರೆ ಅವರಿಗೆ ಧೈರ್ಯ ಬರುತ್ತದೆ. ನಮ್ಮ ತಾಲ್ಲೂಕಿನಲ್ಲಿ ಪೋಲೀಸ್ ವಸತಿ ಗೃಹ ಕಟ್ಟಿಸಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಪುನಃ ಹೇಳಿ, ಈ ಸಭೆಯಲ್ಲಿ ಇಂದಿನ ಬೇಡಿಕೆಗಳ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ವಿ. ಗೌಡ (ಪಾಳ್ಯ).—ಸ್ವಾಮಿ, ಮೈಸೂರು ರಾಜ್ಯದಲ್ಲಿ 19 ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟೀಸ್ ಸಂಸ್ಥೆಗಳಿವೆ. ಒಂದು ವರ್ಷದಲ್ಲಿ ಒಂದು ಸಂಸ್ಥೆಯು ಕೊನೆಯ ಪಕ್ಷ 10 ಮೋಟಾರ್ ವಾಹನ ನಡೆಸುವುದಕ್ಕೆ ಅನುಮತಿ ಅಂದರೆ ಪರ್ಮಿಟ ಕೊಡುತ್ತಾರೆ. ಅಂದರೆ ಒಂದು ವರ್ಷದಲ್ಲಿ ಒಟ್ಟು ಸುಮಾರು 200 ಪರ್ಮಿಟ್ಟುಗಳು ದೇಶದಲ್ಲೆಲ್ಲಾ ಹೊಸದಾಗಿ ಸಿಕ್ಕುತ್ತವೆ. ಒಂದು ಪರ್ಮಿಟ್ಟಿಗೆ ಹತ್ತು ಸಾವಿರ ರೂಪಾಯಿ ತೆರಿಗೆ ಬರುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಟ್ಯಾಕ್ಸ್ ಆನ್ ಸರ್‌ಛಾರ್ಜ್ ಸೇರಿ ಹತ್ತು ಸಾವಿರ ರೂಪಾಯಿ ಒಂದು ಪರ್ಮಿಟ್ಟಿಗೆ ಬರುತ್ತದೆ. ಮೋಟಾರ್ ವಾಹನ ತೆರಿಗೆ ಹೋದ ವರ್ಷ 720 ಲಕ್ಷ ಇದ್ದುದು ಈ ವರ್ಷ 570 ಲಕ್ಷ ರೂಪಾಯಿಗೆ ಬಂದಿದೆ. ಈ ವರ್ಷ 150 ಲಕ್ಷ ರೂಪಾಯಿ ಏತಕ್ಕೆ ಕಡಿಮೆಯಾಯಿತು ಎಂದು ಗೃಹ ಮಂತ್ರಿಗಳನ್ನು ಕೇಳುತ್ತೇನೆ. ಟ್ಯಾಕ್ಸಸ್ ಆನ್ ವೆಹಿಕಲ್ಸ್—ಅಕೌಂಟ್ಸ್ ಫಾರ್ 1963-64 ನಲ್ಲಿ 720 ಲಕ್ಷ ಇತ್ತು. 1964-65ರಲ್ಲಿ 570 ಲಕ್ಷ ರೂಪಾಯಿ ಆಗಿದೆ. ಬಜೆಟ್ ಎಸ್ಟಿಮೇಟ್ಸ್ 1965-66 ನಲ್ಲಿ 575 ಲಕ್ಷ ರೂಪಾಯಿ ಅಂದಾಜು ಮಾಡಲಾಗಿದೆ. ಬರುವ ವರ್ಷದಲ್ಲಿ 145 ಲಕ್ಷ ಏತಕ್ಕೆ ಕಡಿಮೆಯಾಯಿತು ! ಇದರಲ್ಲಿ ಏನಾದರೂ ತಪ್ಪಾಗಿದೆಯೇ ? ಮೋಟಾರ್ ವಾಹನ ಕಾನೂನಿನಿಂದ ಜನತೆ ನಿರೀಕ್ಷಿಸಿದಷ್ಟು ಸೌಕರ್ಯ ಜನತೆಗೆ ದೊರೆಯುತ್ತಿಲ್ಲ ಎನ್ನುವುದನ್ನು ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈ ವಿಷಯವನ್ನು ಶ್ರೀಮಾನ್ ಕೆ. ಎಸ್. ಸೂರ್ಯನಾರಾಯಣರಾಯರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದರು. ವಾಹನ ಸಂಚಾರಕ್ಕೆ ಯೋಗ್ಯ ರಸ್ತೆಗಳಿಲ್ಲ. ಆದರೂ ಕೂಡ ಮೋಟಾರ್ ವಾಹನ ಸರ್ಟಿಫಿಕೇಟ್ ಸಿಕ್ಕುತ್ತಿದೆ. ಎಷ್ಟರ ಮಟ್ಟಿಗೆ ಆಡಳಿತ ನಡೆಯುತ್ತಿದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ನಮ್ಮ ನೆರೆ ರಾಜ್ಯಗಳಾದ ಆಂಧ್ರ ತಮಿಳು ನಾಡಿನಲ್ಲಿ ಯಾವ ರೀತಿ ಆಡಳಿತ ನಡೆಯುತ್ತಿದೆ ಎಂಬುದನ್ನು ನೋಡಿಕೊಂಡು ಬರಲು ಯಾರನ್ನಾದರೂ ಅಲ್ಲಿಗೆ ಕಳಿಸಿಕೊಡಬೇಕು.

ಎಷ್ಟೋ ಜನರು ತಮ್ಮ ಮೋಟಾರು ವಾಹನಗಳನ್ನು ಆರ್. ಟಿ. ಒ. ಆಫೀಸಿಗೆ ತೆಗೆದುಕೊಂಡು ಹೋಗದೆಯೇ ಸರ್ಟಿಫಿಕೇಟುಗಳನ್ನು ಮತ್ತು ಪರ್ಮಿಟ್ಟುಗಳನ್ನು ಪಡೆಯುತ್ತಿದ್ದಾರೆ. ಇಂಥ ಜನರೇ ಜಾಸ್ತಿಯಾಗುತ್ತಿದ್ದಾರೆ. ಈ ದಿವಸ ಮೋಟಾರು ವಾಹನಗಳನ್ನು ಇನ್‌ಸ್ಪೆಕ್ಷನ್ ಮಾಡತಕ್ಕ ಬ್ರೇಕ್ ಇನ್‌ಸ್ಪೆಕ್ಟರುಗಳು ಅಂತ ಯಾರಿದ್ದಾರೋ ಅವರಿಗೆ ಒಂದು ನೈಪುಣ್ಯತೆ ಇರಬೇಕು, ಅವರಿಗೊಂದು ನಿಗದಿಯಾದ ಕ್ವಾಲಿಫಿಕೇಷನ್ ಇರಬೇಕು. ಆದರೆ ಅಂಥ ಜನರನ್ನು ಈ ದಿವಸ ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಿಲ್ಲ. ಯಾವುದಾದರೂ ಒಂದು ಖಾಸಗೀ ವರ್ಕ್‌ಷಾಪಿನಲ್ಲಿ ಕೆಲವು ಕಾಲ ಮೆಕ್ಯಾನಿಕ್ಕಾಗಿ ಕೆಲಸ ಮಾಡಿದ್ದಾನೆ ಅಂತ ಒಂದು ಸರ್ಟಿಫಿಕೇಟನ್ನು ತಂದರೆ ಅಂಥವರಿಗೆಲ್ಲಾ ಈ ಬ್ರೇಕ್ ಇನ್‌ಸ್ಪೆಕ್ಟರ್ ಕೆಲಸವನ್ನು ಕೊಟ್ಟಿದ್ದಾರೆ. ಹೀಗೆ ನೈಪುಣ್ಯತೆಯಿಲ್ಲದ ಜನರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವುದು ನ್ಯಾಯವಾದ್ದಲ್ಲ. ಇಂಥ ನ್ಯೂನತೆಗಳಿರುವುದರಿಂದಲೇ ಈ ಇಲಾಖೆಯಿಂದ ಬರಬೇಕಾಗಿದ್ದಷ್ಟು ವರಮಾನ ಬರುತ್ತಿಲ್ಲ. ವಾಹನಗಳ ಮಾಲೀಕರುಗಳು ಅಕ್ರಮ ರೀತಿಯಲ್ಲಿ ಪರ್ಮಿಟ್ಟುಗಳನ್ನು ಪಡೆಯಲು ಆರ್. ಟಿ. ಒ. ಆಫೀಸಿನಲ್ಲಿರತಕ್ಕ ಸಿಬ್ಬಂದಿಯವರು ಸಹಕರಿಸುತ್ತಿರುವುದರಿಂದಲೇ ಈ ದಿವಸ ಸರ್ಕಾರಕ್ಕೆ ಬರತಕ್ಕ ವರಮಾನ ಕಡಮೆಯಾಗಿದೆ. ಆದುದರಿಂದ ಸರ್ಕಾರದವರು ಈ ವಿಚಾರಕ್ಕೆ ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ. ಸರ್ಕಾರದವರು ಇಂಥ ವರಮಾನ ತರತಕ್ಕ

(ಶ್ರೀ ಜಿ. ವಿ. ಗೌಡ)

ಇಲಾಖೆಗಳಿಗೆ ಜನರನ್ನು ನೇಮಕ ಮಾಡಿಕೊಳ್ಳತಕ್ಕ ಕಾಲದಲ್ಲಿ ಜನರಿಗೆ ಸರ್ಕಾರಕ್ಕೆ ಬರತಕ್ಕ ವರಮಾನ ಖೋತಾ ಆಗುವುದಿಲ್ಲ ಅಂಥ ಜನರನ್ನು ನೇಮಕ ಮಾಡಿಕೊಂಡಿದ್ದಾರೆ ಎಂಬ ಒಂದು ವಿಶ್ವಾಸ ಬರತಕ್ಕ ರೀತಿಯಲ್ಲಿ ಜನರನ್ನು ನೇಮಕಮಾಡಿಕೊಳ್ಳಬೇಕು. ಆದುದರಿಂದ ಸರ್ಕಾರದವರು ಈ ವಿಚಾರಕ್ಕೆ ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಜೈಲುಗಳ ಸುಧಾರಣೆಯ ವಿಚಾರಕ್ಕೆ ಬಂದರೆ ಈಗಾಗಲೇ ಕೆಲವು ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಆದರೆ ಇತ್ತೀಚೆಗೆ ಜೈಲುಗಳಿಗೆ ಬರತಕ್ಕ ಕಾನವಿಕ್ಟ್ಸ್‌ಗಳ ಸಂಖ್ಯೆ ಕಡಮೆಯಾಗಿದೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ಈ ಸಂಖ್ಯೆ ಕೆಲವು ಕಡೆ ಕಡಮೆಯಾಗಿರಬಹುದು, ಇನ್ನು ಕೆಲವು ಕಡೆ ಜಾಸ್ತಿಯಾಗಿರಬಹುದು. ಆದರೆ ಯಾವುದೂ ಖಚಿತವಾಗಿ ಗೊತ್ತಾಗುವುದಿಲ್ಲ. ಕಳೆದ ಬಜೆಟ್ಟಿನಲ್ಲಿ ಈ ಬಾಬಿಗೆ 41 ಲಕ್ಷದ 42 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದ್ದಿತು. ಆದರೆ ಈ ಸಾಲದಲ್ಲಿ 50 ಲಕ್ಷದ 80 ಸಾವಿರ ರೂಪಾಯಿಗಳು ಬೇಕೆಂದು ಕೇಳಿದ್ದಾರೆ. ಅಂತೂ ಹೀಗೆ ಇದರ ವೆಚ್ಚ ಮಾತ್ರ ಜಾಸ್ತಿಯಾಗುತ್ತ ವರಮಾನ ಮಾತ್ರ ಕಡಮೆಯಾಗುತ್ತಿದೆ. ಅಂತೂ ಈ ವರ್ಷ ಒಂಬತ್ತೂವರೆ ಲಕ್ಷ ರೂಪಾಯಿಗಳನ್ನು ಜಾಸ್ತಿಯಾಗಿ ಕೇಳಿದ್ದಾರೆ. ಹೀಗೆ ವರ್ಷ ವರ್ಷ ಇದರ ಖರ್ಚು ಜಾಸ್ತಿಯಾಗುತ್ತಾ ಆದಾಯ ಕಡಮೆಯಾಗುತ್ತಿದೆ. ಯಾವಾಗ ಆದಾಯ ಕಡಮೆಯಾಗುತ್ತದೋ ಆಗ ಇದರ ಖರ್ಚನ್ನಾದರೂ ಕಡಮೆ ಮಾಡಬೇಕು. ಅಲ್ಲಿಗೂ ನಮಗೆ ಆದಾಯ ಬಂದಂತೆಯೇ. ಸರ್ಕಾರ ಇತ್ತ ಕಡೆಗೆ ಹೆಚ್ಚಿನ ಗಮನ ಕೊಡಬೇಕಾದ್ದು ಅವಶ್ಯಕ. ಜೈಲುಗಳು ತಮ್ಮ ಒಂದು ಸ್ವಯಂ ಪರಿಪೂರ್ಣತೆಯೇನಿದೆ ಅದನ್ನು ಅವು ಗಳಿಸಿಕೊಳ್ಳಲೇಬೇಕು. ಈ ವಿಚಾರದಲ್ಲಿ ಗುಲ್ಬರ್ಗ ಜೈಲು ಒಂದು ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ. ಅದು ಸಾಮಾನ್ಯವಾಗಿ ಒಂದು ಫ್ಯಾಕ್ಟರಿ ಇದ್ದಂತೆಯೇ ಇರುತ್ತದೆ. ಆದರೆ ಈ ದಿವಸ ಅದನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದಿದ್ದಾರೆಂಬ ವಿಚಾರ ಕೇಳುತ್ತಿದ್ದೇನೆ. ಅದಕ್ಕೆ ಕಾರಣ ಗೊತ್ತಾಗಲಿಲ್ಲ. ಜೈಲಿಗೆ ಬರತಕ್ಕ ಮನುಷ್ಯನಿಗೆ ಜೈಲಿನಿಂದ ಖುಲಾಸ್‌ಯಾದ ನಂತರ ಅವನು ಸಮಾಜದಲ್ಲಿರತಕ್ಕ ಇತರೇ ಜನರೊಂದಿಗೆ ಕಲೆತು ನೆಮ್ಮದಿಯಿಂದ ಮತ್ತು ಮರ್ಯಾದೆಯಿಂದ ಅವನು ತನ್ನ ಜೀವನವನ್ನು ಸಾಗಿಸಿಕೊಂಡು ಹೋಗಲು ಅನುಕೂಲವಾಗುವಂತೆ ಆತನಿಗೊಂದು ಏನಾದರೂ ಉದ್ಯೋಗವನ್ನು ದೊರಕಿಸಿಕೊಡತಕ್ಕದ್ದೇ ಇದರ ಮೂಲ ಗುರಿ. ಅಂಥ ಒಂದು ಮನೋಭಾವ ಬರತಕ್ಕ ರೀತಿಯಲ್ಲಿ ಜೈಲುಗಳು ಕೆಲಸಮಾಡಬೇಕು. ಆ ಮಟ್ಟಕ್ಕೆ ನಾವು ಈ ಜೈಲುಗಳನ್ನು ಸುಧಾರಣೆಮಾಡಬೇಕಾಗಿದೆ. ಈ ದಿವಸ ನಮ್ಮ ನೆರೆ ರಾಜ್ಯವಾದ ಆಂಧ್ರದಲ್ಲಿ ನಿರ್ಮಾಣವಾಗತಕ್ಕ ನಾಗಾರ್ಜುನ ಸಾಗರವನ್ನು ಬಹುಮಟ್ಟಿಗೆ ಈ ಜೈಲುಗಳಲ್ಲಿರತಕ್ಕ ಜನರಿಂದಲೇ ಕಟ್ಟಿಸಿದ್ದಾರೆ. ಹೀಗೆ ಆ ದೇಶದಲ್ಲಿ ಜೈಲಿನಲ್ಲಿರತಕ್ಕ ಜನರಿಂದ ದೇಶಾಭಿವೃದ್ಧಿಗಳ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ನಡೆಸುವಂತಾಗಬೇಕೆಂದು ನಾನು ತಿಳಿಸಲಿಚ್ಛಿಸುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ವಿಚಾರಕ್ಕೆ ಬಂದರೆ, ನಮ್ಮ ರಾಜ್ಯವನ್ನು ಒಂದು ಸುಖೀ ರಾಜ್ಯವನ್ನಾಗಿ ಮಾಡಬೇಕೆಂಬುದು ನಮ್ಮೆಲ್ಲರ ಇರಾದೆ. ಆ ಧ್ಯೇಯಕ್ಕೆ ಈ ದಿವಸ ಇರತಕ್ಕ ನಮ್ಮ ಪೋಲೀಸ್ ಇಲಾಖೆ ಎಷ್ಟರಮಟ್ಟಿಗೆ ಹೊಂದಿಕೊಂಡು ಕೆಲಸಮಾಡುತ್ತಿದೆ ಎಂಬುದನ್ನು ನಾವೀಗ ವಿಚಾರಮಾಡಬೇಕಾಗಿದೆ. ಈ ಇಲಾಖೆಯಲ್ಲಿ ಕೆಲಸ ಕಾರ್ಯಗಳು ದಕ್ಷತೆಯಿಂದಲೂ, ನಿಸ್ಪೃಹತೆಯಿಂದಲೂ ಮತ್ತು ವಿವೇಕದಿಂದಲೂ ಕೆಲಸಮಾಡಬೇಕಾಗಿದ್ದರೆ ಈ ಇಲಾಖೆಯಲ್ಲಿ ವಿದ್ಯಾವಂತರ ಸಂಖ್ಯೆ ಜಾಸ್ತಿಯಾಗಬೇಕು, ನಾನು ಹೀಗೆ ಹೇಳುತ್ತಿರುವಾಗ ವಿದ್ಯಾವಂತರಿದ್ದಲ್ಲಿ ಭ್ರಷ್ಟಾಚಾರಗಳು ನಡೆಯುವುದಿಲ್ಲವೇ ಎಂದು ಕೇಳಬಹುದು. ಅದಕ್ಕೆ ನಾನು ಹೇಳುವುದಿಷ್ಟೆ: ದೇಶದಲ್ಲಿ ಎಂದಿನವರೆಗೂ ಈ ಅವಿದ್ಯಾವಂತರ ಸಂಖ್ಯೆ ಜಾಸ್ತಿಯಾಗಿರುತ್ತದೋ ಅಂದಿನವರೆಗೂ ಇಂಥ ಭ್ರಷ್ಟಾಚಾರಕ್ಕೆ ಅವಕಾಶವಿದ್ದೇ ಇರುತ್ತದೆ. ಆದರೆ ಈ ಇಲಾಖೆಗೆ ಸೇರತಕ್ಕ ಜನರಿಗೆ ಅವರು ಇರತಕ್ಕದ್ದು ಸಮಾಜದ ಒಂದು ಪರಿವರ್ತನೆಗಾಗಿ, ಜನರನ್ನು ಒಂದು ಸನ್ಮಾರ್ಗಕ್ಕೆ ತರುವುದಕ್ಕಾಗಿ, ಜನರು ಒಂದು ಒಳ್ಳೇ ರೀತಿಯಲ್ಲಿ ನಡೆಯುವುದಕ್ಕಾಗಿ, ಎಂಬ ಒಂದು ಭಾವನೆ ಅವರಲ್ಲಿ ಬರುವಂತೆ ನಾವು ಅವರಿಗೊಂದು ಶಿಕ್ಷಣವನ್ನು ಕೊಡತಕ್ಕದ್ದು ಅತ್ಯವಶ್ಯಕ. ಅದಿಲ್ಲದೆ ನಾವೇನು ಮಾಡಿದರೂ ಪ್ರಯೋಜನವಿಲ್ಲ. ಸಮಾಜದಲ್ಲಿರತಕ್ಕ ಜನರನ್ನು ಹೊಂದಿಕೊಂಡು, ಇವರ ಮೇಲ್ಮೆಗಾಗೇ ನಾವು ಇರುತ್ತೇವೆಂಬ ರಾಷ್ಟ್ರೀಯ ಭಾವನೆ ಇವರಲ್ಲಿ ಬರಬೇಕು. ಅದಿಲ್ಲದಮೇಲೆ ಈ ಇಲಾಖೆ ಇದ್ದರೂ ಪ್ರಯೋಜನವಿಲ್ಲ. ಈ ದಿವಸ ಸರ್ಕಾರದವರು offences against the State ಎಂದು ನಾವೇನು ಹೇಳುತ್ತಿದ್ದೇವೆ. ಅವುಗಳ ಸಂಖ್ಯೆ ಕಡಮೆಯಾಗುತ್ತಿದೆಯೆಂದು ಹೇಳುತ್ತಿದ್ದಾರೆ. ಆದರೆ ಅದು ನಂಬತಕ್ಕದ್ದಲ್ಲ. ಈ ಕೃತ್ಯಗಳು ಹೆಚ್ಚಿನ ಮಟ್ಟದಲ್ಲಿ ನಡೆಯುತ್ತಿದೆ. ಆದರೆ ಅವುಗಳನ್ನೆಲ್ಲಾ ಪೋಲೀಸಿನವರು ನ್ಯಾಯಾಧೀಶರ ಮುಂದೆ ತರುತ್ತಿಲ್ಲ. ಅದರಿಂದ ನಮಗೆ ಈ ದಿವಸ ಈ ಸಂಖ್ಯೆಗಳು ಕಡಮೆ

ಯಾದಂತೆ ಕಾಣುತ್ತಿವೆ. ಆದರೆ ಇದನ್ನು ಸರ್ಕಾರದವರು ಕೂಡಲೇ ವಿಚಾರಮಾಡಬೇಕೆಂದು ಹೇಳುತ್ತೇನೆ.

ಇನ್ನು ಪ್ರವಾಸಿಮಂದಿರಗಳ ಬಗ್ಗೆ ನಾನು ಎರಡು ಮಾತುಗಳನ್ನಾಡಬೇಕಾಗಿದೆ. ಇವುಗಳನ್ನು ಉತ್ತಮಪಡಿಸಿ ಅಲ್ಲಲ್ಲೇ ಕೆಲವು ಟೂರಿಸ್ಟ್ ಸೆಂಟರುಗಳನ್ನು ಮಾಡತಕ್ಕ ಬಗ್ಗೆ ನಮ್ಮ ರಾಜ್ಯಕ್ಕೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಬರಬೇಕಾಗಿದ್ದ ಹಣ ಬರಲಿಲ್ಲ, ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನವರು ಕೇಂದ್ರ ಸರ್ಕಾರದ ಸಹಾಯವನ್ನು ಪಡೆದು ಪ್ರತಿ ಜಿಲ್ಲಾ ಕಸಬೆಗಳಲ್ಲೂ ಒಂದೊಂದು ಟೂರಿಸ್ಟ್ ಸೆಂಟರ್‌ಗಳನ್ನು ಮಾಡಿದ್ದಾರೆ. ಈ ದಿವಸ ಮಧುರೆ, ತಿರುಚನಾಪಳ್ಳಿ ಮತ್ತು ಕೊಯಮತ್ತೂರುಗಳಲ್ಲಿ ದೊಡ್ಡ ಟೂರಿಸ್ಟ್ ಸೆಂಟರುಗಳನ್ನು ಮಾಡಿದ್ದಾರೆ. ನಮ್ಮಲ್ಲಿ ಒಂದಾದರೂ ಇಲ್ಲ. ಆದುದರಿಂದ ಈ ವಿಚಾರವನ್ನು ಕೇಂದ್ರ ಸರಕಾರಕ್ಕೆ ತಿಳಿಸಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಹೆಚ್ಚಿನ ಹಣವನ್ನು ಪಡೆಯಬೇಕೆಂದೂ, ಇಲ್ಲಿನ ಪ್ರವಾಸಿ ಮಂದಿರಗಳನ್ನು, ಟೂರಿಸ್ಟ್ ಕೇಂದ್ರಗಳನ್ನು ಮಾಡಬೇಕೆಂದೂ ತಿಳಿಸಿ, ಈ ವರ್ಷದ ಬಡ್ಜೆಟ್ ಕಳೆದ ಸಾಲಿಗಿಂತ ಆದಾಯದಲ್ಲಿ ಖೋತಾ ಆಗಿರುವುದರಿಂದ ಇದು ನಮ್ಮ ಸಹಾನುಭೂತಿಗೆ ಅರ್ಹವಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಗೃಹ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಸುಮಾರು ಐದೂವರೆ ಕೋಟಿ ರೂಪಾಯಿಗಳ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಮಾಡಬೇಕೆಂದು ಇಷ್ಟಪಡುತ್ತೇನೆ

ಇಲ್ಲಿಯವರೆಗೂ ಮಾತನಾಡಿರತಕ್ಕ ಮಾನ್ಯ ಸದಸ್ಯರನೇಕರು ತಮ್ಮ ತಮ್ಮ ವಿಚಾರಗಳನ್ನು ಹೇಳಿದ್ದಾರೆ. ಆದರೆ ಶ್ರೀ ಆರ್. ಎಂ. ಪಾಟೀಲರವರು ಈ ಗೃಹಶಾಖೆ ಮಂತ್ರಿಪದವಿಯನ್ನು ವಹಿಸಿಕೊಂಡ ಮೇಲೆ ಈ ಪೋಲೀಸ್ ಖಾತೆಯೊಂದು ದಕ್ಷತೆಗೆ ಹೆಸರಾಗಿದೆ ಎಂಬುದಾಗಿ ಜನರು ಹೇಳುತ್ತಿದ್ದಾರೆ. ಇದು ತುಂಬಾ ಸಂತೋಷದ ವಿಷಯ. ಇದಕ್ಕೆ ಕಾರಣ ಈ ವರ್ಷ ಶಾಲಾ ವಿದ್ಯಾರ್ಥಿಗಳು ನಡೆಸಿದ ದಂಗೆಯ ವಿಷಯದಲ್ಲೂ ಮತ್ತು ಆಹಾರ ಪರಿಸ್ಥಿತಿಯನ್ನು ಒಂದು ಹತೋಟಿಗೆ ತರತಕ್ಕ ವಿಷಯದಲ್ಲೂ ಪೋಲೀಸಿನವರು ತೋರಿಸಿದಂಥ ಧೈರ್ಯ ಸಾಹಸಗಳನ್ನು ಹಿಂದೆ ಈ ಇಲಾಖೆಯವರು ಎಂದೂ ತೋರಿಸಿರಲಿಲ್ಲ. ಇದೊಂದು ಹೆಮ್ಮೆಪಡತಕ್ಕ ವಿಚಾರವೆಂದು ನಾನು ಹೇಳುತ್ತೇನೆ.

ಇನ್ನು ಎರಡನೆಯದಾಗಿ ತೆರಿಗೆಗಳ ವಿಚಾರಕ್ಕೆ ಬಂದರೆ—ಸರ್ಕಾರದವರು ಕಾರು ಮತ್ತು ಲಾರಿಗಳ ಮೇಲೆ ಎಷ್ಟು ತೆರಿಗೆಯನ್ನು ಹಾಕಿದರೂ ನಾನು ಬೇಡವೆನ್ನುವುದಿಲ್ಲ, ಆದರೆ ನಮ್ಮ ಸರ್ಕಾರದವರು ರೈತರು ಬಳಸತಕ್ಕ ಟ್ರಾಲಿ ಟ್ರಾಕ್ಟರುಗಳ ಬಗ್ಗೆ ತೆರಿಗೆಯನ್ನು ಕಡಿಮೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಜೈಲುಗಳ ಸುಧಾರಣೆಯ ವಿಚಾರಕ್ಕೆ ಬಂದರೆ—ಸರ್ಕಾರದವರು ಈಗಾಗಲೇ ಈ ಬಗ್ಗೆ ಬಹಳ ಸುಧಾರಣೆಯನ್ನು ಮಾಡಿದಾಗ್ಗೂ ಅನೇಕರು ಇವುಗಳನ್ನಿನ್ನೂ ಉತ್ತಮ ರೀತಿಯಲ್ಲಿ ಸುಧಾರಣೆ ಮಾಡಬೇಕೆಂದು ಹೇಳಿದ್ದಾರೆ. ನಾನಾದರೋ ಇವುಗಳ ಬಗ್ಗೆ ಈಗ ಸರ್ಕಾರದವರು ಮಾಡಿರತಕ್ಕ ಸುಧಾರಣೆಯೇ ಸಾಕು, ಇನ್ನು ಹೆಚ್ಚಿನ ಸುಧಾರಣೆಗಳೇನೂ ಬೇಡ ಎಂದು ಹೇಳುತ್ತೇನೆ. ಇದಕ್ಕೆ ಕಾರಣ ಇಷ್ಟೆ, ಈ ದಿವಸ ಅಲ್ಲಿ ಮುಂಜಾನೆಗೆ ಒಂದು ಸಾರ್ತಿ ಚಹಾ, ಅದಾದ ನಂತರ ಮಧ್ಯಾಹ್ನಕ್ಕೆ ಊಟ, ಇದಾದ ನಂತರ ಮತ್ತೆ ಸಂಜೆಗೆ ಚಹಾ, ಸಾಲದ್ದಕ್ಕೆ ಅವರಿಗೆ ಆಟವಾಡಲು ಇಸ್ಪೀಟ್ ಪ್ಯಾಕೆಟ್ಟುಗಳು, ಇಷ್ಟೆಲ್ಲಾ ಆದಮೇಲೆ ಇನ್ನೇನು ಬೇಕು ? ಇದನ್ನು ಇನ್ನೂ ಜಾಸ್ತಿ ಮಾಡಿದಲ್ಲಿ ಜೈಲಿಗೆ ಹೋದ ಜನರು ಹೊರಗೆ ಬರುವುದಕ್ಕೆ ಒಪ್ಪುತ್ತಾರೋ ಇಲ್ಲವೋ ತಿಳಿಯುವುದಿಲ್ಲ. ಹಾಗೂ ಒಂದು ವೇಳೆ ಅವರು ಜೈಲಿನಿಂದ ಹೊರಗೆ ಖುಲಾಸೆಯಾಗಿ ಬಂದರೂ ಮತ್ತೆ ಏನಾದರೂ ಮಾಡಿ ಅವರು ಅಲ್ಲಿಗೇ ಹೋಗಲು ಪ್ರಯತ್ನ ಮಾಡುತ್ತಾರೆ. ಆದುದರಿಂದ ಈಗ ಮಾಡಿರತಕ್ಕ ಸುಧಾರಣೆಗಳೇ ಸಾಕು ಎಂದು ಹೇಳುತ್ತೇನೆ.

ಇನ್ನು ಪ್ರೊಹಿಬಿಷನ್ ವಿಚಾರಕ್ಕೆ ಬಂದರೆ—ಪಾನ ನಿರೋಧವನ್ನು ದಕ್ಷತೆಯಿಂದ ಜಾರಿಗೆ ತರಲು ಈ ಖಾತೆಯ ಉಸ್ತುವಾರಿ ನೋಡತಕ್ಕವರು ಪೆಟ್ರೋಲ್ ಫೋರ್ಸ್, ಮತ್ತು ಮೊಬೈಲ್ ಫೋರ್ಸ್ ಎಂತ ಏನೋ ಮಾಡಿದಾಗ್ಗೂ ಇದು ಅಷ್ಟು ಯಶಸ್ವಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂತ ಜನರು ಆಡಿಕೊಳ್ಳುತ್ತಿದ್ದಾರೆ. ನಾನು ಒಂದಾವರ್ತಿ ನನ್ನ ಸ್ನೇಹಿತರೊಂದಿಗೆ ಮಾತನಾಡುತ್ತಿದ್ದಾಗ ಒಬ್ಬರು ಒಂದು ವಿಚಾರವನ್ನು ತಿಳಿಸಿದರು. ಅವರು ಹೇಳಿದುದೇನೆಂದರೆ : ಸರ್ಕಾರದವರು ಪ್ರತಿಯೊಂದು ತಾಲ್ಲೂಕಿಗೂ ನಾಲ್ಕು ನಾಲ್ಕು "ಕರಡಿಗಳನ್ನು" ನೇಮಕ ಮಾಡಿಕೊಂಡರೆ ಪೋಲೀಸರು ಮಾಡತಕ್ಕ ಕೆಲಸವನ್ನು ಆ ಕರಡಿಗಳೇ ಮಾಡುತ್ತವೆಂಬುದಾಗಿ ಅವರು ಹೇಳಿದರು (ಸಭೆಯಲ್ಲಿ ನಗು). ಈ ದಿವಸ ಕೆಲವು ಕೇಸುಗಳನ್ನು ಪೋಲೀಸರು ಪತ್ತೆಮಾಡುವುದಕ್ಕಾಗಿ ಅಲ್‌ಸೇಷ್ಯನ್ ನಾಯಿಗಳನ್ನು ಹೇಗೆ ಇಟ್ಟುಕೊಂಡಿದ್ದಾರೋ ಹಾಗೇ ಈ ಕರಡಿಗಳನ್ನು ನೇಮಕ ಮಾಡಿಕೊಂಡರೆ ಈ ಕೇಸುಗಳನ್ನು ಪತ್ತೆ ಹಚ್ಚಬಹುದೆಂದು ಹೇಳುತ್ತೇನೆ. (ನಗು) ಪೋಲಾಗಿ ಈ ಕರಡಿಗಳಿಗೆ ಮೂಗು ಅಗಲವಾಗಿದ್ದು ಅದು

(ಶ್ರೀ ಎಸ್. ವಿ. ಅಗ್ನಿಹೋತ್ರಿ)

ಬಹಳ ತೀಕ್ಷ್ಣವಾಗಿಯೂ ಇರುತ್ತದೆ. ಆದುದರಿಂದ ಅವುಗಳಿಗೆ ಕಳ್ಳಭಟ್ಟಿ ಸಾರಾಯಿಯನ್ನು ತಯಾರಿಸತಕ್ಕ ಸ್ಥಳ ಬೇಗ ಗೊತ್ತಾಗುತ್ತದೆ. ಮೇಲಾಗಿ ಕರಡಿಗಳಿಗೂ ಆ ಕಳ್ಳಭಟ್ಟಿ ಸಾರಾಯಿ ಎಂದರೆ ಬಹಳ ಇಷ್ಟ. ಅವು ಆ ಸಾರಾಯಿಯನ್ನು ಕುಡಿದು ಮತ್ತು ಹತ್ತಿದಮೇಲೆ ಅವು ತಾನಾಗೇ ಅಲ್ಲಿಟ್ಟಿರತಕ್ಕ ಸಾರಾಯನ್ನೆಲ್ಲಾ ತುಳಿದುಹಾಕಿ ಹಾಳುಮಾಡುತ್ತವೆ. ಇಷ್ಟಾದಮೇಲೆ ಪೋಲೀಸ್ ಅಧಿಕಾರಿಗಳಿಗೆ ಈ ಕೇಸುಗಳನ್ನು ಪತ್ತೆಹಚ್ಚಿ ಅವುಗಳ ಬಗ್ಗೆ ತನಿಖೆ ನಡೆಸತಕ್ಕ ತೊಂದರೆಯೂ ಕೂಡ ತಪ್ಪುವುದು (ಸಭೆಯಲ್ಲಿ ನಗು) ಈ ಅಧಿಕಾರಿಗಳಿಗೂ ತ್ರಾಸಿರುವುದಿಲ್ಲ. ಆದುದರಿಂದ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿಗೂ ನಾಲ್ಕು ನಾಲ್ಕು ಕರಡಿಗಳನ್ನು ಕೆಲಸಕ್ಕೆ ನೇಮಿಸಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

5-30 P.M.

ಬಾದಾಮಿ, ಗೋಕರ್ಣ, ಉಳವಿ, ಜೋಗ್, ದಾಂಡೇಲಿ ಮುಂತಾದ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಲು ಜನರು ಧಾರವಾಡ ಮತ್ತು ಹುಬ್ಬಳ್ಳಿಗೆ ಬರುವುದು ಬಹಳ ಜಾಸ್ತಿಯಾಗುತ್ತಾ ಇದೆ. ಆದ್ದರಿಂದ ಅಲ್ಲಿ ಇರತಕ್ಕ ಟಿ. ಬಿ. ಸೌಕರ್ಯ ಸಾಕಾಗುತ್ತಾ ಇಲ್ಲದಿರುವುದರಿಂದ ಅಲ್ಲಿ ಬರತಕ್ಕ ಜನಗಳಿಗೆ ಟಿ. ಬಿ. ಅನುಕೂಲವನ್ನು ಧಾರವಾಡ ಹುಬ್ಬಳ್ಳಿ ನಡುವೆ ಇರುವ ಎನ್‌ಕಲ್ ಕೆರೆಯ ಹತ್ತಿರ ಒಂದು, ಎರಡನೇದ್ದು ದುಮ್ಮಾಡ ಕೆರೆಯ ಮೇಲೊಂದು, ಇನ್ನೂ ಹೆಚ್ಚಿಗೆ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಮಾನ್ಯ ಅಧ್ಯಕ್ಷರು ನನಗೆ ಐದು ನಿಮಿಷ ಎಂದರೆ ಐದೇ ನಿಮಿಷಗಳನ್ನೇ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮೀ, ಪೋಲೀಸ್ ಖಾತೆಯನ್ನು ಹೊಂದಿರತಕ್ಕ ಮಾನ್ಯ ಮಂತ್ರಿಗಳ ಆಕಾರ ಮತ್ತು ಅವರ ಶರೀರದ ಗಾತ್ರ ನೋಡಿದರೆ ನಿಜವಾಗಿಯೂ ಕೂಡ ಜನ ಅವರನ್ನು ನೋಡಿದರೇನೇ—

Mr. SPEAKER.—That is why I do not give any time to this Member. If he does not change the tenor of the speech, I will cancel the time that is given to him.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಳ್ಳೆಯದು, ಪೋಲೀಸ್ ಖಾತೆಯ ಆಡಳಿತದಲ್ಲಿ ದಕ್ಷತೆ ನೋಡಿದರೆ ಇತ್ತೀಚೆಗೆ ಮೈಸೂರು ಸಂಸ್ಥಾನದಲ್ಲಿ ಪೋಲೀಸ್ ಖಾತೆ ಇದೆಯೋ ಇಲ್ಲವೋ ಎಂಬ ಅನುಮಾನ ಈ ಕಡೆ ಮತ್ತು ಆ ಕಡೆ ಸದಸ್ಯರೆಲ್ಲರಿಗೂ ಬಂದಿದೆ, ಕಾರಣಾಂತರದಿಂದ ಕೆಲವರು ಹೇಳುವುದಿಲ್ಲ, ಆದರೆ ನಾವು ಹೇಳಬೇಕಾಗಿದೆ. ಮೈಸೂರು ದೇಶದಲ್ಲಿ ಪೋಲೀಸ್ ಖಾತೆ ಇದ್ದರೆ ಪಾನನಿರೋಧ ಮತ್ತು ಆಹಾರ ಸಮಸ್ಯೆ ಈ ಮಟ್ಟಕ್ಕೆ ಬರುತ್ತಾ ಇತ್ತೇ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಪಾನನಿರೋಧ ಯಶಸ್ವಿಯಾಗಿದೆ ಎನ್ನುವುದನ್ನು ನಮ್ಮ ಎಕ್ಸೈಜ್ ಮಂತ್ರಿಗಳು ಪದೇ ಪದೇ ಹೇಳುತ್ತಾರೆ. ಬೇಕಾದರೆ ಯಾರಿಗೂ ಸಮಾಚಾರ ಕೊಡದೆ ವಿಚಾರಮಾಡಿ, ಆ ಪೋಲೀಸಿನವರ ಡ್ರೆಸ್ಸನ್ನು ತರಿಸಿ ಕೆಮಿಕಲ್ ಎಕ್ಸಾಮಿನೇಷನ್ ಮಾಡಿಸಿ ಆಗ ಗೊತ್ತಾಗುತ್ತದೆ. ಅದರಲ್ಲಿ ಎಷ್ಟು ಪರ್ಸೆಂಟ್ ಆಲ್ಕೋಹಾಲ್ ಇದೆ ಎಂಬುದು. ಬೇಕಾದರೆ ನಾನು ಅದನ್ನು ಪ್ರೂಫ್ ಮಾಡಿ ಕೊಡುತ್ತೇನೆ. ಅದನ್ನು ನೋಡಿದರೆ ನಿಜವಾಗಿಯೂ ನಿಮ್ಮ ಪಾನ ನಿರೋಧ ಎಷ್ಟು ಮಟ್ಟಿಗೆ ಯಶಸ್ವಿಯಾಗಿದೆ ಎಂಬುದು ವ್ಯಕ್ತವಾಗುತ್ತದೆ. ಇನ್ನು ಈಚಲು ಮರ ಕಟ್ಟುವ ವಿಷಯ. ನಿಜವಾಗಿಯೂ ಈ ಪೋಲೀಸ್‌ನವರನ್ನು ತೆಗೆದು ಹಾಕಿದರೆ ದೇಶ ಉಳಿಯುತ್ತದೆ ಎಂದು ನನ್ನ ಭಾವನೆ. ಉದಾಹರಣೆಗೆ ಹೇಳುವುದಾದರೆ ಹಳೇ ಮೈಸೂರಿನಲ್ಲಿ ಮರ್ಡರ್ ಕೇಸಸ್ ಬಹಳ ಕಡಿಮೆ ಇತ್ತು ತಾವು ಬಂದಮೇಲೆ ಅದೇನು ಬೀಜ ಹಾಕಿದ್ದೀರೋ ಅರಸೀಕೆರೆಯಲ್ಲಿ ಸುಮಾರು ಮೂರು ತಿಂಗಳಿನಿಂದ ಈಚೆಗೆ 5 ಮರ್ಡರ್ ಕೇಸುಗಳು ಆಗಿದೆ. ಒಂದೇ ಒಂದು ಊರಿನಲ್ಲಿ ಎರಡು ಮರ್ಡರುಗಳು ಆಗಿವೆ.

Mr. SPEAKER.—He is attributing motives as though in Arsikere murders were committed by the Hon'ble Minister! It is simply wrong!

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರು ಮಾಡಿಲ್ಲ, ಆಡಳಿತದಲ್ಲಿ ಬಿಗಿ ಸಾಲದು ಅಂತ ಅಷ್ಟೆ. ಅವರಲ್ಲಿ ನನಗೆ ಬಹಳ ವಿಶ್ವಾಸ ಇದೆ. ಈ ರೀತಿಯಾಗಿ ಅವರ ಖಾತೆಯಲ್ಲಿ ಬಹಳ ಅನ್ಯಾಯ ನಡೆಯುತ್ತಾ ಇದೆ. ಮೊನ್ನೆ ಹತ್ತಿಯವರು ಮದರಾಸ್ ಸ್ಕೇಲ್ ಕೊಡುತ್ತೇವೆ ಎಂದು ಹೇಳಿದರು.

ಅಧ್ಯಕ್ಷರು.—ಶ್ರೀಮಾನ್ ಬಿ. ಡಿ. ಜತ್ತಿಯವರು ಅಂತ ಆದರೂ ಹೇಳಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಣಕಾಸಿನ ಸಚಿವರು ಮದರಾಸ್ ಸ್ಕೇಲ್ ಕೊಡುತ್ತೇವೆ ಎಂದು ಹೇಳಿದರು. 1,000 ರೂಪಾಯಿ ಇರುವವನಿಗೆ 1,200 ರೂಪಾಯಿ, 900 ರೂಪಾಯಿ ಇರುವವನಿಗೆ 1,000 ರೂಪಾಯಿ ಈ ರೀತಿ ಹೆಚ್ಚು ಮಾಡುತ್ತೇವೆ ಎಂದರೆ ಇದು ಯಾವ ನ್ಯಾಯ ? 4ನೇ ದರ್ಜೆಯ ನೌಕರನಿಗೆ 3 ಅಥವಾ 4 ರೂಪಾಯಿ ಹೆಚ್ಚಿಗೆ ಸಿಕ್ಕುತ್ತದೆ. ಶಾಸನಸಭಾ ಸದಸ್ಯರು ಮತ್ತು ಇತರರೆಲ್ಲರೂ ಕೂಡ ನಾನ್-ಗೆಜೆಟೆಡ್ ಆಫೀಸರಿಗೆ ಏನಾದರೂ ಸ್ವಲ್ಪ ಸಂಬಳ ಜಾಸ್ತಿ ಮಾಡಿ ಎಂದು ಹೇಳಿದ್ದು ಅವರಿಗೆ ಏನಾದರೂ ಪ್ರಯೋಜನವಾಗಲಿ, ಅವರ ಸ್ಥಿತಿ ಉತ್ತಮವಾಗಲಿ ಎಂಬ ದೃಷ್ಟಿಯಿಂದ ಹೇಳಿದರೇ ವಿನಾ ಮತ್ತೆ ಬೇರೆಯಲ್ಲ. ಈಗ ತಾವು ಮಾಡಿರುವುದು ಇದು ತಮ್ಮ ಸೋಷಿಯಲಿಸ್ಟ್ ಪ್ಯಾಟ್ರನ್ನೇ ಎಂದು ಕೇಳುತ್ತೇನೆ. ಇದಕ್ಕೆ ಈ ಶಾಸನ ಸಭೆಯ ಸದಸ್ಯರು ಯಾರೂ ಒಪ್ಪುವುದಿಲ್ಲ. ಬೇಕಾದರೆ ಕಡಿಮೆ ದರ್ಜೆ ಸಂಬಳ ಇರುವವರಿಗೆ ಜಾಸ್ತಿ ಕೊಡಿ ದೇಶದ ಜನ ಕೊಡತಕ್ಕ ಕಂದಾಯವನ್ನು ನ್ಯಾಯವಾದ ರೀತಿಯಲ್ಲಿ ಉಪಯೋಗ ಮಾಡಿ. ಇಲ್ಲಿಂದ ಆಂಧ್ರ, ಹೈದರಾಬಾದು ಪ್ರದೇಶಗಳಿಗೆ ಬಸ್ ಪರ್ಮಿಟ್ ಕೊಡುತ್ತೀರಿ. ಬಸ್ ರಾಷ್ಟ್ರೀಕರಣವಾಗಿರುವಾಗ ಈ ರೀತಿ ಬಸ್ ಪರ್ಮಿಟ್‌ಗಳನ್ನು ಕೊಡುವುದಕ್ಕೆ ಕಾರಣವೇನು ? ಇದನ್ನು ನೀವು ಏಕೆ ನಿಲ್ಲಿಸಬಾರದು ? ಮೊನ್ನೆ ಮುಖ್ಯ ಮಂತ್ರಿಗಳು ಇಲಾಖೆಯವರು ಅದನ್ನು ಕೊಡುತ್ತಾರೆ ಎಂದು ಹೇಳಿದರು. ಅಂತಹ ಅಧಿಕಾರಿಗಳ ಕೈಕೆಳಗೆ ಸರ್ಕಾರ ಇದೆ ಎಂದರೆ ನಿಮಗೆ ಮಾತನಾಡುವುದಕ್ಕೆ ಅವಕಾಶ ಇಲ್ಲ ಎಂದು ಹೇಳಿದ ಹಾಗೆ ಆಯಿತು. ಅಂತಹ ಜನ ಹೋಗಬೇಕು. ಬ್ರೇಕ್ ಇನ್‌ಸ್ಪೆಕ್ಟರುಗಳು ಇಂಜನಿಯರುಗಳು ಇದ್ದ ಹಾಗೆ ಇದ್ದಾರೆ. ಅವರ ಡಿಮ್ಯಾಂಡ್ ಹೇಗೆ ಇದೆ ಎಂದರೆ, ಗಂಡುಗಳಿಗೆ ಡಿಮ್ಯಾಂಡ್ ಇದ್ದ ಹಾಗೆ ಇದೆ. ಇದಕ್ಕೆ ಕಾರಣವೇನು ? ಅವನು ಪಾಸ್ ಮಾಡಿರತಕ್ಕದ್ದು ಆದರೂ ಏನು ಎಂದರೆ ಎಸ್. ಎಸ್. ಎಲ್. ಸಿ, ಸ್ವಲ್ಪ ಟ್ರೈನಿಂಗ್ ಆಗಿರುತ್ತದೆ. ಅವನಿಗೆ 15 – 20 ಸಾವಿರ ರೂಪಾಯಿ ಆದರೂ ಕೊಡುವುದಕ್ಕೆ—ವರದಕ್ಷಿಣೆ—ಜನ ಸಿದ್ಧವಾಗಿದ್ದಾರೆ. ಇದನ್ನು ಇನ್ನು ಇಲ್ಲಿಗೇ ಬಿಡುತ್ತೇನೆ.

ತುಮಕೂರು, ಚಿತ್ರದುರ್ಗ ಮತ್ತು ಹಾಸನ–ಈ ಮೂರು ಕಡೆ ಈಚಲು ಮರಗಳನ್ನು ಕಟ್ಟುತ್ತಾರೆ. ಬೇಕಾದರೆ ತಾವು ಯಾರಾದರೂ ಬನ್ನಿ, ಸರ್ಕಾರಿ ಕಾರಿನಲ್ಲಿ ಕರೆದುಕೊಂಡು ಹೋಗುವುದಾದರೆ ಸರಿ, ಇಲ್ಲದೇ ಹೋದರೆ ನನ್ನ ಖರ್ಚಿನಲ್ಲೇ ಬಸ್ಸಿನಲ್ಲಿ ಕರೆದುಕೊಂಡು ಹೋಗುತ್ತೇನೆ; ಮರಗಳಿಗೆ ಕಟ್ಟಿರತಕ್ಕ ಗಡಿಗೆಗಳನ್ನು ತೋರಿಸುತ್ತೇನೆ. ಒಂದು ವೇಳೆ ತೋರಿಸದೇ ಇದ್ದರೆ ನನ್ನ ರಾಜೀನಾಮೆ ತೆಗೆದುಕೊಳ್ಳಿ. ಇದನ್ನು ನೋಡಿದರೆ ಸರ್ಕಾರವೇ ಇಲ್ಲ ಎಂದು ಹೇಳಿದರೂ ಕೂಡ ಅತಿಶಯೋಕ್ತಿ ಆಗುವುದಿಲ್ಲ. ಆ ಮರಗಳನ್ನು ತಂದು ತೋರಿಸುವುದಕ್ಕೆ ಆಗುವುದಿಲ್ಲ. ಸಾಧ್ಯವಿದ್ದಿದ್ದರೆ ತೋರಿಸುತ್ತಾ ಇದ್ದೆ. ಹೋದ ಸಾರಿ 3 ಕೇಸುಗಳನ್ನು ಹಿಡಿದು ಅದಕ್ಕೆ ರುಜುವಾತು ಕೊಟ್ಟೆ, ಆದರೆ ಮೇಲೆ ಏನೂ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಲ್ಲ. ತಿಪಟೂರು ತಾಲ್ಲೂಕಿನಲ್ಲಿ ನೊಣವಿನ ಕೆರೆ ಅಂತ ಇದೆ, ಅಲ್ಲಿ ಸಬ್ ಇನ್‌ಸ್ಪೆಕ್ಟರ ಒಬ್ಬರು ಇದ್ದಾರೆ, ಅವರು ಮಾಡಿದ ಅತ್ಯಾಚಾರವನ್ನು ಹೇಳಬೇಕಾದರೆ ಈ ಸಭೆಯಲ್ಲಿ ಬಹಳ ಕೆಳಮಟ್ಟದ ಭಾಷೆಯನ್ನು ಉಪಯೋಗಿಸಬೇಕಾಗುತ್ತದೆ. ಅದಕ್ಕೆ ಅಧ್ಯಕ್ಷರು ಅವಕಾಶ ಕೊಡುವುದಿಲ್ಲ, ಆದ್ದರಿಂದ ಅಷ್ಟಕ್ಕೆ ನಾನು ಹೋಗುವುದಿಲ್ಲ. ಒಂದು ಕಡೆ ಹೊಡೆದಾಟ ಆಗುವ ಸಂಭವ ಇತ್ತು, ಅದನ್ನು ಎಲ್ಲಾ ಮಂತ್ರಿಗಳ ಗಮನಕ್ಕೂ ತಂದೆವು. ಅದಕ್ಕೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಸರ್ಕಾರಿ ಜಮೀನಿನಲ್ಲಿರತಕ್ಕ ಮರ ಕಡಿದು ಸಾಗಿಸುತ್ತಾ ಇದ್ದರು, 8-10 ಟೆಲಿಗ್ರಾಂಗಳನ್ನು ಕೊಟ್ಟೆವು ಮತ್ತು ಫೋನ್ ಮೂಲಕ ಕೂಡ ಹೇಳಿದೆವು. ಆದರೂ ಕೂಡ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಅದಾದಮೇಲೆ 3-4 ಜನ ಹೆಣ್ಣು ಮಕ್ಕಳನ್ನು ಕೆಡಿಸಿರುವ ಸಂದರ್ಭಗಳನ್ನೂ ಕೂಡ ಮಂತ್ರಿಗಳ ಗಮನಕ್ಕೆ ತಂದೆವು, ಅಷ್ಟೇ ಅಲ್ಲದೆ ಆ ಊರಿನಲ್ಲಿ ಇರುವ ದೇವಸ್ಥಾನ, ಅರಳೀ ಕಟ್ಟೆ ಅಲ್ಲೆಲ್ಲಾ ಜೂಜು, ಕುಡಿತ ಇವುಗಳೆಲ್ಲಾ ಬೇಕಾದಷ್ಟು ನಡೆಯುತ್ತಾ ಇದ್ದವು ಅವನ್ನೂ ಕೂಡ ತಮ್ಮ ಗಮನಕ್ಕೆ ತಂದಿದ್ದೇವೆ. ಇದನ್ನು ಸರಿಯಾಗಿ ನೋಡಿ ತಡೆಗಟ್ಟಲು ಸಾಧ್ಯವಾಗದಿದ್ದರೆ ಇಲಾಖೆ ಏಕಿರಬೇಕು ? ಬಸ್ಸುಗಳನ್ನು ಲಾರಿಗಳನ್ನು ನಿಲ್ಲಿಸಿ ಜನರಿಗೆ ಹಿಂಸೆ ಮಾಡುವುದೂ ಜಾಸ್ತಿಯಾಗುತ್ತಿದೆ. ತಿಪಟೂರಿನಲ್ಲಿ ಎಷ್ಟು ಕೇಸಾಗಿವೆ ಏನು ಎಂದು ನೋಡಿದರೆ ವಿಚಾರ ಚೆನ್ನಾಗಿ ಗೊತ್ತಾಗುತ್ತದೆ. ನುಗ್ಗೇಹಳ್ಳಿಯಲ್ಲಿ 14 ಕೇಸುಗಳು ವಜಾ ಆಗಿರುವುದಾಗಿ ಹಿಂದೆ ಈ ಸಭೆಯ ಸದಸ್ಯರಾಗಿದ್ದವರು ಹೇಳುತ್ತಿದ್ದರು. ಇದನ್ನು ನೋಡಿದರೆ ಇಲಾಖೆ ಎಷ್ಟುಮಟ್ಟಿಗೆ ದಕ್ಷತೆಯಿಂದ ಕೆಲಸ ಮಾಡುತ್ತಿದೆಯೆಂಬುದನ್ನು ಸ್ಪಷ್ಟವಾಗುತ್ತದೆ. ಜನರಿಗೆ ಸೌಲಭ್ಯವಾಗದಿರುವ ಇಂಥ ಒಂದು ಇಲಾಖೆಗೆ ಹಣ ಕೊಡುವುದಕ್ಕಿಂತ ಅದಕ್ಕೆ ಒದಗಿಸುವ ಹಣವನ್ನು ಯಾವುದಾದರೂ ಅಭಿವೃದ್ಧಿ ಕಾರ್ಯಗಳಿಗೆ, ನೀರಾವರಿ ಮುಂತಾದ ಕೆಲಸಗಳಿಗೆ ಉಪಯೋಗಿಸಿದರೆ ಅನುಕೂಲವಾಗುತ್ತದೆ.

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ದಯೆಯಿಟ್ಟು ಈಗಿರುವ ಸಚಿವರ ಕಾಲದಲ್ಲಾದರೂ ಇಲಾಖೆಯನ್ನು ಅಭಿವೃದ್ಧಿಪಡಿಸಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಲಿ, ದೇಶಕ್ಕೆ ಒಳ್ಳೆಯ ಹೆಸರು ಬರುವಂತೆ ಮಾಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಆರ್. ಕೇಶವ ಮೂರ್ತಿ.— ಅಧ್ಯಕ್ಷರೆ, ನನಗೆ ಹೆಚ್ಚು ಕಾಲಾವಕಾಶವಿಲ್ಲದ್ದರಿಂದ ಎರಡು ಮೂರು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಸರಕಾರ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆ ವಹಿಸಿಕೊಂಡು ಬಸ್ಸುಗಳ ರೂಟ್ಸ್ ರಾಷ್ಟ್ರೀಕರಣ ಮಾಡಿದ ಮೇಲೆ ಹಿಂದೆ ಬರುತ್ತಿದ್ದ ಆದಾಯ 6-7 ಕೋಟಿ ರೂಪಾಯಿ ಏನಿತ್ತು ಅದು ಕಡಮೆಯಾಗಿ ಬೆಂಗಳೂರು ಡಿವಿಜನ್ನಿನಲ್ಲಿ ಸುಮಾರು 80 ಲಕ್ಷ ರೂಪಾಯಿಗಳು 3 ವರ್ಷದಿಂದ ನಷ್ಟವಾಗಿದೆ, ಹೀಗೆ ಕೋಟಿಗಟ್ಟಲೆ ಹಣ ಹಾಳಾಗಿದೆ. ರಾಷ್ಟ್ರೀಕರಣ ಮಾಡದಿದ್ದರೆ ಎಷ್ಟೋ ಚೆನ್ನಾಗಿತ್ತು, ಅದಕ್ಕೆ ಹಾಕುವ ಬಂಡವಾಳವನ್ನು ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಬಹುದಾಗಿತ್ತು. ದಕ್ಷತೆಯಿಂದ ಮ್ಯಾನೇಜ್ ಮಾಡುವ ಶಕ್ತಿಯಿಲ್ಲದಿದ್ದರೆ ಖಾಸಗಿಯವರಿಗೆ ಬಿಡಬೇಕಾಗಿತ್ತು.

ಜೈಲು ಖಾತೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಅಲ್ಲಾಗುವ ಖರ್ಚನ್ನು ಜೈಲಿನಲ್ಲೇ ಉತ್ಪತ್ತಿ ಮಾಡಿಕೊಳ್ಳಬೇಕು, ಆ ನೀತಿಯನ್ನನುಸರಿಸಬೇಕು. ಜೈಲು ಸುಧಾರಣೆಯಾಗಬೇಕಾದ್ದು ಅತ್ಯಾವಶ್ಯಕ. ಇಗ್ಲೆಂಡು ಅಥವ ಅಮೇರಿಕಾ ದೇಶಗಳನ್ನು ನೋಡಿ ತಕ್ಕ ಸುಧಾರಣೆ ಮಾಡಬೇಕು.

"Most modern prison systems provide facilities for visits by wives, husbands, financees or friends, usually one, and more rarely two vists, per month." (Anatomy of Prisons—Published in London).

"In some South American countries, wives or permanent mistresses are allowed to visit their husbands in prison specifically for the purpose of sexual intercourse." (Anatomy of Prisons).

"Just as the character and quality of a country's police forces provide a touchstone of the spirit and quality of its Government and civil administration, the attitude of the general body of citizens towards the police provides a touchstone of the quality and conduct of the police themselves."

("Police"—John Coatman).

ಈ ರೀತಿ ಬೇಕಾದಷ್ಟು ಸುಧಾರಣೆ ಮಾಡಬೇಕಾಗಿದೆ.

ಪೋಲೀಸು ಇಲಾಖೆಯಲ್ಲಿ ಆದಾಯ ಹೆಚ್ಚಿಸುವ ಮಾರ್ಗಗಳು ಬೇಕಾದಷ್ಟಿವೆ. ಈಗ ಬಂದೂಕಗಳಿಗೆ ಲೈಸೆನ್ಸ್ ಕೊಡುವುದಕ್ಕೆ ಕೇವಲ ಎಂಟಾಣೆ, ಒಂದು ರೂಪಾಯಿ ಮಾತ್ರ ತೆಗೆದುಕೊಳ್ಳುತ್ತಿದ್ದಾರೆ. ಆಸ್ತಿಪಾಸ್ತಿ ಇರುವವರು ಅದನ್ನು ಕಾಪಾಡಿಕೊಳ್ಳುವುದಕ್ಕಾಗಿ ಲೈಸೆನ್ಸ್ ಪಡೆದು ಬಂದೂಕವನ್ನಿಟ್ಟುಕೊಳ್ಳುತ್ತಿದ್ದಾರೆ. ಅವರು ಲೈಸೆನ್ಸಿಗಾಗಿ 50 ರಿಂದ 100 ರೂಪಾಯಿಗಳವರೆಗೂ ಖರ್ಚುಮಾಡುತ್ತಾರೆ. ಹೀಗಿರುವಾಗ ಲೈಸೆನ್ಸ್ ಫೀಜನ್ನು ಕನಿಷ್ಟಪಕ್ಷ 5 ರೂಪಾಯಿಯಾದರೂ ಮಾಡಿದರೆ ಲಕ್ಷಾಂತರ ರೂಪಾಯಿಗಳ ಆದಾಯ ಬರುತ್ತದೆ, ಹಾಗೆ ಮಾಡಬಹುದು.

"Police supplied to Public Departments, Private Companies and persons."

ಪೋಲೀಸರನ್ನು ಕೆಲವು ವೇಳೆ ಸಹಾಯಕ್ಕಾಗಿ ಕಂಪೆನಿಯವರು ಮುಂತಾದವರಿಗೆ ಒದಗಿಸುತ್ತಾರೆ. ಅವರಿಗೆ ಈಗ ಹೆಚ್ಚು ಸಂಬಳ, ತುಟ್ಟಿಭತ್ಯ ಮುಂತಾದ್ದನ್ನು ಕೊಡುತ್ತಿರುವುದರಿಂದ ಹಿಂದಿದ್ದ ದರ ಕಡಮೆ ಇರುವುದರಿಂದ ಅದನ್ನು ಹೆಚ್ಚಿಸಿ ಹೆಚ್ಚು ಛಾರ್ಜ್ ಮಾಡಿ ಸರಕಾರಕ್ಕಾಗುವ ಖರ್ಚಿಗಿಂತ ಹೆಚ್ಚು ತೆಗೆದುಕೊಂಡರೆ ಆದಾಯ ಹೆಚ್ಚಾಗಿ ಬರುತ್ತದೆ. ಹಾಗೆ ಮಾಡಬಹುದು.

ಇನ್ನೊಂದು ವಿಚಾರವನ್ನು ಬಹಳ ದಿನಗಳಿಂದ ಹೇಳುತ್ತಿದ್ದೇನೆ. ಪೋಲೀಸಿನವರನ್ನು ಸೆಲೆಕ್ಟ್ ಮಾಡುವಾಗ ವಿದ್ಯೆ ಇಲ್ಲದವರನ್ನು ಸೆಲೆಕ್ಟ್ ಮಾಡುವುದುಂಟು. ಅದರಿಂದ ದೇಶಕ್ಕೆ ಹಾನಿ. ಆದುದರಿಂದ ಇಲಾಖೆಗೆ ಕೆಟ್ಟ ಹೆಸರು ಬರುವುದನ್ನು ತಪ್ಪಿಸಲು ವಿದ್ಯಾವಂತರನ್ನೇ ಯಾವಾಗಲೂ ನೇಮಕಮಾಡಿಕೊಳ್ಳುವುದು ಸೂಕ್ತ. ಈ ದಿವಸ ಲಾ ಅಂಡ್ ಅರ್ಡರ್ ದೇಶದಲ್ಲಿದೆ. ಪೋಲೀಸ್ ಫೋರ್ಸ್ ನೇಮಕ ಮಾಡುವುದು ಲಾ ಅಂಡ್ ಆರ್ಡರ್ ಮೈಂಟೈನ್‌ಮಾಡುವುದಕ್ಕೆ ಮತ್ತು ರಕ್ಷಣೆಗೆ. ಈಗ ದೇಶಾದ್ಯಂತ ಖೋಟಾ ನೋಟುಗಳ ಚಲಾವಣೆ ಜಾಸ್ತಿಯಾಗುತ್ತಿದೆ, ಕೊಯಮತ್ತೂರಿನಲ್ಲಿ ಇದು ಜಾಸ್ತಿಯಾಗಿದೆ. ಬಡವರು ಒಂದು ಹೊತ್ತು ಊಟಮಾಡಿ ಇನ್ನೊಂದು ಹೊತ್ತು ಉಪವಾಸ ವಿದ್ದು ಕಾನೂನು ರಕ್ಷಣೆಮಾಡುತ್ತಾರೆ. ಆದರೆ ದೊಡ್ಡವರು ಒಂದು ಸೋಗಿನಿಂದ ಖೋಟಾ ನೋಟುಗಳಿಂದ ಲಕ್ಷಗಟ್ಟಲೆ ಸಂಪಾದನೆ ಮಾಡುತ್ತಿದ್ದಾರೆ. ಅಂಥವರನ್ನು ಹಿಡಿದು ಶಿಕ್ಷೆ ಮಾಡದಿದ್ದರೆ ಪೋಲೀಸುಖಾತೆ ಏಕಿರಬೇಕು ?

ಪಾನನಿರೋಧ ತೆಗೆದುಕೊಂಡರೆ ಅದರ ಬಗ್ಗೆ ಪೋಲೀಸಿನವರು ಮಾಡಿರುವುದೇನು ? ಗ್ರಾಮಾಂತರಗಳಲ್ಲಿ ಬೇಕಾದಷ್ಟು ಜನ ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿದ್ದಾರೆ. ಪೋಲೀಸಿನ ವರು ಅವರೊಂದಿಗೆ ಪಾರ್ಟ್‌ನರ್ಸ್ ಆಗಿ ಆದಾಯ ಸಂಪಾದನೆ ಮಾಡಿಕೊಂಡು ಕಳ್ಳಬಟ್ಟಿ ಇಳಿಸು ವವರಿಗೆ ಅವಕಾಶ ಮಾಡಿಕೊಡುತ್ತಿದ್ದಾರೆ. ಇದೇ ರೀತಿ ಬಸ್ಸುಗಳಲ್ಲಿ ಓವರ್‌ಲೋಡ್ ಮಾಡುವ ವಿಚಾರದಲ್ಲೂ ನಡೆಯುತ್ತಿವೆ. ಲಾರಿಗಳಲ್ಲಿ ಕೆಲವು ಪದಾರ್ಥಗಳು ಸ್ಮಗಲ್ ಆಗುವುದಕ್ಕೂ ಪೋಲೀಸಿ ನವರೇ ಕಾರಣರಾಗಿದ್ದಾರೆ. ಸರಕಾರದ ಬಸ್ಸುಗಳು ಹಾಳಾಗುವುದಕ್ಕೆ ಪೋಲೀಸಿನವರೇ ಕಾರಣ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಹೀಗೆಲ್ಲಾ ಮಾಡಿ ನೌಕರರು ಸಾಹುಕಾರರಾಗುತ್ತಿ ದ್ದಾರೆ. ಇದಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳಬೇಕು. ಅಲ್ಲದೆ ಹಳ್ಳಿಗಳ ಕಡೆ ಕಳ್ಳತನ ಜಾಸ್ತಿ ಯಾಗಿದೆ. ಪೋಲೀಸಿನವರೇ ತೆಂಗಿನತೋಟಗಳಿಗೆ ಕಳ್ಳರನ್ನು ಕಳಿಸಿ ಕಾಯಿಗಳನ್ನು ಕೀಳಿಸಿ ಅದ ರಿಂದ ಬರುವ ಲಾಭದಲ್ಲಿ ಭಾಗ ಪಡೆಯುತ್ತಿದ್ದಾರೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ದಿವಸ ನಮ್ಮ ಮುಂದೆ ಇರುವ ವಾಹನ ಗಳ ಮೇಲಿನ ತೆರಿಗೆಗಳು, ಬಂದೀಖಾನೆಗಳು, ಪೋಲೀಸ್ ರಾಷ್ಟ್ರೀಯ ತುರ್ತು ಪರಿಸ್ಥಿತಿ ಮತ್ತು ಪ್ರಚಾರ ಶಾಖೆಗೆ ಬೇಕಾದ ಹಣಕ್ಕಾಗಿ ನಮ್ಮ ಮುಂದೆ ಬೇಡಿಕೆಗಳಿವೆ. ಕಳೆದ ಎಂಟು ವರ್ಷಗಳಲ್ಲಿ ಪೋಲಿಸ್ ಖಾತೆಯ ಬಗ್ಗೆ ಮೂರು ನಾಲ್ಕು ಗಂಟೆಗಳೊಳಗೇ ಈ ಸಭೆಯ ಅನುಮತಿಯನ್ನು ಪಡೆ ದದ್ದು ಇದೇ ಮೊದಲನೆಯ ಸಾರಿ. ಇದನ್ನು ಎರಡು ದಿನವಾದರೂ ಚರ್ಚೆ ಮಾಡುವುದಕ್ಕೆ ಅವಕಾಶ ಬೇಕು. ಇದರಲ್ಲಿ ಎಷ್ಟು ವಿಷಯ ಅಡಕವಾಗಿದೆ ಅದನ್ನೆಲ್ಲ ಹೇಳುವುದಕ್ಕೆ ಸಾಧ್ಯವಿಲ್ಲ.

ವಾಹನಗಳ ಮೇಲಿನ ತೆರಿಗೆಗಳ ಸಂಬಂಧದಲ್ಲಿ ಅನೇಕ ಜನ ಸ್ನೇಹಿತರು ಹೇಳಿದ್ದಾರೆ. ಸ್ಟೇಟ್ಸ್ ಟ್ರಾನ್ಸ್‌ಪೋರ್ಟ್ ಅಥಾರಿಟಿ, ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ, ಬ್ರೇಕ್ ಇನ್‌ಸ್ಪೆಕ್ಟರುಗಳು ರೀಜಿನಲ್ ಟ್ರಾನ್ಸ್‌ಪೋರ್ಟ್ ಆಫೀಸರುಗಳು ಎಷ್ಟರಮಟ್ಟಿಗೆ ನಡೆದುಕೊಳ್ಳುತ್ತಾರೆ, ಅವರಿಂದ ಎಷ್ಟರಮಟ್ಟಿಗೆ ಕೆಲಸಗಳಾಗುತ್ತವೆ ಎನ್ನುವುದಕ್ಕೆ ಒಂದೇಒಂದು ಉದಾಹರಣೆಯನ್ನು ಕೊಡುತ್ತೇನೆ. ತುಮಕೂರು ಜಿಲ್ಲೆ ಒಂದರಲ್ಲೇ 1944-45 ರಿಂದ ಇದ್ದ ವಾಹನಗಳೇ ಈಗಲೂ ರಸ್ತೆಗಳ ಮೇಲೆ ಓಡಾಡುತ್ತಿವೆ. ಅವುಗಳಿಗೆ ಎಷ್ಟರಮಟ್ಟಿಗೆ ಅರ್ಹತೆ ಇದೆ, ಎಷ್ಟರಮಟ್ಟಿಗೆ ಅದಕ್ಕೆ ಬ್ರೇಕ್ ಇನ್‌ಸ್ಪೆಕ್ಟರ್ ಆರ್.ಟಿ.ಎ. ಮತ್ತು ಅದಕ್ಕೆ ಅಧ್ಯಕ್ಷರಾಗಿರುವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅದಕ್ಕೆ ಪರ್ಮಿಷನ್ ಕೊಟ್ಟಿ ದ್ದಾರೆ, ಸರ್ಟಿಫಿಕೇಟ್ ಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಜಿಲ್ಲೆಯಲ್ಲಿ ನೂರಾರು ವಾಹನಗಳು ರಸ್ತೆಯ ಮೇಲೆ ಓಡಾಡುತ್ತಿವೆ. ಜನ ಎಡಗೈಯಲ್ಲಿ ಜೀವ ಹಿಡಿದುಕೊಂಡು ತಿರುಗಾಡ ಬೇಕಾಗಿದೆ. ಅವು ಸ್ಕ್ರ್ಯಾಪ್‌ಮಾಡುವ ಸ್ಥಿತಿಯಲ್ಲಿವೆ. ಪ್ರಯಾಣಿಕರ ಸೌಕರ್ಯಕ್ಕಾಗಿ ಹೊಸ ಬಸ್ಸುಗಳನ್ನು ಯಾರು ತರುತ್ತಾರೆಯೋ ಅಂಥವರಿಗೆ ಮಾತ್ರ ಪರ್ಮಿಷನ್ ಕೊಡಬೇಕೆಂದು ಹೇಳುತ್ತೇನೆ. ಮೋಟಾರು ವಾಹನಗಳ ಇಲಾಖೆಯಲ್ಲಿ ನಡೆದಿರತಕ್ಕ ಗಜಿಬಿಜಿಯನ್ನು ಸರ್ಕಾರ ವಿಚಾರಿಸಬೇಕೆಂದು ಹೇಳುತ್ತೇನೆ.

ರೋಡ್ ಟ್ರಾನ್ಸ್‌ಪೋರ್ಟ್ ಅಥಾರಿಟಿ, ಇಂಜಿನಿಯರಿಂಗ್ ಇಲಾಖೆ, ಡಾಕ್ಟರುಗಳು, ಬ್ರೇಕ್ ಇನ್‌ಸ್ಪೆಕ್ಟರುಗಳು, ಇವೆಲ್ಲ ಒಂದೇ ಮಟ್ಟದಲ್ಲಿ ಬರುತ್ತವೆ. ಇವುಗಳಲ್ಲಿ ಮಾತ್ರ ಹಣದ ಆಸೆ ಕಾಣು ತ್ತಿರುತ್ತದೆ. ಸರ್ಕಾರ ಎಲ್ಲೆಲ್ಲಿ ಅನ್ಯಾಯ ನಡೆಯುತ್ತಿದೆಯೋ ಅದನ್ನು ಸರಿಪಡಿಸಬೇಕು. ಮೂರು ವರ್ಷಗಳಿಂದ ಮಾಡಿರುವ ಸಾಧನೆ ಸಾಲದು. ಐದು ವರ್ಷಗಳ ಪರಿಮಿತಿಯೊಳಗೆ ಈ ಇಲಾಖೆ ಯನ್ನು ಸ್ವಚ್ಛಂದವಾಗಿ ಮಾಡುತ್ತಾರೆಂದು ನಿರೀಕ್ಷಿಸಬಹುದು ಎಂದು ಕಾಣುತ್ತದೆ.

ಜೈಲುಗಳ ವಿಷಯದಲ್ಲಿ ಹೆಚ್ಚು ಹೇಳಬೇಕಾಗಿಲ್ಲ. ನನ್ನ ಸ್ನೇಹಿತರಾದ ಶ್ರೀಮಾನ್ ಅಗ್ನಿಹೋತ್ರಿ ಅವರು ಅದರ ಬಗ್ಗೆ ಚೆನ್ನಾಗಿ ಹೇಳಿದ್ದಾರೆ. ಜೈಲುಗಳನ್ನು ಸುಧಾರಣೆ ಮಾಡು ತ್ತೇವೆನ್ನುವುದಾದರೆ, ಜೈಲುಗಳನ್ನು ಅರಮನೆ ಮಾಡುವುದಾದರೆ ನನ್ನ ಸ್ನೇಹಿತರು ಹೇಳಿದ ಹಾಗೆ ಅಲ್ಲಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ರುವ ಜನ ಯಾರೂ ಹೊರಗೆ ಬರುವುದಿಲ್ಲ. ಇದರಿಂದ ದೇಶಕ್ಕೆ ತಲೆ ಭಾರವಾಗುತ್ತದೆ. ಖೂನಿ ಮಾಡಿದವನು, ದರೋಡೆ ಮಾಡಿದವನು ಜೈಲಿಗೆ ಹೋಗಿ ಅಲ್ಲಿ ಸವಲತ್ತು ಇದೆ ಎಂದು ಅಲ್ಲಿಂದ ಹೊರಗೆ ಬಂದ ಕೂಡಲೇ ಪುನಃ ಜೈಲಿಗೆ ಹೋಗಲು ಪ್ರಯತ್ನ ಮಾಡುತ್ತಾನೆ. ಜೈಲು ಶಿಕ್ಷೆ ಆದವನಿಗೆ ಸರಿಯಾದ ನಡತೆಗೆ ರಿಮಿಷನ್, ಹಬ್ಬಕ್ಕೆ ರಿಮಿಷನ್, ಒಬ್ಬರ ಹುಟ್ಟಿದ ಹಬ್ಬಕ್ಕೆ ರಿಮಿಷನ್ ಕೊಡುತ್ತ ಹೋದರೆ ಖೂನಿ ಮಾಡುವ ಮನುಷ್ಯ, ಸಿಕ್ಕಿದ ಹಾಗೆ ಕೊಲೆ ಮಾಡುವ ಮನುಷ್ಯ, ದರೋಡೆ ಕಳ್ಳತನ ಮಾಡುವ ಮನುಷ್ಯ, ಜೂಜಾಡುವ ಮನುಷ್ಯ, ಇವರೆಲ್ಲ ಒಳಗೇ ಇರುತ್ತಾರೆ. ಸೆರೆಮನೆಗಳೆಲ್ಲ ಅರಮನೆಗಳಾದರೆ, ಸ್ವತಂತ್ರ ಪಕ್ಷ, ಪಿ. ಎಸ್. ಪಿ., ಎಸ್.ಎಸ್.ಪಿ., ಇವರೆಲ್ಲ ಒಂದು ಚಳುವಳಿಯನ್ನು ಮಾಡಿ ಜೈಲಿಗೆ ಹೋಗುವ ಪ್ರಸಂಗ ಬಂದಾಗ ಲಕ್ಷಾಂತರ ಜನ ಹೋಗುತ್ತಾರೆ. ಆಗ ನಿಮ್ಮ ಕೈಯಲ್ಲಿ ಅಧಿಕಾರ ಮಾಡುವುದಕ್ಕೆ ಸಾಧ್ಯವೇ ? ಸರ್ಕಾರ ಬಂದಿಗಳ ವಿಷಯದಲ್ಲಿ ಸ್ವಲ್ಪ ಬಿಗಿಯಾಗಿರಬೇಕು. ಜೈಲಿನಿಂದ ಈಚೆಗೆ ಬಂದವನು ಇನ್ನೊಂದು ಸಲ ಹೋದರೆ ಒಳ್ಳೆಯದಾಗುತ್ತದೆ, ಅಲ್ಲಿ ತೂಕದ ಅನ್ನವಿಲ್ಲ, ನೀರು ಹೊರಬೇಕಾಗಿಲ್ಲ, ಮೂಟೆ ಹೊರಬೇಕಾಗಿಲ್ಲ, ಎಂದು ಹೇಳುವುದಾದರೆ ಬಹಳ ಕಷ್ಟಕ್ಕೆ ಬರುತ್ತದೆ. ನಾನು ಇಂದಿನ ಸಮಾಜಕ್ಕೆ ಹೊಂದಿಕೊಂಡು ಹೋಗುವುದಕ್ಕೆ ವಿರೋಧವಾಗಿದ್ದೇನೆ, ಸರ್ಕಾರದವರು ಮಾಡುವ ಸುಧಾರಣೆಗಳಿಗೆ ವಿರೋಧವಾಗಿದ್ದೇನೆ ಎಂದು ಯಾರಾದರೂ ತಿಳಿದುಕೊಳ್ಳಲಿ. ನಾನು ಅಂಥ ಒಂದು ಮಾತನ್ನು ಬೇಕಾದರೂ ಸಹಿಸುವುದಕ್ಕೆ ಸಿದ್ಧನಾಗಿದ್ದೇನೆ. ಆದರೆ ಮಾತ್ರ ಜೈಲಿನಲ್ಲಿ ಬಿಗಿ ಇಲ್ಲದೆ ಇದ್ದರೆ ಕಷ್ಟ ಬರುತ್ತದೆ. ಅದರಿಂದ ನ್ಯಾಯಾಲಯಗಳಲ್ಲಿ ತಪ್ಪಿತಸ್ಥರಿಗೆ ವಿಧಿಸುವ ಶಿಕ್ಷೆ ಕೂಡ ಅದೇ ಮಟ್ಟಕ್ಕೆ ಕಡಿಮೆಯಾಗುತ್ತದೆ. ಈ ಗೃಹ ಸಚಿವರು ಸ್ವಲ್ಪ ಮನಸ್ಸು ಮಾಡಬೇಕೆಂದು ಹೇಳುತ್ತೇನೆ. ಯಾರಾದರೂ ಒಳ್ಳೆಯವರು ಒಂದು ಸಮಯದಲ್ಲಿ at the spur of the momenent, heat of the moment ಖೂನಿ ಮಾಡಿರುತ್ತಾರೆ. ಅಂಥವರ ವಿಚಾರದಲ್ಲಿ ಮಾತ್ರ ಸುಧಾರಣೆಗಳು ಚೆನ್ನಾಗಿ ಕೆಲಸ ಮಾಡಬಹುದು. ಕೆಲವರು ಮರಣ ದಂಡನೆ ಕೂಡ ಹೋಗಬೇಕೆಂದು ಹೇಳುತ್ತಿದ್ದಾರೆ. ಎಲ್ಲ ರಾಜ್ಯಗಳಲ್ಲಿಯೂ ನೂರಕ್ಕೆ ಐವತ್ತು ಭಾಗ ವಿದ್ಯಾವಂತರಾದ ನಂತರ, ತಮ್ಮ ಜವಾಬ್ದಾರಿಯನ್ನು ತಾವು ತಿಳಿದುಕೊಂಡು ಒಳ್ಳೆಯ ಸಮಾಜವನ್ನು ಒಳ್ಳೆಯ ಬುನಾದಿಯ ಮೇಲೆ ಕಟ್ಟತಕ್ಕ ಜನ ಸಿಕ್ಕುವವರೆಗೂ ಜೈಲು ಶಿಕ್ಷೆಗಳೆಲ್ಲ ಇರಬೇಕಾದ್ದು ನ್ಯಾಯವೆಂದು ಕಾಣಿಸುತ್ತದೆ. ಸರ್ಕಾರವೇ ಈ ಎಲ್ಲ ವಿಷಯಗಳಲ್ಲಿಯೂ ದೀರ್ಘವಾಗಿ ಆಲೋಚನೆ ಮಾಡತಕ್ಕದ್ದು ಸೂಕ್ತ ಎಂದು ನನಗನ್ನಿಸುತ್ತದೆ.

ಪೋಲೀಸ್ ಖಾತೆ ಮೈಸೂರು ರಾಜ್ಯದಲ್ಲಿ ತಲೆಶಿರೋಭಾರ ಎನ್ನುವಂತಾಗಿದೆ. ಒಂದು ಕೋಟಿ ರೂಪಾಯಿಯಿಂದ ಹಿಡಿದು ಆರು ಕೋಟಿ ರೂಪಾಯಿವರೆಗೂ ಇವತ್ತು ನಮ್ಮ ಪೋಲೀಸ್ ಇಲಾಖೆಯ ಮೇಲೆ ವೆಚ್ಚ ಮಾಡಬೇಕೆಂದು ಹೊರಟಿರುವುದು ಸರಿಯಾದುದಲ್ಲ ಎಂದು ನನಗನ್ನಿಸುತ್ತದೆ. ಪೋಲೀಸ್ ಇಲಾಖೆಯಿಂದ ಎಷ್ಟು ಪ್ರತಿಫಲವನ್ನು ನಿರೀಕ್ಷೆ ಮಾಡಿದ್ದೆವೋ ಅಷ್ಟು ಪ್ರತಿಫಲ ದೊರೆತಿಲ್ಲ, ಸಮಾಜಕ್ಕೆ ಅಷ್ಟು ರಕ್ಷಣೆ ದೊರೆತಿಲ್ಲ, ಇದು ರಕ್ಷಣಾ ಖಾತೆಯಾಗುವುದರ ಬದಲು ಭಕ್ಷಣೆ ಖಾತೆಯಾಗಿದೆ. ಸರ್ಕಾರ ಇದಕ್ಕೆ ಗಮನ ಕೊಡಬೇಕು.

ಪೋಲೀಸ್ ಇಲಾಖೆಯಲ್ಲಿ ಅಧಿಕಾರಿಗಳ ಸಂಖ್ಯೆ ಬೆಳೆಯುತ್ತಿದೆ. ಎರಡೂಕಾಲು ಕೋಟಿ ಜನಸಂಖ್ಯೆ ಇದ್ದು, 120 ಕೋಟಿ ರೂಪಾಯಿ ವರಮಾನ ಇರುವ ದೇಶದಲ್ಲಿ ಐ.ಜಿ., ಡಿ.ಐ.ಜಿ., ಎಸ್.ಪಿ., ಇವರು ಎಷ್ಟು ಜನ ಇರಬೇಕು, ಪೋಲೀಸ್ ಬಲ ಎಷ್ಟಿರಬೇಕು ? ಒಬೀರಾಯನ ಕಾಲದ ಅಂಕಿ ಅಂಶಗಳನ್ನು ತೆಗೆದುಕೊಂಡು 1940ರಲ್ಲಿ ಇದ್ದುದನ್ನು ತೆಗೆದುಕೊಂಡು ಆಗ 450 ಜನ ಇದ್ದರು, ಈಗ 900 ಮಾಡಬೇಕು ಎಂದು ಹೇಳುತ್ತಿದ್ದಾರೆ. ಯಾವ ರಾಜ್ಯದಲ್ಲಿ ಪೋಲೀಸ್ ದಳ ಕಡಿಮೆ ಇರುತ್ತದೆಯೋ ಆ ರಾಜ್ಯ ಸುಖೀ ರಾಜ್ಯವಾಗುತ್ತದೆ.

ಶ್ರೀ ಆರ್. ಎಂ. ಪಾಟೀಲ್.—ಉಳಿದ ರಾಜ್ಯಗಳಿಗಿಂತ ಮೈಸೂರು ರಾಜ್ಯದಲ್ಲಿ ಪೋಲೀಸ್ ದಳ ಕಡಿಮೆಯಾಗಿ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಂಧ್ರದಲ್ಲಿ ಜಾಸ್ತಿ ಮಾಡಿಕೊಂಡಿರಬಹುದು. ಮದ್ರಾಸಿನಲ್ಲಿ ಜಾಸ್ತಿ ಇರಬಹುದು, ಉತ್ತರ ಪ್ರದೇಶದಲ್ಲಿ ಜಾಸ್ತಿ ಇರಬಹುದು. ಮೈಸೂರು ರಾಜ್ಯದಲ್ಲಿ ಎರಡೂಕಾಲು ಕೋಟಿ ಜನ ಇದ್ದಾರೆ. ಅಲ್ಲಿ ಈಗ ಇರುವುದರಲ್ಲಿ ಸೇಕಡ 50 ಅಥವಾ 60 ಭಾಗ ಪೋಲೀಸ್ ಸಿಬ್ಬಂದಿಯನ್ನು ಇಟ್ಟುಕೊಂಡು ರಕ್ಷಣಾ ಕಾರ್ಯ ಮಾಡುತ್ತೇವೆಂದರೆ ಆಗ ಸುಖೀ ರಾಜ್ಯ ಸ್ಥಾಪನೆಯ ದಾರಿಯಲ್ಲಿದ್ದೇವೆಂದು ಹೇಳಬಹುದು. ಮಾನ್ಯ ಮಂತ್ರಿಗಳೂ ಪಬ್ಲಿಕ್ ಪ್ರಾಸಿಕ್ಯೂಟರಾಗಿ ಕೆಲಸ ಮಾಡಿದವರು. ಜನ ಜೈಲಿಗೆ ಏಕೆ ಹೋಗುತ್ತಾರೆ, ಪೋಲೀಸಿನವರು ಏನೇನು ಮಾಡುತ್ತಾರೆ ಎನ್ನುವುದನ್ನು ನಾನು ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಇಲಾಖೆಯಲ್ಲಿ ಡಿ.ಐ.ಜಿ., ಎಸ್.ಪಿ.,

ಮುಂತಾದವರ ಸಂಖ್ಯೆ ಕಡಿಮೆಯಾಗಬೇಕು. ಇಲ್ಲದೆ ಇದ್ದರೆ ಇದರಿಂದ ಮುಂದೆ ತಲೆ ನೋವಾಗುತ್ತದೆ, ಆಡಳಿತ ನಡೆಸತಕ್ಕ ಸರ್ಕಾರಕ್ಕೂ ತಲೆ ನೋವಾಗುತ್ತದೆಂದು ನನಗನ್ನಿಸುತ್ತದೆ. ಹಿಂದೆ ನಮ್ಮ ಸ್ನೇಹಿತರು ಒಂದು ರೆಫರೆನ್ಸ್ ಮಾಡಿದ್ದರು. ಮಾಜಿ ಗೃಹ ಸಚಿವರಾದ ಶ್ರೀ ಪೂಣಚ್ಚ ಅವರು ಸಚಿವರಾಗಿದ್ದಾಗ ಪೋಲೀಸ್ ಖಾತೆ, ಪೋಲೀಸ್ ದಳ ಬಿಗಿಯಾಗಿತ್ತು. ಅವರು ಮನೆ ಬಿಟ್ಟು ಈಚೆಗೆ ಬರಲಿಲ್ಲ, ಟೂರ್ ಮಾಡಲಿಲ್ಲ; ಕೆಲಸ ಮಾಡಲಿಲ್ಲ. ಆ ಬಗ್ಗೆ ಈ ಸಭೆಯಲ್ಲಿ ಮೂರು ದಿನ ಚರ್ಚೆ ಆಯಿತು. ನಾನು ಯಾರ ಬಗ್ಗೆಯೂ ವೈಯುಕ್ತಿಕವಾಗಿ ಟೀಕೆ ಮಾಡುತ್ತಿಲ್ಲ. ಇವತ್ತಿನ ದಿವಸ ಮಾನ್ಯ ಗೃಹ ಸಚಿವರಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ, ಪೋಲೀಸ್ ಖಾತೆಯಲ್ಲಿ ಅಂಗಾಂಗ ಸಡಿಲವಾಗಿದೆ, ಅದಕ್ಕೆ ಬೋಲ್ಟ್ ಇಲ್ಲ. ಅದನ್ನೆಲ್ಲ ಸರಿಪಡಿಸ ಬೇಕೆಂದು ಹೇಳುತ್ತೇನೆ.

6-00 P.M.

I am just questioning the efficiency; I am not making personal allegations.

Mr. SPEAKER.—If the member is referring to the efficiency of the department, I can allow; but if he is referring to individuals, I cannot allow it.

Sri C. J. MUCKANNAPPA.—I am not going to refer to individuals. Inefficiency has crept into the veins of every police officer.

ಇದನ್ನು ಯಾರು ಮಾಡಬೇಕು? Head of the department ಇದನ್ನು ಮಾಡದೆ ಹೋದರೆ ಇಷ್ಟು ದೊಡ್ಡ ರಾಜ್ಯವನ್ನು ಅವರ ಕೈಲಿ ಹಿಡಿದುಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಹೋದರೆ ಅವರನ್ನು ಕಳುಹಿಸಿ ಬೇರೆ ಪೋಲೀಸ್ ಅಧಿಕಾರಿಗಳನ್ನು ತಕ್ಷಣ ಕರೆಸುವುದು ಒಳ್ಳೆಯದು, ಚೀಫ್ ಸೆಕ್ರೆಟರಿ ಮತ್ತು ಐ. ಎ. ಎಸ್. ಅಧಿಕಾರಿಗಳನ್ನು ಅಲ್ಲಿಂದ ಕರೆಸಿರುವ ಹಾಗೆ ಈ ಇಲಾಖೆಗೆ ಕರೆಸಿಕೊಳ್ಳ ಬೇಕೆಂದು ನನ್ನ ವಿನಂತಿ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಪ್ರೊಹಿಬಿಷನ್ ವಿಚಾರದಲ್ಲಿ ನಾನು ಹೇಳಬೇಕಾದರೆ ನಮ್ಮ ಸಿರಾ ಟೌನಿನಲ್ಲಿ ಸಬ್‌ಇನ್‌ಸ್ಪೆಕ್ಟರ್ ಒಬ್ಬ ಒಂದು ಸಾರಿ ಕುಡಿದುಬಿಟ್ಟಿದ್ದಾನೆ. ಮೈಮೇಲೆ ಬಟ್ಟೆ ಇಲ್ಲ. ಪೋಲೀಸ್ ಅಧಿಕಾರಿಗಳಿಗೆ ಹೇಳಿಕಳುಹಿಸಿದರೆ ಯಾರೂ ಬರಲಿಕ್ಕೆ ಶಕ್ತಿ ಇಲ್ಲ. ಅನಂತರ ಆರಮ್ಡ್ ಪೋಲೀಸಿನವರು ಬಂದು ಅವನನ್ನು ವಾಪಸ್ಸು ಕಳುಹಿಸಬೇಕಾಯಿತು. ರಾತ್ರಿ 12½ ಘಂಟೆಯಲ್ಲಿ ಅವನ ಮೆರವಣಿಗೆಯಾಯಿತು, ದೇಶದಲ್ಲಿ ಒಬ್ಬ ಸಬ್-ಇನ್‌ಸ್ಪೆಕ್ಟರ್ ಇಷ್ಟು ಕುಡಿದು ಮೈಮರೆತು ಓಡಿದರೆ ಇನ್ನೆಷ್ಟರಮಟ್ಟಿಗೆ ಅತ ಪಾನನಿರೋಧ ಶಾಸನವನ್ನು ಜಾರಿಗೆ ತರುತ್ತಾನೆಂಬುದನ್ನು ನಾವು ಈಗ ಆಲೋಚಿಸಬೇಕಾಗಿದೆ. ಇನ್ಸ್‌ಪೆಕ್ಟರ್‌ಗೆ ಹೇಳಿಕಳುಹಿಸಿದಾಗ ಅತ ಬರಲಿಲ್ಲವೆಂದಮೇಲೆ ಇನ್ನೆಷ್ಟರಮಟ್ಟಿಗೆ ಪ್ರಾಣ ಆಸ್ತಿಪಾಸ್ತಿಗಳ ರಕ್ಷಣೆಯನ್ನು ನೋಡಿಕೊಳ್ಳುತ್ತಾನೆ, ರಕ್ಷಿಸುತ್ತಾನೆ? ಸುಮ್ಮನೆ ಎಲ್ಲರೂ ಬಂದೂಕಗಳನ್ನು ಕೈಯಲ್ಲಿ ಹಿಡಿದು ಊರಿನ ಸುತ್ತಾಲೂ ಗಸ್ತುತಿರುಗಿದರೆ ಸಾಕೇ! ಪೋಲೀಸಿನವರು ಯಾರೂ ಕುಡಿಯಬೇಡಿ ಎಂದು ಹೇಳುತ್ತಿದ್ದರೂ ಇತ್ತೀಚೆಗೆ ಅವರೇ ಹೆಚ್ಚಿಗೆ ಕುಡಿಯುತ್ತಿದ್ದಾರೆ. ಮೊದಲು ಯಾರು ಕುಡಿಯಬೇಡಿ ಎಂಬುದಾಗಿ ಪ್ರಚೋದನೆ ಮಾಡುತ್ತಿದ್ದರೋ ಈಗ ಅವರೇ ಕುಡಿಯಿರಿ ಎಂಬುದಾಗಿ ಪ್ರಚೋದನೆ ಮಾಡುತ್ತಾರೆ. ಅಂತಹವರೇ ಕುಡಿಯಿರಿ ಎಂಬುದಾಗಿ ಜನತೆಗೆ ಪ್ರಚೋದನೆ ಮಾಡಿದರೆ ಇನ್ನು ಪೋಲೀಸ್ ಖಾತೆಯಲ್ಲಿ ಎಷ್ಟರಮಟ್ಟಿಗೆ ಭದ್ರತೆಯಿದ್ದೀತು? ಈ ರೀತಿಯಾದರೆ ಸಮಾಜದಲ್ಲಿ ದುಷ್ಟರಿಗೆ ಶಿಕ್ಷೆ ಮಾಡುವವರು ಯಾರು! ಅದಕ್ಕೆ ಯಾರೂ ಸಿದ್ಧವಿಲ್ಲ. ಆದ್ದರಿಂದ ಈ ಕೆಲಸ ಪೋಲೀಸ್ ಖಾತೆಯಲ್ಲಿ ಆಗುವುದಿಲ್ಲ. ಖಂಡಿತವಾಗಿ ಇವರು ಪಾನನಿರೋಧ ಕಾನೂನನ್ನು ಯಶಸ್ವಿಯಾಗಿ ಮಾಡುವುದಕ್ಕಾಗುವುದಿಲ್ಲ. ಮುಂಬೈ ರಾಜ್ಯದಲ್ಲಿ ಬಹುಜನ ಮಾನ್ಯ ಮಂತ್ರಿಗಳು ಆದಿಯಾಗಿ ಜವಾಬ್ದಾರಿಯನ್ನು ವಹಿಸಿ ಅಲ್ಲಿ ಪ್ರೊಹಿಬಿಷನ್ನನ್ನು ಜಾರಿಗೆ ತಂದಿದ್ದಾರೆ. ಅಲ್ಲಿರ ತಕ್ಕ ಪದ್ಧತಿಯ ಹಾಗೆ ಹಾಗೂ ಪಕ್ಕದ ರಾಜ್ಯಗಳಲ್ಲಿ ಈ ವಿಚಾರದ ಬಗ್ಗೆ ಏನು ರೀತಿನೀತಿಗಳನ್ನು ಅನುಸರಿಸುತ್ತಿದ್ದಾರೋ ಆ ರೀತಿ ಯಾದರೂ ಮಾಡಿ, ಇಲ್ಲದೇ ಹೋದರೆ ಕಂಪಲ್ಸರಿಯಾಗಿ ಪಾನ ನಿರೋಧವನ್ನು ದೇಶಾದ್ಯಂತ ಜಾರಿಮಾಡಿ. ಏಕೆಂದರೆ, ಈ ಕಳ್ಳ ಭಟ್ಟಿಸಾರಾಯಿ ತಯಾರು ಮಾಡುವುದನ್ನು ಯಾರೂ ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ ವಿಷಯವಾಗಿ ಕೂಲಂಕಷವಾಗಿ ವಿಚಾರಮಾಡಬೇಕು...ಪೂರ್ತಿಯಾಗಿ ಇಡೀ ದೇಶದಲ್ಲೆಲ್ಲಾ ಈ ಪಾನನಿರೋಧವನ್ನು ಜಾರಿಗೆ ತರಬೇಕು. ಇಲ್ಲದಿದ್ದರೆ ಪೂರ್ತಿಯಾಗಿ ಈ ಪಾನನಿರೋಧ ಶಾಸನ ವನ್ನು ರದ್ದುಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಶ್ರೀ ಸಿ. ಜಿ. ಮುಕ್ಕಣ್ಣಪ್ಪ)

ಇನ್ನು ಟೂರಿಸ್ಟ್ ವಿಷಯ. ಶ್ರೀಮಾನ್ ವೆಂಕಟೇಗೌಡರು ಹೇಳಿದ್ದನ್ನು ನಾನು ಮತ್ತೆ ರೀಯಿಟರೇಟ್ ಮಾಡುತ್ತೇನೆ. ಕೇಂದ್ರ ಸರ್ಕಾರದಿಂದ ಈ ಬಾಬಿಗೆ ಬರತಕ್ಕ ಸಕಲ ಸಹಾಯ ಗಳನ್ನು ಪಡೆದು ನಮ್ಮ ರಾಜ್ಯದಲ್ಲಿರತಕ್ಕ ಆಕರ್ಷಣೀಯವಾದ ಅದರಲ್ಲೂ ರಮಣೀಯವಾದ, ನೋಡಲಿಕ್ಕೆ ಬಹಳ ಚೆನ್ನಾಗಿರತಕ್ಕ ಚರಿತ್ರಾರ್ಹವಾದ ಸ್ಥಳಗಳಿವೆ, ಅಂತಹ ಸ್ಥಳಗಳಲ್ಲಿ ಟೂರಿಜಂ ಸೆಂಟರ್‌ಗಳನ್ನು ಮಾಡಬೇಕು. ಹೊರಗಡೆಯಿಂದ ಬರತಕ್ಕವರಿಗೆ ಅದು ಒಂದು ಆಕರ್ಷಣೀಯ ವಾಗಿರುತ್ತದೆ. ಅವರಿಂದ ಬೇಕಾದಷ್ಟು ಫಾರೆನ್ ಎಕ್ಸ್‌ಚೇಂಜು ಬರುತ್ತದೆ. ನಮ್ಮ ರಾಜ್ಯದಲ್ಲಿ ಮಹತ್ತಾದ ವಿಷಯಗಳನ್ನು ನೋಡಿಕೊಂಡು ಹೋಗಿ ಅಲ್ಲಿನ ಜನಗಳಿಗೆ ತಿಳಿಸುವುದಕ್ಕೆ ಇದರಿಂದ ಅನುಕೂಲವಾಗುತ್ತದೆ. ಇವತ್ತು ಏನು ಹೊಸದಾಗಿ ಮಾಡಬೇಕಾದರೂ ಕೇಂದ್ರ ಸರ್ಕಾರದ ಸಹಾಯವನ್ನು ಅಪೇಕ್ಷೆ ಮಾಡಲೇ ಬೇಕಾಗುತ್ತದೆ. ರಾಜ್ಯ ಸರ್ಕಾರದವರು ಈ ಬಾಬಿಗೆ ಮತ್ತಷ್ಟು ಹಣ ಸಹಾಯವನ್ನು ಕೇಳಿದರೆ ಖಂಡಿತ ಅಲ್ಲಿಂದ ಬರುತ್ತದೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಅವರಲ್ಲಿ ನಮ್ಮ ಸರ್ಕಾರದವರು ಹೋಗಿ ಈ ಟೂರಿಜಂ ವಿಷಯವಾಗಿ ಮಾತನಾಡುವಾಗ ರಾಜ್ಯದಲ್ಲಿ ಟೂರಿಜಂ ಎಂಬುದನ್ನು ಒಂದು ಬೃಹತ್‌ಸ್ಥಾನಮಾನವಾಗಿ ಬೆಳೆಸಿ ಈ ದೇಶದ ಆರ್ಥಿಕಾಭಿವೃದ್ಧಿಗಾಗಿ ನಮಗೆ ಬರತಕ್ಕ ಕೇಂದ್ರದ ಸಹಾಯ ಸೌಲಭ್ಯಗಳನ್ನು ಪಡೆದು, ಎಲ್ಲ ಪ್ರಯತ್ನಗಳನ್ನು ಕೂಡಲೇ ಮಾಡಬೇಕೆಂದು ಹೇಳುತ್ತೇನೆ. ಆದರೆ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಅವರು ಹೇಳಿದ್ದ ಮಟ್ಟಕ್ಕೆ ನಮ್ಮಲ್ಲಿ ಅಷ್ಟು ಇಂಟೆಲಿಜೆಂಟಾಗಿ ಈ ಟೂರಿಜಂ ಬೆಳೆದಿಲ್ಲ. ಇದರಲ್ಲಿ ಒಬ್ಬ ಐ. ಎ. ಎಸ್. ಆಫೀಸರನ್ನು ಯಾವರೀತಿ ನ್ಯಾಷನಲ್ ಡೆವಲಪ್ ಕೌನ್ಸಿಲ್ ಅವರು ನೇಮಿಸಿದ್ದಾರೆಯೋ ಆ ರೀತಿಯಲ್ಲಿ ಇಲ್ಲಿಯೂ ಮಾಡಬೇಕು. ಈ ಖಾತೆಯನ್ನು ವಹಿಸಿರತಕ್ಕ ಸಚಿವರು ಈ ವಿಚಾರದಲ್ಲಿ ನ್ಯಾಯ ದೊರಕಿಸಿಕೊಡುತ್ತಾರೆಂದು ನಾನು ನಂಬಿದ್ದೇನೆ. ಒಟ್ಟಿನಲ್ಲಿ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ಲನ್ನು ರಿ-ಆರ್ಗನೈಜೇಷನ್ ಮಾಡಬೇಕು. ಅಲ್ಲದೆ ಪೋಲೀಸ್ ಖಾತೆಯನ್ನೂ ಸಹ ರೀ-ಆರ್ಗನೈಜೇಷನ್ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now rise and meet to-morrow at 1 P.M.

The House adjourned at Five Minutes past Six of the Clock to meet again at One of the Clock on Wednesday, the 17th March 1965.